ಮೇದೂರು ಪರಿಸರದ ಪುರಾತತ್ತ್ವ ಅಧ್ಯಯನ

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಕಿರುಪ್ರಬಂಧ)

ಸಂಶೋಧಕರು
ರವಿನಾಯ್ಕ ಎಲ್.ಡಿ.

ಮಾರ್ಗದರ್ಶಕರು
ಡಾ.ವಾಸುದೇವ ಬಡಿಗೇರ
ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೫

ಮೇದೂರು ಪರಿಸರದ ಪುರಾತತ್ವ ಅಧ್ಯಯನ

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಕಿರುಪ್ರಬಂಧ)

ಸಂಶೋಧಕರು
ರವಿನಾಯ್ಕ ಎಲ್.ಡಿ.

ಮಾರ್ಗದರ್ಶಕರು
ಡಾ.ವಾಸುದೇವ ಬಡಿಗೇರ
ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೫

ಮಾರ್ಗದರ್ಶಕರ ದೃಢೀಕರಣ

ಮೇದೂರು ಪರಿಸರದ ಪುರಾತತ್ವ ಅಧ್ಯಯನ ಎಂಬ ಕಿರುಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ **ರವಿನಾಯ್ಕ ಎಲ್.ಡಿ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಕಿರುಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ವಾಸುದೇವ ಬಡಿಗೇರ
ಮಾರ್ಗದರ್ಶಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ: 07-08-2015

ಘೋಷಣಾ ಪತ್ರ

ಮೇದೂರು ಪರಿಸರದ ಪುರಾತತ್ವ ಅಧ್ಯಯನ ಎಂಬ ಕಿರುಪ್ರಬಂಧವನ್ನು **ಡಾ.ವಾಸುದೇವ ಬಡಿಗೇರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿದ್ದೇನೆ. ಈ ಕಿರು ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಗೊಳಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

Ravinaik L D

ರವಿನಾಯ್ಕ ಎಲ್.ಡಿ.
ಸಂಶೋಧಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ: 07-08-2015

ಪರಿವಿಡಿ

ಅಧ್ಯಾಯ ಒಂದು

ಪ್ರಸ್ತಾವನೆ

ಅಧ್ಯಾಯ ಒಂದು

ಪ್ರಸ್ತಾವನೆ

ಒಂದು ಪ್ರದೇಶ ಅಥವಾ ಸ್ಥಳದಲ್ಲಿ ಆದಿಕಾಲದಿಂದ ಇತ್ತೀಚಿನವರೆಗೆ ವಾಸವಾಗಿದ್ದ ಮಾನವರು ಗೊತ್ತಿದ್ದೋ ಗೊತ್ತಿಲ್ಲದೆಯೋ ತಮ್ಮ ಚಟುವಟಿಕೆಗಳಿಗೆ ಸಾಕ್ಷಿಯಾಗಿ ಮೂರ್ತ ಕುರುಹುಗಳನ್ನು ರೂಪಿಸಿದ್ದಾರೆ. ಅವು ಎಷ್ಟೇ ಅಪೂರ್ಣ ಹಾಗೂ ಅಸ್ಪಷ್ಟವಾಗಿದ್ದರೂ ಪ್ರಾಕ್ತನಶಾಸ್ತ್ರಜ್ಞರು ಅವುಗಳಿಂದ ಗತಕಾಲದ ಮಾನವನ ಕುರಿತು ವಿವರಗಳನ್ನು ತಿಳಿಯುವ ಪ್ರಯತ್ನ ಮಾಡುತ್ತಾ ಬಂದಿದ್ದಾರೆ. ಹೀಗೆ ಅವಶೇಷಗಳು ಮಾನವ ಸಂಸ್ಕೃತಿಯ ಬೆಳವಣಿಗೆಯನ್ನು ವಿವರಿಸುವ ಸಾಧನಗಳಾಗಿವೆ.

ಮಾನವ ಸಮಾಜದ ಸಾಂಸ್ಕೃತಿಕ ಪರಂಪರೆಯನ್ನು ಪುನಾರಚಿಸಲು ಮತ್ತು ತಿಳಿಯಲು ಆ ಪ್ರದೇಶದ ಪುರಾತತ್ವ ಕುರುಹುಗಳು ಪ್ರಮುಖ ಪಾತ್ರವಹಿಸುತ್ತವೆ. ಮಾನವನು ತಮ್ಮ ಜೀವನೋಪಾಯಕ್ಕೆ ನಿಸರ್ಗದಲ್ಲಿ ಸಹಜವಾಗಿ ದೊರೆಯುವ ಕಲ್ಲು, ಮರ, ಮೊದಲಾದ ವಸ್ತುಗಳಿಂದ ಉಪಕರಣಗನ್ನು ತಯಾರಿಸಲು ಆರಂಭಿಸಿದನು. ಅವುಗಳ ಹಂತ ಹಂತದ ಬದಲಾವಣೆಗಳನ್ನು ಗಮನಿಸಿದಾಗ ಲಕ್ಷಾಂತರ ವರ್ಷಗಳ ಪ್ರಗತಿಯ ಸ್ಥೂಲ ರೂಪವನ್ನು ತಿಳಿಯಲು ಸಾಧ್ಯವಾಯಿತು.

ಮಾನವನು ಬಳಸಿ ಬಿಟ್ಟುಹೋದ ಪ್ರಾಚೀನ ಕಾಲದ ವಸ್ತುಗಳು ಅಥವಾ ಉದ್ದೇಶಪೂರ್ವಕ ವಾಗಿ ರಚಿಸಿದವುಗಳನ್ನು ಪ್ರಾಚ್ಯವಸ್ತುಗಳೆಂದು ಕರೆಯಲಾಗಿದೆ. ಅದರ ಆಧಾರದ ಮೇಲೆ ಹಿಂದಿನ ಇತಿಹಾಸ ವನ್ನು ತಿಳಿಯುವುದು ಪುರಾತತ್ವಶಾಸ್ತ್ರದ ಗುರಿಯಾಗಿದ್ದು, ಹಳೆಯ ಕಾಲದ ಕಟ್ಟಡ, ದೇವಾಲಯ, ಪ್ರತಿಮೆ, ಮಡಕೆ, ಕಲ್ಲಿನ ಆಯುಧ, ಸಲಕರಣೆ, ಶಾಸನ, ವೀರಗಲ್ಲು, ಸತಿಗಲ್ಲು ನಾಣ್ಯ ಮುಂತಾದವುಗಳು ಪ್ರಾಚ್ಯಾವಶೇಷಗಳಾಗಿವೆ. ಅಲ್ಲದೇ ಇತಿಹಾಸ ರಚನೆಯ ಪ್ರಮುಖ ಆಕರಗಳು ಆಗಿವೆ. ಹಾವೇರಿ ಜಿಲ್ಲೆಯ ತಾಲೂಕುಗಳಲ್ಲಿ ಹಿರೇಕೆರೂರು ಒಂದಾಗಿದ್ದು, ಆ ತಾಲೂಕಿನಲ್ಲಿ ಕಲೆ, ವಾಸ್ತುಶಿಲ್ಪ ಮತ್ತು ಪ್ರಾಗೈತಿಹಾಸಿಕ ನೆಲೆಗಳು ಸಹ ಇತಿಹಾಸದ ಪುಟಗಳಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿವೆ. ಇದಕ್ಕೆ ನಿದರ್ಶನವಾಗಿ ಹಿರೇಕೆರೂರು ತಾಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಗಳು, ಶಿಲ್ಪಗಳು, ಶಾಸನಗಳು ಕಂಡುಬಂದಿವೆ. ಇವುಗಳ ಆಧಾರದಿಂದ

ಈ ತಾಲೂಕಿನ ಸಾಂಸ್ಕೃತಿಕ ಗ್ರಾಮವಾದ ಮೇದೂರು ಪರಿಸರದ ಸಂಪೂರ್ಣ ಚಿತ್ರಣವನ್ನು ತಿಳಿಯಬಹುದಾಗಿದೆ. ಮೇದೂರು ಪರಿಸರದಲ್ಲಿ ಕಂಡುಬರುವ ಪ್ರಾಗೈತಿಹಾಸಿಕ ನೆಲೆಗಳು, ದೇವಾಲಯಗಳು, ಸ್ಮಾರಕ ಶಾಸನಗಳು, ವೀರಗಲ್ಲು, ಮೂರ್ತಿಶಿಲ್ಪ, ಸ್ಥಳೀಯ ಇತಿಹಾಸದ ಪ್ರಮುಖ ಆಕರಗಳಾಗಿವೆ. ಸಮಾಜದ ಅವಿಭಾಜ್ಯ ಅಂಗಗಳಾದ ದೇವಾಲಯ ಗಳು, ಧಾರ್ಮಿಕ ಸಂಸ್ಥೆಗಳಾಗಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿ ಪ್ರಧಾನ ಪಾತ್ರ ವಹಿಸಿವೆ.

ಮೇದೂರು ಪರಿಸರದಲ್ಲಿ ಪ್ರಾಗೈತಿಹಾಸದಿಂದ ಹಿಡಿದು ಪಾಳೇಗಾರರ ಕಾಲದವರೆಗಿನ ಅನೇಕ ಪ್ರಾಚ್ಯಾವಶೇಷಗಳು ದೊರೆಯುತ್ತವೆ. ಮೇದೂರು ಪರಿಸರದ ಗ್ರಾಮಗಳಾದ ತೋಟಗಂಟಿ, ತಡಕನಹಳ್ಳಿ, ಚಿಕ್ಕೆರೂರು ಇವು ಪ್ರಾಗೈತಿಹಾಸದ ನೆಲೆಗಳಾಗಿವೆ ಎಂಬುದಕ್ಕೆ ಸಾಕ್ಷಿಯಾಗಿ ಅನೇಕ ಶಿಲಾಯುಧಗಳು, ಮಡಿಕೆ ಚೂರು, ಬೃಹತ್ ಶಿಲಾಯುಗದ ಗೋರಿಗಳು ದೊರೆತಿವೆ. ಇವು ಮೇದೂರು ಇತಿಹಾಸವನ್ನು ಪ್ರಾಗೈತಿಹಾಸ ಕಾಲಕ್ಕೆ ಕೊಂಡೊಯ್ಯುತ್ತವೆ. ಮೇದೂರು ಗ್ರಾಮದ ಚರಿತ್ರೆಯನ್ನು ತಿಳಿಸುವ ರಾಷ್ಟ್ರಕೂಟರ ಕಾಲದ ಸಣ್ಣ ಬಸವೇಶ್ವರ ಹಾಗೂ ಸರಸ್ವತಿ ದೇವಾಲಯಗಳು ಕಲ್ಯಾಣ ಚಾಲುಕ್ಯರ ಕಾಲದ ಊರ ಬಸವಣ್ಣ ಈಶ್ವರ ಆಂಜನೇಯ (ಮೂಲ ಈಶ್ವರ) ದೇವಾಲಯಗಳು ಮತ್ತು ವಿಜಯನಗರ ಕಾಲದ ದೇವಾಲಯಗಳು ಈ ಗ್ರಾಮದಲ್ಲಿ ಕಂಡುಬರುತ್ತದೆ. ಇವುಗಳ ಕಲೆ ಮತ್ತು ವಾಸ್ತುಶಿಲ್ಪ, ಶಾಸನಗಳು ಹೀಗೆ ಹಲವು ಪ್ರಾಚ್ಯಾವಶೇಷಗಳನ್ನು ಆಧಾರವಾಗಿಟ್ಟುಕೊಂಡು ಈ ಪರಿಸರಕ್ಕೆ ಸಂಬಂಧಿಸಿದ ಆನುಷಂಗಿಕ ಆಕರಗಳನ್ನು ಗಮನಿಸಿ **ಮೇದೂರು ಪರಿಸರದ ಪುರಾತತ್ವ ಅಧ್ಯಯನ** ಎಂಬ ಶೀರ್ಷಿಕೆಯಡಿಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ.

ಇದುವರೆಗೆ ನಡೆದಿರುವ ಅಧ್ಯಯನದ ಸಮೀಕ್ಷೆ

ನಾವು ಅಧ್ಯಯನಕ್ಕೆಂದು ಯಾವುದೇ ಒಂದು ವಿಷಯವನ್ನು ತೆಗೆದುಕೊಂಡಾಗ ಮೊದಲು ಮಾಡಬೇಕಾದಂತಹ ಪ್ರಮುಖ ಕೆಲಸವೆಂದರೆ ಇದುವರೆಗೂ ಆ ವಿಷಯದ ಬಗೆಗೆ ನಡೆದಿರಬಹುದಾದ ಅಧ್ಯಯನಗಳನ್ನು ತಿಳಿಯಬೇಕಾಗುತ್ತದೆ. ಈ ದೃಷ್ಟಿಯಿಂದ ಮೇದೂರು ಪರಿಸರಕ್ಕೆ ಸಂಬಂಧಿಸಿದಂತೆ ಇಲ್ಲಿಯವರಗೆ ನಡೆದ ಅಧ್ಯಯನಗಳನ್ನು ಈ ಕೆಳಕಂಡಂತೆ ಸಮೀಕ್ಷಿಸಲಾಗಿದೆ.

೧. ಚಿದಾನಂದಮೂರ್ತಿ ಎಂ., ೨೦೦೨, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸ್ವಪ್ನ ಬುಕ್‌ಹೌಸ್, ಬೆಂಗಳೂರು. ಈ ಕೃತಿಯಲ್ಲಿ ನಾಲ್ಕನೇ ಶತಮಾನದಿಂದ ೧೧ನೇ ಶತಮಾನದ ವರಗಿನ ಶಾಸನಗಳ ಕುರಿತು ಅಧ್ಯಯನ ಮಾಡಲಾಗಿದೆ. ಅವುಗಳಲ್ಲಿ ಹಿರೇಕೆರೂರು ತಾಲೂಕಿನ ಕೆಲವು ಶಾಸನಗಳಿದ್ದು, ಮೇದೂರು ಶಾಸನಗಳನ್ನು ಬಳಸಿಕೊಂಡಿಲ್ಲ.

೨. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಈ ಪುಸ್ತಕದಲ್ಲಿ ಹಿರೇಕೆರೂರು ತಾಲೂಕಿನಲ್ಲಿ ಕಂಡುಬರುವ ಪ್ರಾಗೈತಿಹಾಸ ನೆಲೆಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ.

[illegible]

೩. ಹಿರಿಯಣ್ಣ ಅಂಬಳಿಕೆ(ಸಂ), ೨೦೦೯, ಇತಿಹಾಸ ಮತ್ತು ಪುರಾತತ್ವ ಕನ್ನಡ ವಿಷಯ ವಿಶ್ವಕೋಶ, ಮೈಸೂರು ವಿಶ್ವವಿದ್ಯಾನಿಲಯ. ಈ ಕೃತಿಯಲ್ಲಿ ಇತಿಹಾಸ ಮತ್ತು ಪುರಾತತ್ವಕ್ಕೆ ಸಂಬಂಧಿಸಿದಂತೆ ವಿಸ್ತಾರವಾದ ಅಧ್ಯಯನ ನಡೆದಿರುವುದು ಕಂಡುಬರುತ್ತದೆ. ಇದರಲ್ಲಿ ವಿವಿಧ ಅರಸುಮನೆತನಗಳು, ಪಾಳೆಯಗಾರರು ವಿವಿಧ ಪ್ರದೇಶಗಳ ಬಗೆಗೆ ಉಲ್ಲೇಖಿಸಲಾಗಿದೆ. ಆದರೆ ಇದರಲ್ಲಿ ಈ ಮೇದೂರು ಪರಿಸರದ ಬಗೆಗೆ ಅಲ್ಪ ಮಾಹಿತಿ ಇರುವುದು ಕಂಡುಬರುತ್ತದೆ.

೪. ಮಹದೇವ, ಸಿ. ವಾಸುದೇವನ್, ಸಿ.ಎಸ್, ರಮೇಶ್ ನಾಯಕ, ೧೯೯೯, ಕರ್ನಾಟಕ ದೇವಾಲಯ ಕೋಶ: ಹಾವೇರಿ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಈ ಕೃತಿಯಲ್ಲಿ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿಗೆ ಸಂಬಂಧ ಪಟ್ಟಂತಹ ದೇವಾಲಯಗಳ ಮಾಹಿತಿ ಒಳಗೊಂಡಿವೆ.

೫. ಸೂರ್ಯನಾಥ ಯು. ಕಾಮತ್, ೧೯೯೬, ಕರ್ನಾಟಕ ಗ್ಯಾಸೆಟಿಯರ್ ಧಾರವಾಡ ಜಿಲ್ಲೆ ಈ ಕೃತಿಯಲ್ಲಿ ಮೇದೂರು ಪರಿಸರದಲ್ಲಿ ಕಂಡುಬರುವ ದೇವಾಲಯಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡಲಾಗಿದೆ.

೬. ಷಡಕ್ಷರಯ್ಯ ಆರ್. ಎಂ., ೧೯೯೫, ಧಾರವಾಡ ಜಿಲ್ಲೆಯಲ್ಲಿ ಕಂಡುಬಂದ ಕ್ರಿ.ಶ.೧೦ನೇ ಶತಮಾನದವರಿಗಿನ ದೇವಾಲಯ ಶಿಲ್ಪಗಳು ಎಂಬ ಲೇಖನ ಇತಿಹಾಸ ದರ್ಶನದಲ್ಲಿ ಪ್ರಕಟವಾಗಿದೆ. ಇದರಲ್ಲಿ ಮೇದೂರು ಸ್ಥಳದಲ್ಲಿ ಕಂಡುಬರುವ ದೇವಾಲಯ ಶಿಲ್ಪಗಳ ಬಗೆಗೆ ಮಾಹಿತಿಯನ್ನು ನೀಡಲಾಗಿದೆ.

೭. ಭೋಜರಾಜ್ ಪಾಟೀಲ್, ೧೯೮೭, ಹಿರೇಕೆರೂರು ತಾಲೂಕ್ ದರ್ಶನ ಎಂಬ ಕೃತಿಯಲ್ಲಿ ಹಿರೇಕೆರೂರಿನಲ್ಲಿ ಬರುವ ಗ್ರಾಮಗಳ ಮಾಹಿತಿಯನ್ನು ನೀಡಲಾಗಿದೆ.

೮. ತಳವಾರ ಹ.ಮು. ೧೯೯೭, ಹಿರೇಕೆರೂರು ತಾಲೂಕಿನ ಭೂಗೋಳ, ಈ ಪುಸ್ತಕ ಹಿರೇಕೆರೂರು ತಾಲೂಕಿನ ಭೌಗೋಳಿಕ ಮಾಹಿತಿಯನ್ನು ಒಳಗೊಂಡಿದೆ.

೯. ಕರ್ನಾಟಕ ಶಾಸನಗಳು ಸಂ ೬, ಕನ್ನಡ ಸಂಶೋಧನಾ ಸಂಸ್ಥೆ, ಧಾರವಾಡ. ಈ ಸಂಪುಟದಲ್ಲಿ ಮೇದೂರು ಪರಿಸರಕ್ಕೆ ಸಂಬಂಧಿಸಿದಂತೆ ಶಾಸನಗಳು ಪ್ರಕಟವಾಗಿವೆ.

ಮೇದೂರು ಪರಿಸರಕ್ಕೆ ಸಂಬಂಧಿಸಿದಂತೆ ವಿವಿಧ ಲೇಖನಗಳು, ಕೃತಿಗಳು ಪ್ರಕಟಗೊಂಡಿವೆ. ಇವುಗಳ ಅಧ್ಯಯನದಿಂದ ಮೇದೂರು ಪರಿಸರ ಬಗೆಗಿನ ಮಾಹಿತಿಯನ್ನು ತಿಳಿಯಬಹುದಾಗಿದೆ. ಅದರೆ ಈ ಪ್ರದೇಶದ ಬಗೆಗೆ ಸಂಕೀರ್ಣ ಅಧ್ಯಯನಗಳು ನಡೆಯದೆ ಇರುವುದನ್ನು ಕಾಣಬಹುದಾಗಿದೆ. ಆದುದರಿಂದ ಸಂಶೋಧನಾ ವಿಷಯವಾಗಿ ಮೇದೂರು ಪರಿಸರದ ಪುರಾತತ್ವ ಅಧ್ಯಯನವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದು ಸವಿಸ್ತಾರವಾದ ಅಧ್ಯಯನಕ್ಕೆ ಸಾಧ್ಯತೆಯನ್ನೊದಗಿಸುತ್ತದೆ.

ಅಧ್ಯಯನದ ಉದ್ದೇಶ

ಇತಿಹಾಸ ಪುನಾರಚನೆಗೆ ಸಹಾಯಕವಾಗುವ ಐತಿಹಾಸಿಕ ದೇವಾಲಯಗಳು, ಶಾಸನಗಳು, ಸ್ಮಾರಕ ಶಿಲ್ಪಗಳು, ಪ್ರಾಗೈತಿಹಾಸಿಕ ನೆಲೆಗಳು, ಮುಂತಾದವು ಮಹತ್ವದ ಅಂಶಗಳನ್ನು ಒದಗಿಸುವ ಆಕರಗಳಾಗಿವೆ. ಇಂತಹ ಐತಿಹಾಸಿಕ ಪ್ರಾಚ್ಯಾವಶೇಷಗಳನ್ನು ಒಳಗೊಂಡಿರುವ ಮೇದೂರು, ತೋಟಗಂಟಿ, ತಡಕನಹಳ್ಳಿ ಗ್ರಾಮಗಳ ಬಗ್ಗೆ ಒಂದು ಕಿರುಸಂಶೋಧನಾ ಪ್ರಬಂಧವನ್ನು ರಚಿಸಲಾಗಿದ್ದು, ಪ್ರಸ್ತುತ ಅಧ್ಯಯನವು ಈ ಕೆಳಕಂಡ ಉದ್ದೇಶಗಳನ್ನು ಒಳಗೊಂಡಿದೆ.

* ಇತಿಹಾಸದಲ್ಲಿ ಮೇದೂರು ಪ್ರಾಮುಖ್ಯತೆಯ ಬಗೆಗೆ ಅರಿಯುವುದು.
* ಮೇದೂರು ಸ್ಥಳನಾಮದ ಬಗೆಗೆ ತಿಳಿಯುವುದು.
* ಮೇದೂರು ಭೌಗೋಳಿಕ ನೆಲೆಯ ಬಗೆಗೆ ತಿಳಿಯಲಾಗುವುದು.
* ಮೇದೂರು ಪರಿಸರದ ಪ್ರಾಗೈತಿಹಾಸಿಕ ನೆಲೆಗಳ ಕುರಿತು ತಿಳಿಯುವುದು.
* ಮೇದೂರಿನಲ್ಲಿ ಕಂಡುಬರುವ ದೇವಾಲಯ, ಶಾಸನಗಳು, ವೀರಗಲ್ಲುಗಳ ಬಗೆಗೆ ತಿಳಿಯುವುದು.

ಒಟ್ಟಾರೆಯಾಗಿ ಮೇದೂರು ಪರಿಸರ ಪುರಾತತ್ವ, ಐತಿಹಾಸಿಕ ಸ್ಥಳವಾಗಿದ್ದು, ಇಲ್ಲಿ ಪ್ರಾಗಿತಿಹಾಸ ಕಾಲದ ಅವಶೇಷಗಳು ಮತ್ತು ದೇವಾಲಯ, ಮೂರ್ತಿಶಿಲ್ಪ, ಶಿಲಾಶಾಸನ ಮೊದಲಾದವು ಕಂಡುಬರುತ್ತವೆ. ಅವುಗಳ ಅಧ್ಯಯನದ ಮೂಲಕ ಮೇದೂರು ಸುತ್ತಮುತ್ತಲಿನ ಪ್ರದೇಶದ ಇತಿಹಾಸವನ್ನು ಕಟ್ಟಿಕೊಡುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಅಧ್ಯಯನದ ಮಹತ್ವ

ಮೇದೂರು ಹಿರೇಕೆರೂರು ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಒಂದು ಗ್ರಾಮ. ಇಲ್ಲಿಯ ಪರಿಸರವು ಪ್ರಾಗೈತಿಹಾಸ ಕಾಲದಿಂದ ಹಿಡಿದು ಅರಸುಮನೆತನ ಮತ್ತು ಪಾಳೆಯಗಾರರ ಕಾಲದವರೆಗೂ ಮಹತ್ವವನ್ನು ಪಡೆದಂತಹ ಪ್ರದೇಶವಾಗಿದೆ. ಈ ಪರಿಸರದ ತಡಕನಹಳ್ಳಿ ತಾಮ್ರಶಿಲಾಯುಗ ಮತ್ತು ಬೃಹತ್ ಶಿಲಾಯುಗದ ನೆಲೆಯಾಗಿದೆ. ಅಲ್ಲದೇ ತೋಟಗಂಟಿಯಲ್ಲಿ ಆದಿ ಹಳೆಶಿಲಾಯುಗ ಮತ್ತು ಮಧ್ಯ ಹಳೆಶಿಲಾಯುಗದ ಉಪಕರಣಗಳು ದೊರೆತಿವೆ. ಇತಿಹಾಸ ಕಾಲಕ್ಕೆ ಸಂಬಂಧಪಟ್ಟಂತೆ ರಾಷ್ಟ್ರಕೂಟರಿಂದ ಹಿಡಿದು ಪಾಳೆಯಗಾರರ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿದೆ. ಈ ಪ್ರದೇಶದ ಇತಿಹಾಸ ಮತ್ತು ಪುರಾತತ್ವದ ಕುರಿತು ಕೆಲವು ಸಂಶೋಧನೆಗಳು ನಡೆದಿವೆ. ಕೆಲವು ಲೇಖನಗಳು ಸಂಚಿಕೆ ಹಾಗೂ ಪತ್ರಿಕೆಗಳಲ್ಲಿ ಪ್ರಕಟವಾಗಿ ಇಲ್ಲಿಯ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ. ಆದರೂ ಮೇದೂರು ಪರಿಸರದ ಪುರಾತತ್ವ ಅವಶೇಷಗಳ ಬಗ್ಗೆ ಸಮಗ್ರ ಅಧ್ಯಯನ ನಡೆದಿಲ್ಲ. ಆದುದರಿಂದ ಈ ಕಿರು ಸಂಶೋಧನಾ ಪ್ರಬಂಧವು ಮೇದೂರು ಪರಿಸಂದಲ್ಲಿ ಕಂಡುಬರುವ

ತೋಟಗಂಟಿ, ತಡಕನಹಳ್ಳಿ, ಚಿಕ್ಕೆರೂರು ಗ್ರಾಮಗಳ ಪ್ರಾಚ್ಯಾವಶೇಷಗಳಿಗೆ ಮಾತ್ರ ಮಹತ್ವವನ್ನು ಪಡೆದುಕೊಂಡಿದೆ. ಇಲ್ಲಿ ಕಂಡುಬರುವ ಪುರಾತತ್ವಾವಶೇಷಗಳ ಅಧ್ಯಯನ ನಡೆಸಿ ಪ್ರಸ್ತುತ ಪ್ರಬಂಧವನ್ನು ರಚಿಸಲಾಗಿದೆ.

ಅಧ್ಯಯನದ ವ್ಯಾಪ್ತಿ

ಸಾಮಾನ್ಯವಾಗಿ ಯಾವುದೇ ಒಂದು ಸಂಶೋಧನೆ ಸ್ಪಷ್ಟವಾಗಿ ಯಶಸ್ವಿಯಾಗಬೇಕಾದರೆ ಅದಕ್ಕೆ ಒಂದು ನಿರ್ದಿಷ್ಟವಾದ ಚೌಕಟ್ಟು ಅಂದರೆ ವ್ಯಾಪ್ತಿ ಇರುವುದು ಅತಿ ಮುಖ್ಯವಾದುದು. ಪ್ರಸ್ತುತ ಅಧ್ಯಯನದ ಶೀರ್ಷಿಕೆಯೇ ಸೂಚಿಸುವಂತೆ ಮೇದೂರು ಪರಿಸರಕ್ಕೆ ಮಾತ್ರ ಸೀಮಿತವಾಗಿದೆ. ಆದರೂ ಸಹ ಅವಶ್ಯಕತೆಗನುಗುಣವಾಗಿ ಈ ಪ್ರದೇಶದ ಸುತ್ತಮುತ್ತಲಿನ ಪುರಾತತ್ವ ಕುರುಹುಗಳನ್ನು ಪ್ರಾಸಂಗಿಕವಾಗಿ ಗಮನಿಸಲಾಗಿದೆ. ಮೇದೂರು ಪರಿಸರದಲ್ಲಿಯ ಗ್ರಾಮಗಳಾದ ತೋಟಗಂಟಿ, ತಡಕನಹಳ್ಳಿ, ಚಿಕ್ಕೆರೂರು, ಪುರದಕೆರೆ, ಅಣಜಿ ಈ ಪರಿಸರದ ಅವಶೇಷಗಳನ್ನು ಗಮನದಲ್ಲಿಟ್ಟುಕೊಂಡು ಪ್ರಾಗಿತಿಹಾಸದಿಂದ ವಿಜಯನಗರ ಅರಸು ಮನೆತನದ ಕೊನೆಯ ಕಾಲಾವಧಿಯನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಕೆಲವು ಆಕರಗಳನ್ನು ಅಳವಡಿಸಿಕೊಳ್ಳಲಾಗುತ್ತದೆ. ಮೇದೂರು ಪರಿಸರ ಇತಿಹಾಸಕಾಲಕ್ಕೆ ಸಂಬಂಧಿಸಿದಂತೆ ಹಲವಾರು ಮೂಲಾಧಾರಗಳು ದೊರಕಿವೆ. ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿರುವ ವಿಧಾನವನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

* ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಣೆ.
* ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಣೆ.
* ಛಾಯಾಚಿತ್ರಗಳನ್ನು ಸಂಗ್ರಹಿಸುವುದು.
* ದಾಖಲೆಯ ಅವಶೇಷಗಳ ಮೂಲಕ ಟಿಪ್ಪಣಿಯನ್ನು ರಚಿಸಿಕೊಳ್ಳುವುದು.

ಈ ಎಲ್ಲಾ ಮಾಹಿತಿಗಳ ಆಧಾರದ ಮೇಲೆ ವಿಷಯಗಳನ್ನು ಕಾಲಾನುಕ್ರಮದಲ್ಲಿ ಜೋಡಿಸುವುದು, ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಆಕರಗಳನ್ನು ವಿಮರ್ಶಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಸಂಶೋಧನಾ ವಿಷಯವನ್ನು ಅಧ್ಯಯನದ ಅನುಕೂಲಕ್ಕಾಗಿ ಐದು ಅಧ್ಯಾಯಗಳಾಗಿ ವಿಭಾಗಿಸಲಾಗಿದೆ. ಈ ಅಧ್ಯಾಯಗಳಲ್ಲಿ ಉಪಶೀರ್ಷಿಕೆಗಳಿದ್ದು, ಅವು ಮೇದೂರು ಪರಿಸರದ ಪುರಾತತ್ವಗಳನ್ನು ಕುರಿತಾಗಿವೆ.

ಅಧ್ಯಾಯ ಒಂದರಲ್ಲಿ ಪ್ರಸ್ತುತ ಅಧ್ಯಯನದ ಮಹತ್ವ, ಸ್ವರೂಪ ಹಾಗೂ ಅಧ್ಯಯನದ ವಿಧಿ ವಿಧಾನಗಳನ್ನು ಚರ್ಚಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಮೇದೂರು ಪರಿಸರದ ಭೌಗೋಳಿಕ ಹಿನ್ನಲೆ ಮತ್ತು ಪ್ರಾಗೈತಿಹಾಸಿಕ ಕಾಲದ ನೆಲೆಗಳು ಇತಿಹಾಸ ಕಾಲ ಮತ್ತು ಸ್ಥಳನಾಮದ ಬಗೆಗಿನ ಸವಿಸ್ತಾರವಾದ ವಿವರಣೆಯನ್ನು ಕಾಣಬಹುದಾಗಿದೆ.

ಮೂರನೇ ಅಧ್ಯಾಯದಲ್ಲಿ ಮೇದೂರು ಪರಿಸರದ ಪುರಾತತ್ವ ಪ್ರಾಚ್ಯಾವಶೇಷಗಳ ವಿಶ್ಲೇಷಣೆ ಯನ್ನು ಕಾಣಬಹುದು. ಹಾಗೂ ಈ ಗ್ರಾಮ ಪರಿಸರದಲ್ಲಿಯ ಪುರಾತನ ದೇವಾಲಯ, ಮೂರ್ತಿಶಿಲ್ಪ ಮುಂತಾದವುಗಳನ್ನು ಅಧ್ಯಯನಕ್ಕೆ ಒಳಪಡಿಸಲಾದೆ.

ನಾಲ್ಕನೇ ಅಧ್ಯಾಯದಲ್ಲಿ ಶಾಸನಗಳು ಹಾಗೂ ಧಾರ್ಮಿಕ, ಸಾಮಾಜಿಕ, ಆರ್ಥಿಕ, ವಿಷಯಗಳ ಬಗ್ಗೆ ಅಧ್ಯಯ ಮಾಡಲಾಗಿದೆ.

ಐದನೇ ಅಧ್ಯಾಯವು ಸಮಾರೋಪದ ಭಾಗವಾಗಿದ್ದು, ಅದರಲ್ಲಿ ಅಧ್ಯಯನಕ್ಕೆ ಸಂಬಂಧಿಸಿದ ಅನುಬಂಧಗಳು, ಛಾಯಾಚಿತ್ರಗಳು ಹಾಗೂ ಆಧಾರ ಗ್ರಂಥಗಳ ಪಟ್ಟಿಗಳನ್ನು ನೀಡಲಾಗಿದೆ. ಇದರಲ್ಲಿ ಮೇದೂರು ಪರಿಸರದ ಪುರಾತತ್ವ ಅಧ್ಯಯನ ಎಂಬ ಶೀರ್ಷಿಕೆಯ ಅಡಿಯಲ್ಲಿ ನಡೆಸಿದ ಸಂಶೋಧನೆಯ ಪರಿಣಾಮವಾಗಿ ಕಂಡುಕೊಂಡ ಅಧ್ಯಯನದ ಫಲಿತಗಳನ್ನು ವಿವೇಚಿಸಲಾಗಿದೆ. ಇದೆ ಸಂದರ್ಭದಲ್ಲಿ ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗುವುದಿದ್ದು ದೇವಾಲಯಗಳು ಮತ್ತು ಶಾಸನಗಳು ಕೇವಲ ದಾಖಲೆಗಳಾಗಿ ಮಾತ್ರವಲ್ಲದೆ ಅದಕ್ಕಿಂತ ಇತರ ಮಹತ್ವಗಳನ್ನು ಒಳಗೊಂಡಿದೆಯೇ ಎಂಬುದನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಹೀಗೆ ಸಂಪ್ರಬಂಧವು ಹೋಸ ಹೋಸ ವಿಷಯಗಳ ಅಧ್ಯಯನದಿಂದ ಮಹತ್ವ ಪಡೆದುಕೊಳ್ಳುತ್ತದೆ.

ಅಧ್ಯಾಯ ಎರಡು

ಭೌಗೋಳಿಕ ಮತ್ತು ಪ್ರಾಗೈತಿಹಾಸಿಕ ಹಿನ್ನೆಲೆ

ಅಧ್ಯಾಯ ಎರಡು

ಭೌಗೋಳಿಕತೆ ಮತ್ತು ಐತಿಹಾಸಿಕ ಹಿನ್ನೆಲೆ

೨.೧. ಭೌಗೋಳಿಕತೆ

ಒಂದು ಸ್ಥಳದ ಅಥವಾ ಪರಿಸರದ ಪ್ರಾಕೃತಿಕ ಲಕ್ಷಣಗಳು ಆ ಪ್ರದೇಶದ ಜನರ ಬದುಕನ್ನು ರೂಪಿಸುವುದರಲ್ಲಿ ಮತ್ತು ಅಲ್ಲಿನ ಜನತೆಯ ಸಂಸ್ಕೃತಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅಲ್ಲಿಯ ನೆಲ, ಜಲ, ಅರಣ್ಯ, ಹವಾಮಾನ, ಮುಂತಾದವುಗಳೊಂದಿಗೆ ಮಾನವ ಅವಿನಾಭಾವಿ, ಸಂಬಂಧವನ್ನು ಪಡೆದು ಕೊಂಡಿರುತ್ತಾನೆ. ಅಲ್ಲಿಯ ಜನರ ಬದುಕು ಹಾಗೂ ಸಂಸ್ಕೃತಿಗಳ ಮೇಲೆ ಪ್ರಮುಖ ಪಾತ್ರ ವಹಿಸುತ್ತವೆ. ಒಂದು ಸ್ಥಳದ ಹವಾಗುಣ, ಬಾಹ್ಯ ಪರಿಸರದ ಪ್ರಭಾವದಿಂದಾಗಿ ರೂಪಿತವಾದ ಜೀವನವಿಧಾನ, ಉಂಟಾಗುವ ಮನಸ್ಥಿತಿ, ಗ್ರಹಿಕೆ, ಸಂವೇದನೆ, ಅಭಿರುಚಿಗಳು ವಿಭಿನ್ನವಾಗಿರುತ್ತವೆ.

ಪ್ರಾದೇಸಿಕ ವಿಭಿನ್ನತೆ ಭೌಗೋಳಿಕ, ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗಳಿಗೆ ಸ್ಪಂದಿಸುತ್ತಾ ಭಿನ್ನವಾದ ವೈಶಿಷ್ಟ್ಯವನ್ನು ಉಂಟು ಮಾಡುತ್ತದೆ. ಈ ಪರಿಣಾಮದಿಂದಾಗಿ ಒಂದು ಪ್ರದೇಶದ ಸಂಸ್ಕೃತಿಯು ಮತ್ತೊಂದಕ್ಕಿಂತ ಭಿನ್ನತೆಯನ್ನು ಪಡೆದಿರು ತ್ತವೆ. ಉಡುಗೆ–ತೊಡುಗೆ, ಭಾಷಾಶೈಲಿ, ಧಾರ್ಮಿಕ ನಂಬಿಕೆಗಳು, ಆಹಾರಾಭ್ಯಾಸ ಮುಂತಾದ ಅಂಶಗಳಲ್ಲಿ ಪ್ರಾದೇಶಿಕ ಭಿನ್ನತೆ ಇರುತ್ತದೆ.

ಭೌಗೋಳಿಕ ವ್ಯತ್ಯಾಸಗಳಿಂದ ಮಾನವನ ದೈಹಿಕ ರಚನೆಯಲ್ಲಿ ಅಂತರ ಕಂಡುಬರುತ್ತದೆ. ಬೆಟ್ಟಗುಡ್ಡಗಳ ಮೇಲೆ ವಾಸ ಮಾಡುವ ಜನರ ದೈಹಿಕ ಸ್ವರೂಪ, ಸ್ವಭಾವ ಮತ್ತು ಬಯಲು ಸೀಮೆಯಲ್ಲಿ ವಾಸ ಮಾಡುವ ಜನರ ಸ್ವರೂಪಕ್ಕಿಂತ ಭಿನ್ನವಾಗಿರುತ್ತವೆ. ಬೆಟ್ಟಗುಡ್ಡಗಳಲ್ಲಿ ವಾಸ ಮಾಡುವ ಜನಸಮುದಾಯಗಳು ಅಮ್ಲಜನಕದ ಕೊರತೆಯನ್ನು ಅನುಭವಿಸುವುದರಿಂದ ಶ್ವಾಸಕೋಶದ ತೊಂದರೆಗಳು ಆಗಾಗ್ಗೆ ಕಂಡುಬರುತ್ತವೆ.[೧]

ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ವ್ಯಾಪ್ತಿಗೆ ಸೇರಿದ ಮೇದೂರು ಹಾವೇರಿ ಜಿಲ್ಲೆಯಾಗುವ ಮುಂಚೆ ಧಾರವಾಡ ಜಿಲ್ಲೆಯ ವ್ಯಾಪ್ತಿಗೆ ಸೇರಿತ್ತು. ಧಾರವಾಡ ಜಿಲ್ಲೆಯ ವ್ಯಾಪ್ತಿ

ವಿಸ್ತಾರವಾಗಿದ್ದ ಕಾರಣ ಅಭಿವೃದ್ಧಿ ಮತ್ತು ಆಡಳಿತದ ದೃಷ್ಟಿಯಿಂದ ಕೆಲವು ತಾಲೂಕುಗಳನ್ನು ಸೇರಿಸಿ ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಲಾಯಿತು.

ಹಾವೇರಿ ಜಿಲ್ಲೆಯ ಏಳು ತಾಲೂಕುಗಳಲ್ಲಿ ಹಿರೇಕೆರೂರು ತಾಲೂಕು ಒಂದಾಗಿದೆ. ಈ ತಾಲೂಕಿನಲ್ಲಿ ೧೭೯ ಗ್ರಾಮಗಳಿವೆ. ತಾಲೂಕಿನ ವಿಸ್ತೀರ್ಣ ೮೦೧.೬ ಚದರ ಕಿ.ಮೀ. ಇಲ್ಲಿನ ಜನಸಂಖ್ಯೆ ೨,೧೨,೪೫೮. ಹಿರೇಕೆರೂರು ತಾಲೂಕಿನ ಉತ್ತರದಲ್ಲಿ ಬ್ಯಾಡಗಿ, ಪೂರ್ವದಲ್ಲಿ ರಾಣಿಬೆನ್ನೂರು ಮತ್ತು ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕು, ಪಶ್ಚಿಮ–ದಕ್ಷಿಣದಲ್ಲಿ ಶಿವಮೊಗ್ಗ ಜಿಲ್ಲೆಯ ಸೊರಬ, ಶಿಕಾರಿಪುರ, ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲೂಕುಗಳು ಸುತ್ತುವರಿದಿವೆ. ಮೇದೂರು ಪ್ರದೇಶವು ಹಿರೇಕೆರೂರಿನಿಂದ ದಕ್ಷಿಣಕ್ಕೆ ೨೦ ಕಿ.ಮೀ.ದೂರದಲ್ಲಿದೆ. ಈ ಮೇದೂರು ಪ್ರದೇಶವು ಸಮುದ್ರಮಟ್ಟದಿಂದ ೬೦೪.೯ ಮೀಟರ್ ಎತ್ತರದಲ್ಲಿದ್ದು ಪೂರ್ವ ರೇಖಾಂಶ ೧೪.೨೨, ಉತ್ತರ ೭೫.೨೪ ಅಕ್ಷಾಂಶದಲ್ಲಿದೆ. ಇದರ ಭೌಗೋಳಿಕ ಕ್ಷೇತ್ರ ೮೦೬ ಚ.ಕಿ.ಮೀ ವಿಸ್ತಾರ ಒಳಗೊಂಡಿದೆ. ಈ ತಾಲೂಕು ಮೂರು ಹೋಬಳಿಗಳನ್ನು ಹೊಂದಿದೆ. ಮೇದೂರು ಪ್ರದೇಶವು ರಟ್ಟೆಹಳ್ಳಿ ಹೋಬಳಿಗೆ ಸೇರಿದ ಪ್ರದೇಶವಾಗಿದೆ. ಈ ಪ್ರದೇಶವು ಪ್ರಾಗೈತಿಹಾಸಿಕ ನೆಲೆಗಳನ್ನು ಒಳಗೊಂಡಿರುವ ಪರಿಸರವಾಗಿದೆ.[೨]

ಹಾವೇರಿ ಜಿಲ್ಲೆಯ ದಕ್ಷಿಣ ಕೊನೆಯಲ್ಲಿರುವ ಹಿರೇಕೆರೂರು ತಾಲೂಕು ಸಹ್ಯಾದ್ರಿ ವಲಯ, ಪೂರ್ವ ಪ್ರದೇಶಕ್ಕೆ ಸೇರಿದ್ದು. ಸಾಮಾನ್ಯ ಬೆಟ್ಟಗುಡ್ಡಗಳಿಂದ ಕೂಡಿದೆ. ಇದರಲ್ಲಿ ಮಾಸೂರು ಮತ್ತು ಹಳ್ಳೂರು ಗುಡ್ಡಗಳು ಮುಖ್ಯವಾದವು. ಈ ಪ್ರದೇಶ ಗಂಧದ ಮರಗಳಿಂದ ಕೂಡಿದೆ. ಕೆಲವು ಕಡೆ ಕುರುಚಲು ಅರಣ್ಯಪ್ರದೇಶವಿದೆ. ತುಂಗಭದ್ರಾ ಈ ತಾಲೂಕಿನ ಮುಖ್ಯನದಿಯಾಗಿದ್ದು, ಪೂರ್ವ ಅಂಚಿನಲ್ಲಿ ಗಡಿಯಾಗಿ ಹರಿದು ಹೊನ್ನಾಳಿ ಮತ್ತು ಹರಿಹರ ತಾಲೂಕುಗಳನ್ನು ಬೇರ್ಪಡಿಸಿದೆ.

ಸಾಕಷ್ಟು ಮಳೆ ಬೀಳುವ ಈ ಪ್ರದೇಶದ ಹವಾಗುಣ ಹಿತಕರವಾಗಿದೆ. ನದಿಯ ಎಡದಂಡೆ ಉದ್ದಕ್ಕೂ ರೇವೆ ಮಣ್ಣಿನ ಪ್ರದೇಶ ಆವರಿಸಿಕೊಂಡಿದೆ. ತಾಲೂಕಿನ ದಕ್ಷಿಣ ಮತ್ತು ಪೂರ್ವ ಪ್ರದೇಶ ಕೆಂಪು ಮತ್ತು ಕಪ್ಪು ಮಿಶ್ರಿತ ಮಣ್ಣಿನಿಂದ ಕೂಡಿದೆ. ಇದು ಕೃಷಿಗೆ ಫಲವತ್ತಾದ ಪ್ರದೇಶ ಮಾತ್ರವಲ್ಲದೆ ಹಿರೇಕೆರೂರು ತಾಲೂಕಿನ ಚಿಕ್ಕೆರೂರು, ಮಗದ ಕೆರೆಯ ನಾಲೆ ಮತ್ತು ಬಾವಿಗಳಿಂದ ವ್ಯವಸಾಯಕ್ಕೆ ನೀರನ್ನು ಕಲ್ಪಿಸಲಾಗಿದೆ.

೨.೨. ಐತಿಹಾಸಿಕ ಹಿನ್ನೆಲೆ

ಒಂದು ಪ್ರದೇಶದ ಐತಿಹಾಸಿಕ ಮಹತ್ವವನ್ನು ಆ ಪ್ರದೇಶದಲ್ಲಿ ದೊರೆಯುವ ಹಲವಾರು ಅವಶೇಷಗಳಿಂದ ತಿಳಿಯಬಹುದಾಗಿದೆ. ಇಂತಹ ಅವಶೇಷಗಳು ಇತಿಹಾಸವನ್ನು ರಚಿಸಲು ಸಹಾಯಕವಾಗಿವೆ. ಇತಿಹಾಸವನ್ನು ಪ್ರಾಗಿತಿಹಾಸ ಮತ್ತು ಇತಿಹಾಸ ಕಾಲ ಎಂಬುದಾಗಿ ವಿಭಾಗಿಸಲಾಗಿದೆ. ಪ್ರಾಗಿತಿಹಾಸ ಕಾಲದ ಮಾನವರ ಜೀವನದ ಆರಂಭವು ಕುತೂಹಲಕರವಾಗಿದೆ.

ಈ ಕಾಲಮಾನದಲ್ಲಿ ಮಾನವರಿಗೆ ಓದು ಬರಹದ ಅಥವಾ ಅಕ್ಷರದ ಜ್ಞಾನವಿರಲಿಲ್ಲ. ಸ್ವೇಚ್ಛಾ ಜೀವಿಯಾಗಿ ತಮ್ಮ ಮನಬಂದಂತೆ ಜೀವನ ಸಾಗಿಸುತ್ತಿದ್ದರು. ತಮ್ಮ ಆಹಾರವನ್ನು ಬೇಟೆಯಾಡಿ ಪಡೆದುಕೊಳ್ಳುತ್ತಿದ್ದರು. ಬೇಟೆಯಾಡಲು ಕಲ್ಲಿನ ಆಯುಧಗಳನ್ನು ಬಳಸುತ್ತಿದ್ದರು. ಇಂತಹ ಉಪಕರಣಗಳನ್ನು ತಯಾರಿಸಿಕೊಳ್ಳಲು ಕಲ್ಲಿನ ಮಾದರಿಗಳ ಆಯ್ಕೆ, ಅವುಗಳ ರೂಪಣಾ ವಿಧಾನ, ಬಳಸಿದ ತಾಂತ್ರಿಕತೆ ಬಹುಮುಖ್ಯ ಪಾತ್ರ ವಹಿಸಿ ಮಾನವರ ಜೀವನ ವಿಕಾಸದಲ್ಲಿ ಬದಲಾವಣೆಗಳಾಗಲು ಸಹಾಯಕವಾಗಿದೆ. ಇಂತಹ ವಿಕಾಸದ ಜೀವನಕ್ರಮವನ್ನು ಸಂಸ್ಕೃತಿ ಎಂದು ಕರೆಯಲಾಗಿದೆ. ಕಲ್ಲಿನ ಬಳಕೆಯಿಂದಾಗಿ ಈ ಹಂತದಲ್ಲಿ 'ಶಿಲಾಯುಗ ಸಂಸ್ಕೃತಿ' ಎಂದು ಕರೆದಿರುವರು. ಮಾನವರು ಶಿಲೆಯಿಂದ ಲೋಹಕ್ಕೆ ಬದಲಾವಣೆ ಹೊಂದಿ ಸುಸಂಸ್ಕೃತ ಶೈಲಿಯನ್ನು ರೂಪಿಸಿಕೊಂಡು ನಾಗರಿಕವಾದರೆಂಬ ಅಂಶ ಸ್ಪಷ್ಟವಾಗಿ ತಿಳಿಯುತ್ತದೆ.

ಹಿರೇಕೆರೂರು ತಾಲೂಕಿನಲ್ಲಿ ಪ್ರಾಗೈತಿಹಾಸದ ಮಾನವರ ಜೀವನಕ್ರಮದ ಹಂತವನ್ನು ಅರಿಯಲಾಗಿದೆ. ಅದರಂತೆಯೇ ಈ ತಾಲೂಕಿನ ಮಾನವನ ಇತಿಹಾಸವು ಉನ್ನತಿಯ ಕಾಲ ವಾಗಿದ್ದಿತೆಂಬ ಅಂಶವನ್ನು ಇಲ್ಲಿ ದೊರೆತಿರುವ ವಿವಿಧ ಅವಶೇಷಗಳು ಸ್ಪಷ್ಟಪಡಿಸಿವೆ. ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ಪ್ರದೇಶದಲ್ಲಿ ಕಂಡುಬರುವ ಮೇದೂರು ಪರಿಸರದ ಪ್ರದೇಶವಾದ ರಟ್ಟೆಹಳ್ಳಿ, ತೋಗಿಗಂಟಿ ನೆಲೆಯಲ್ಲಿ ಆದಿ ಹಳೆಶಿಲಾಯುಗದ ಕ್ವಾರ್ಟ್ಸ್ ಮತ್ತು ಚಾರ್ಟ್ ಶಿಲೆಯಲ್ಲಿ ರೂಪಿತವಾದ ಉಪಕರಣಗಳು ದೊರೆತಿವೆ. ಶಿಲಾತಾಮ್ರ ಮತ್ತು ಬೃಹತ್ ಶಿಲಾ ಗೋರಿಯಲ್ಲಿ ಕೆಂಪು, ಕಪ್ಪು ಮಡಕೆಯ ಭಾಗಗಳು ಕಣವೆಸಿದ್ದಗೆ, ಕಮಲಾಪುರ, ತಡಕನಹಳ್ಳಿ ಪ್ರದೇಶದಲ್ಲಿ ಕಂಡುಬಂದಿವೆ. ನೂತನ ಶಿಲಾಯುಗಕ್ಕೆ ಸಂಬಂಧಿಸಿದಂತೆ ಹಳ್ಳೂರು, ಪುರದಕೆರೆ, ಶೀರಗುಂಟಿ ಪ್ರದೇಶದಲ್ಲಿ ಕಲ್ಲಿನ ಆಯುಧಗಳು ದೊರೆಕಿವೆ. ಗುಂಡಗಟ್ಟೆ ಇತಿಹಾಸ ಆರಂಭಯುಗದ ನೆಲೆಯಾಗಿದೆ.

೨.೨.೧. ಪ್ರಾಗೈತಿಹಾಸಿಕ ನೆಲೆಗಳ ಪರಿಚಯ

ರಟ್ಟೆಹಳ್ಳಿ: ಈ ಗ್ರಾಮವು ಆದಿ ಹಳೆ ಶಿಲಾಯುಗ ಮತ್ತು ಮಧ್ಯ ಶಿಲಾಯುಗಕ್ಕೆ ಸೇರಿದ ನೆಲೆಯಾಗಿದೆ. ಇಲ್ಲಿ ಉಪಕರಣಗಳು ಕ್ವಾರ್ಟ್ಸ್ ಮತ್ತು ಚಾರ್ಟ್ ಶಿಲೆಯಲ್ಲಿ ತಯಾರಿಸಲಾಗಿದೆ.

ಹಳ್ಳೂರು: ಈ ಗ್ರಾಮವು ನೂತನ ಶಿಲಾಯುಗ ಸಂಸ್ಕೃತಿಯ ಪ್ರಮುಖ ನೆಲೆಯಾಗಿದೆ. ಈ ಪ್ರದೇಶದಲ್ಲಿ ಉತ್ಖನನ ಕೈಗೊಂಡಾಗ ಪುರಾತತ್ವ ಅವಶೇಷಗಳು ದೊರೆತಿವೆ. ಪ್ರಮುಖವಾಗಿ ಈ ಪ್ರದೇಶದಲ್ಲಿ ರಾಗಿ ಅವಶೇಷ ದೊರಕಿದ್ದು, ಇದು ಪ್ರಾಚೀನ ಕಾಲದಲ್ಲಿ ಉಪಯೋಗವಾಗುತ್ತಿದ್ದ ದವಸವೆಂದು ತಿಳಿಯುತ್ತದೆ.

ಮುಂದುವರೆದ ಭಾಗವಾಗಿ ಶಿಲಾ ತಾಮ್ರಯುಗ ಸಂಸ್ಕೃತಿ ಮತ್ತು ಬೃಹತ್ ಶಿಲಾಯುಗದ ಸಂಸ್ಕೃತಿ ಆದಿ ಹಂತದ ಕಾಲದ ವರೆಗೂ ಅವಶೇಷಗಳು ಕಂಡುಬರುತ್ತವೆ.

ಕಣವೆಸಿದ್ದಗೆರೆ : ಈ ನೆಲೆಯಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಯಿದೆ.

ತಡಕನಹಳ್ಳಿ : ಈ ನೆಲೆಯಲ್ಲಿ ಶಿಲಾ ತಾಮ್ರಯುಗ ಸಂಸ್ಕೃತಿಯ ಅವಶೇಷಗಳು ದೊರಕಿವೆ. ಇಲ್ಲಿ ಬೃಹತ್ ಶಿಲಾಯುಗದ ಗೋರಿ ನೆಲೆಯಲ್ಲಿ ನಾಲ್ಕು ಶಿಲಾವೃತ್ತ ಗೋರಿಗಳ ಉತ್ಖನನ ನಡೆಸಿದ್ದಾರೆ. ಆದಿ ಕಬ್ಬಿಣ ಯುಗಕ್ಕೆ ಸೇರಿದ ಬಿಳಿ ವರ್ಣ ರೇಖಾಚಿತ್ರದ ಕಪ್ಪು-ಕೆಂಪು ಮಡಕೆ ಚೂರುಗಳು ದೊರೆತಿವೆ.

ತೋಟಗಂಟಿ: ಈ ನೆಲೆಯಲ್ಲಿ ಆದಿ ಹಳೆಶಿಲಾಯುಗ ಮತ್ತು ಮಧ್ಯ ಹಳೆಶಿಲಾಯುಗದ ಸಂಸ್ಕೃತಿಯ ಕ್ವಾರ್ಟ್ಸ್ ಮತ್ತು ಚಾರ್ಟ್ ಶಿಲೆಯ ಉಪಕರಣಗಳು ಕಂಡುಬಂದಿವೆ.

ಕಮಲಾಪುರ: ಈ ನೆಲೆಯಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ವಾಸ್ತವ್ಯದ ನೆಲೆಯಿದೆ.

ಪುರದಕೆರೆ: ಈ ಪ್ರದೇಶದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಯಿದೆ. ತಾಮ್ರಶಿಲಾಯುಗ ಸಂಸ್ಕೃತಿಯ ನೆಲೆಯಲ್ಲಿ ನೀಳಚಕ್ಕೆ, ಕಪ್ಪು ವರ್ಣದಲ್ಲಿ ಚಿತ್ರಿಸಿದ ಕೆಂಪು ಮಡಕೆ, ನಯಗೊಳಿಸಿದ ಉಪಕರಣ ದೊರಕಿದೆ. ಇತಿಹಾಸ ಆರಂಭ ಯುಗದ ಹಂತದ ನೆಲೆಯಲ್ಲಿ ಎರಡು ಆಯಾತಾಕಾರದ ಎರಡು ಇಟ್ಟಿಗೆಗಳು ದೊರಕಿವೆ.

ಗುಂಡಗಟ್ಟೆ: ಈ ನೆಲೆಯು ಇತಿಹಾಸ ಆರಂಭಯುಗದ ಹಂತದ ಪ್ರದೇಶವಾಗಿದೆ.

೨.೩. ಇತಿಹಾಸ ಕಾಲ

ಮೇದೂರು ಪರಿಸರವು ಐತಿಹಾಸಿಕ, ಶೈಕ್ಷಣಿಕ, ಧಾರ್ಮಿಕ ಕೇಂದ್ರವಾಗಿದ್ದು, ರಾಷ್ಟ್ರಕೂಟರು ಕಲ್ಯಾಣ ಚಾಲುಕ್ಯರು, ಕಲಚೂರಿಯರು, ವಿಜಯನಗರದ ಅರಸರು ಆಳ್ವಿಕೆ ಮಾಡಿರುವರು. ಇವರ ಆಳ್ವಿಕೆಗೆ ಸಂಬಂಧಿಸಿದಂತೆ ಹಲವು ಶಾಸನಗಳು ಮತ್ತು ಪುರಾತತ್ವ ಕುರುಹುಗಳು ಈ ಪ್ರದೇಶದಲ್ಲಿವೆ.

ರಾಷ್ಟ್ರಕೂಟರು

ಎಂಟನೇ ಶತಮಾನದ ಮಧ್ಯಭಾಗದಿಂದ ಹತ್ತನೇ ಶತಮಾನದ ಕೊನೆಯ ಪಾದದವರೆಗೆ ಕರ್ನಾಟಕ ಮತ್ತು ಮಹಾರಾಷ್ಟ್ರದ ಬಹುಭಾಗಗಳನ್ನು ಆಳಿದ ರಾಜಮನೆತನ. ಪ್ರಾರಂಭದಲ್ಲಿ ಇವರು ಬಾದಾಮಿ ಚಾಲುಕ್ಯರ ಆಶ್ರಿತರಾಗಿದ್ದರು. ಸ್ವಶ್ರಮದಿಂದ ರಾಜ್ಯವನ್ನು ಚಾಲುಕ್ಯರ ರಾಜಕೀಯ ಉತ್ತಾರಾಧಿಕಾರಿಗಳಾಗಿ ಒಂದನೇ ಕೃಷ್ಣ, ಧ್ರುವ, ಮೂರನೇ ಗೋವಿಂದ, ಒಂದನೇ ಅಮೋಘವರ್ಷ ನೃಪತುಂಗ, ಮೂರನೇ ಕೃಷ್ಣ ಮುಂತಾದ ಹೆಸರಾಂತ ರಾಜರ ಪರಿಶ್ರಮದಿಂದ ಕರ್ನಾಟಕದ ಪ್ರಭಾವವನ್ನು ದಕ್ಷಿಣ ಭಾರತದಲ್ಲಷ್ಟೇ ಅಲ್ಲದೇ ಉತ್ತರ ಭಾರತದಲ್ಲಿ ಕನೋಜ್‌ನವರೆಗೂ ಇನ್ನೊಂದು ಕಡೆ ಮಿಥಿಲೆಯವರೆಗೂ ಹಬ್ಬಿಸಿ, ಸಮಕಾಲೀನ ಭಾರತೀಯ ರಾಜಕೀಯದಲ್ಲಿ ಪರಮೋಚ್ಚ ಶಕ್ತಿಯಾಗಿ ಬೆಳೆದರು. ಈ ವಂಶದ ಇತಿಹಾಸ ಕರ್ನಾಟಕದಲ್ಲಿ ಒಂದು ಹೆಮ್ಮೆಯ ಅಧ್ಯಾಯ.

ಈವರೆಗೆ ರಾಷ್ಟ್ರಕೂಟರಿಗೆ ಸಂಬಂಧಿಸಿದಂತೆ ಶಾಸನಗಳು ಮೇದೂರು, ಅಣಜಿ ಗ್ರಾಮಗಳಲ್ಲಿ ಕಂಡುಬಂದಿವೆ. ಮೇದೂರಿನಲ್ಲಿ ದೊರೆತಿರುವ ಶಾಸನ ರಾಷ್ಟ್ರಕೂಟ ಮೂರನೆಯ ಗೋವಿಂದನಿಗೆ ಸಂಬಂಧಿಸಿದ್ದಾಗಿದೆ. ಇವರು ಮಾಕಳೇಶ್ವರ ದೇವರಿಗೆ ನೀಡಿದ ದಾನವನ್ನು ದಾಖಲಿಸುತ್ತದೆ. ಮೂರನೆಯ ಗೋವಿಂದನು ಪರಾಕ್ರಮಶಾಲಿಯಾಗಿದ್ದು, ರಾಷ್ಟ್ರಕೂಟರಲ್ಲಿ ಪ್ರಮುಖ ಅರಸನಾಗಿದ್ದನು. ಇವನ ಆಳ್ವಿಕೆ ಈ ಪರಿಸರವನ್ನು ಒಳಗೊಂಡಿತ್ತು ಎಂಬುದಕ್ಕೆ ಮೇದೂರಿನ ಗ್ರಾಮದಲ್ಲಿ ದೊರೆತಿರುವ ಶಾಸನವು ಪುಷ್ಟಿ ನೀಡುತ್ತದೆ.

ಮೇದೂರು ಶಾಸನವು ಎಂಟನೇ ಶತಮಾನಕ್ಕೆ ಸೇರಿರುವ ಶಾಸನವಾಗಿದೆ. ಈ ಶಾಸನವು ಕನ್ನಡ ಶಾಸನವಾಗಿದ್ದು, ಮೂರನೆಯ ಗೋವಿಂದರಸ ಬನವಾಸಿ ೧೨೦೦೦ ಮತ್ತು ಸಾಂತಳಿಗೆ ೧೦೦೦ ಆಳುತ್ತಿರುವ ಮೇದೂರಿನ ಮಾಕಳೇಶ್ವರ ದೇವರಿಗೆ ನೀಡಿದ ದಾನವನ್ನು ದಾಖಲಿಸುತ್ತದೆ. ಮೇದೂರಿನಲ್ಲಿ ದೊರಕಿರುವ ರಾಷ್ಟ್ರಕೂಟರ ಶಾಸನಗಳ ಈ ಭಾಗವು ರಾಷ್ಟ್ರಕೂಟರ ನೇರ ಆಳ್ವಿಕೆಗೆ ಒಳಪಟ್ಟಿದ್ದು ಕಂಡುಬರುತ್ತದೆ.

ಕಳಚೂರಿ ವಂಶ

ಕ್ರಿ.ಶ.೬ ರಿಂದ ೧೬ನೆಯ ಶತಮಾನದವರೆಗೆ ಸುಮಾರು ಒಂದು ಸಾವಿರ ವರ್ಷಗಳ ಕಾಲ ಭಾರತದ ಚರಿತ್ರೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಅರಸು ಮನೆತನ. ಇದು ಬೇರೆ ಬೇರೆ ರಾಜಧಾನಿ ಗಳಿಂದ ರಾಜ್ಯವನ್ನಾಳಿದರು. ಈ ವಂಶದ ಅತ್ಯಂತ ಪ್ರಾಚೀನ ಶಾಖೆ ಮಾಳ್ವ ಗುಜರಾತ್ ಮತ್ತು ಮಹಾರಾಷ್ಟ್ರ ಪ್ರದೇಶಗಳಲ್ಲಿ ಆರನೇ ಶತಮಾನದಲ್ಲಿ ಅಧಿಕಾರದಲ್ಲಿ ಇತ್ತು. ಇವರಿಗೆ ಹೈಹರೆಂಬ ಹೆಸರಿತ್ತು. ಇವರ ರಾಜಧಾನಿ ಯಾವುದೆಂದು ತಿಳಿದಿಲ್ಲವಾದರೂ ಶಾಸನಗಳನ್ನು ಉಜ್ಜೈನಿಯ ವಿಧಿಶ ಆನಂದಪ್ಪುರ(ಗುಜರಾತ್) ಮತ್ತು ಸ್ಕಂದವಾರ ಮುಂತಾದ ಪ್ರದೇಶಗಳಿಮದ ಹೊರಡಿಸಲಾಗಿದೆ.

ಕಲ್ಯಾಣ ಕಳಚೂರಿಗಳು

ಕರ್ನಾಟಕದಲ್ಲಿಯೂ ಒಂದು ಕಳಚೂರಿ ಮನೆತನ ಕಲ್ಯಾಣ ರಾಜಧಾನಿಯಿಂದ ರಾಜ್ಯಭಾರ ಮಾಡುತ್ತಿತ್ತು. ಈ ಮನೆತದ ಹೆಸರು ಕಳಚುರಿಯ ಕಾಲವೆಂದು ಇವರ ಶಾಸನಗಳಿಂದ ಗೊತ್ತಾಗುತ್ತದೆ. ಇವರು ಕಾಲಂಜರಪುರ, ವರುಧೀಶ್ವರರೆಂದು ತಮ್ಮನ್ನು ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಕಾಲಂಜರಪುರ ಈಗಿನ ಬುಂದೇಲ್‌ಖಂಡದ ಕಾಲಂಜರ. ಇವರು ಅಲ್ಲಿಂದ ದಕ್ಷಿಣಕ್ಕೆ ಹೇಗೆ ಬಂದರೆಂದು ಖಚಿತವಾಗಿ ತಿಳಿದಿಲ್ಲವಾದರೂ ಕ್ರಿ.ಶ.೧೧೫೬ರಿಂದ ೧೧೫೭ರಲ್ಲಿ ಚಾಲುಕ್ಯ ರಾಜ್ಯವನ್ನು ಆಕ್ರಮಿಸಿದ ಬಿಜ್ಜಳನಿಗಿಂತ ಮೊದಲು ಏಳೆಂಟು ತಲೆಮಾರುಗಳ ಅರಸರ ಹೆಸರುಗಳು ಶಾಸನಗಳಲ್ಲಿ ಕಂಡುಬಂದಿರುವುದರಿಂದ ಸುಮಾರು ೧೧ನೇ ಶತಮಾನದಲ್ಲಿ ಇವರು ಕರ್ನಾಟಕಕ್ಕೆ ಬಂದಿರಬಹುದು.

ಇವರಿಗೆ ಸಂಬಂಧಿಸಿದಂತೆ ಶಾಸನಗಳು ಮೇದೂರು ಗ್ರಾಮದಲ್ಲಿ ಕಂಡುಬಂದಿವೆ. ಮೇದೂರು ಶಾಸನವು ಕಳಚೂರಿ ಅರಸನಾದ ಎರಡನೇ ಬಿಜ್ಜಳನಿಗೆ ಸಂಬಂಧಿಸಿದಂತಿದೆ. ಈ ಶಾಸನದ ಕಾಲವು ಕ್ರಿ.ಶ.೧೧೪೬ಕ್ಕೆ ಸೇರಿದ್ದು ಮಹಾಸಾಮಂತ ಬಿಜ್ಜರಸನು 'ಮೇಜೂವೂರಿ'ನ ಮಾಕಳೇಶ್ವರ ದೇವರಿಗೆ ನೀಡಿದ ಭೂದಾನದ ಬಗೆಗೆ ತಿಳಿಸುತ್ತದೆ. ಈ ಶಾಸನದಿಂದ ಕಳಚೂರಿಯವರ ಆಳ್ವಿಕೆಗೆ ಮೇದೂರು ಒಳಪಟ್ಟಿದೆ ಎಂದು ತಿಳಿಯಬಹುದು.

ಕಲ್ಯಾಣ ಚಾಲುಕ್ಯರು

ಬಾದಾಮಿ ಚಾಲುಕ್ಯರ ವಂಶಜರೆಂದು ತಮ್ಮನ್ನು ಕರೆದುಕೊಂಡಿರುವ ಕಲ್ಯಾಣದ ಚಾಲುಕ್ಯರು ರಾಷ್ಟ್ರಕೂಟರನ್ನು ಪದಚ್ಯುತಗೊಳಿಸಿ, ಅಧಿಕಾರ ಪಡೆದರು. ಈ ವಂಶದ ಎರಡನೇ ತೈಲಪನು ಕ್ರಿ.ಶ.೯೭೩ರಲ್ಲಿ ಪಟ್ಟವೇರಿದ ವಿಚಾರ ಆರನೆಯ ವಿಕ್ರಮಾದಿತ್ಯನ ಗದಗಿನ ಶಾಸನದಿಂದ ತಿಳಿಯುತ್ತದಲ್ಲದೆ, ಅವನು ೨೪ ವರ್ಷ ಆಳಿದನೆಂದೂ ಹೇಳಿದೆ.

ಚಾಲುಕ್ಯರ ಕಾಲದ ನೂರಾರು ಶಾಸನಗಳು ನಮಗೆ ಲಭ್ಯವಾಗಿವೆ. ಈ ಪೈಕಿ ಆರನೆಯ ವಿಕ್ರಮನ ಶಾಸನಗಳೇ ನೂರಾರು ಇವೆ. ಕೌಠಂ, ಯವ್ವೂರು, ನೀಲಗುಂದ, ಮೀರಜ್ ಇಲ್ಲಿ ದೊರೆತ ಶಾಸನಗಳು ಈ ವಂಶದ ಬಗ್ಗೆ ಕೆಲವು ಮಹತ್ವದ ಅಂಶಗಳನ್ನು ತಿಳಿಸುವ ಗಣ್ಯ ದಾಖಲೆಗಳು. ಶಾಸನಗಳಲ್ಲದೆ, ಈ ಕಾಲಕ್ಕೆ ಸಂಬಂಧಿಸಿದ ಅನೇಕ ಸಾಹಿತ್ಯ ಕೃತಿಗಳು ಸಿಗುತ್ತವೆ. ರನ್ನನ ಗದಾಯುದ್ಧದಲ್ಲಿ ಕಲ್ಯಾಣದ ಚಾಲುಕ್ಯರ ಮೂಲ ಸತ್ಯಾಶ್ರಯನ ಸಾಧನೆಗಳ ವಿಚಾರವಿದೆ.[೭]

ಇವರಿಗೆ ಸಂಬಂಧಪಟ್ಟ ಶಾಸನವು ಮೇದೂರು ಕೆರೆಯ ದಂಡೆಯಲ್ಲಿರುವ ಬಸವನಗುಡಿ(ಈಶ್ವರ ದೇವಾಲಯದ) ಪ್ರಕಾರ ಗೋಡೆಯಲ್ಲಿ ದೊರಕಿದ್ದು, ಇದು ಕ್ರಿ.ಶ.೧೧ನೇ ಶತಮಾನಕ್ಕೆ ಸೇರಿದೆ. ಈ ಶಾಸನವು ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು, ಕ್ರಿ.ಶ.೧೧೧೧ರ ಈ ಶಾಸನವು ಅಸ್ಪಷ್ಟವಾಗಿವೆ. ಇದರಲ್ಲಿ ದೇವಾಲಯಕ್ಕೆ ದಾನ ನೀಡಿದ ಬಗ್ಗೆ ಉಲ್ಲೇಖಿಸಲಾಗಿದೆ. ನಾಗವಂದದಲ್ಲಿ ಆರನೇ ವಿಕ್ರಮಾದಿತ್ಯ ಮತ್ತೊಂದು ಶಾಸನ ಸಿದ್ಧೇಶ್ವರ ದೇವಾಲಯದ ಕಂಬದ ಮೇಲೆ ದೊರಕಿದೆ. ಈ ಶಾಸನವು ವೀರಗಲ್ಲಾಗಿದೆ. ವೀರಗಲ್ಲುಗಳ ಮೇಲೆ ಈ ಶಾಸನ ಬಿಡಿಸಲಾಗಿದೆ. ಕ್ರಿ.ಶ.೧೧೨೮ರ ಮತ್ತೊಂದು ಶಾಸನವು ಸಿದ್ಧೇಶ್ವರ ದೇವಾಲಯದಲ್ಲಿ ದೊರಕಿದ್ದು, ಈ ಶಾಸನ ದಾನಶಾಸನವಾಗಿದೆ. ಈ ಶಾಸನದಲ್ಲಿ ಸೋಮೇಶ್ವರನ ಕುರಿತು ಉಲ್ಲೇಖ ಕಾಣಬಹುದು. ಈ ನಾಲ್ಕು ಶಾಸನದಿಂದ ಮೇದೂರು ನಾಗವಂದ ಗ್ರಾಮಗಳು ಕಲ್ಯಾಣಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿವೆ ಎಂದು ತಿಳಿಯಬಹುದು.

ವಿಜಯನಗರ ಸಾಮ್ರಾಜ್ಯ

ಕ್ರಿ.ಶ.೧೩೩೬ರಲ್ಲಿ ಈ ಸಾಮ್ರಾಜ್ಯ ಸ್ಥಾಪನೆಯಾದ ದಕ್ಷಿಣ ಭಾರತದ ಇತಿಹಾಸದಲ್ಲಿ ಒಂದು ಪ್ರಮುಖ ಘಟನೆ ಎಂದರೂ ತಪ್ಪಿಲ್ಲ. ೧೩ನೇ ಶತಮಾನದ ಆದಿಭಾಗದಲ್ಲಿ ಮುಸ್ಲಿಮರು ಉತ್ತರಭಾರತದಲ್ಲಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿ, ಈ ಶತಮಾನ ಕೊನೆಯ ವೇಳೆಗೆ ಅವರು

ದಕ್ಷಿಣ ಭಾರತವನ್ನು ಆಕ್ರಮಿಸಲು ಪ್ರಯತ್ನಿಸುತ್ತಿದ್ದರು. ದೇವಗಿರಿಯ ಯಾದವರು, ವಾರಂಗಲ್ಲಿನ ಕಾಕತೀಯರು, ದ್ವಾರಸಮುದ್ರದ ಹೊಯ್ಸಳರು ಮತ್ತು ಮಧುರೆಯ ಪಾಂಡ್ಯರು ಅಲ್ಲಾವುದ್ದೀನ್ ಮತ್ತು ಆತನ ದಂಡನಾಯಕನಾಗಿದ್ದ ಮಲ್ಲಿಕಾಫರ್‌ನ ದಂಡೆಯಾತ್ರೆಗಳನ್ನು ಎದುರಿಸಲು ಅಶಕ್ತರಾಗಿದ್ದರು. ಮಹಮದ್ ಬಿನ್ ತೊಗಲಕ್‌ನ ಆಳ್ವಿಕೆಯ ಕಾಲದಲ್ಲಿ ಈ ರಾಜ್ಯಗಳೆಲ್ಲ ಅವನತಿ ಹೊಂದಿದ್ದವು. ಇಂತಹ ಸಂದರ್ಭದಲ್ಲಿ ಜನ್ಮ ತಾಳಿದ ರಾಜ್ಯವೇ ವಿಜಯನಗರ ಸಾಮ್ರಾಜ್ಯ.

ಹರಿಹರ ಬುಕ್ಕ ಸಹೋದರರಿಂದ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯವು ಸುಮಾರು ಇನ್ನೂರೈವತ್ತು ವರ್ಷಗಳಿಗೂ ಹೆಚ್ಚು ಕಾಲ ಅಧಿಕಾರದಲ್ಲಿದ್ದು, ದಕ್ಷಿಣ ರಾಜ್ಯಗಳಲ್ಲಿ ಉಂಟಾಗಿದ್ದ ಅನೈಕ್ಯತೆಯನ್ನು ಹೋಗಲಾಡಿಸಿ ಹಿಂದಿನಿಂದ ಬೆಳೆದುಬಂದಿದ್ದ ಸಾಂಸ್ಕೃತಿಕ ಪರಂಪರೆಯನ್ನು ಮುಂದುವರಿಸುವಲ್ಲಿ ಯಶಸ್ವಿಯಾಯಿತಲ್ಲದೆ, ಭಾರತೀಯ ಸಂಸ್ಕೃತಿಗೆ, ಕಲೆ, ವಾಸ್ತುಶಿಲ್ಪ, ಸಾಹಿತ್ಯ ಮತ್ತು ಧರ್ಮಕ್ಕೆ ತನ್ನದೇ ಆದ ಕಾಣಿಕೆಯನ್ನು ಸಲ್ಲಿಸಿತು. ಹಂಪೆಯು ವಿಜಯನಗರದ ರಾಜಧಾನಿಯಾಗಿದ್ದು, ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಹಂಪೆಯಲ್ಲಿ ಇಂದಿಗೂ ಈ ಸಾಮ್ರಾಜ್ಯದ ಅವಶೇಷವನ್ನು ನೋಡಬಹುದಾಗಿದ್ದು, ಪ್ರವಾಸಿಗರಿಗೆ ತನ್ನ ಗತ ವೈಭವವನ್ನು ಕೂಗಿ ಹೇಳಲು ನಿಂತಿರುವಂತಿದೆ. ಶಕ್ತಿಯುತ ರಾಷ್ಟ್ರಗಳ ವಿರುದ್ಧ ಉಗ್ರ ಹೋರಾಟ ನಡೆಸಿ, ವಿಜಯ ಪಡೆದುದರ ನೆನಪಿಗಾಗಿ ಈ ರಾಜ್ಯಕ್ಕೆ 'ವಿಜಯನಗರ' ಎಂದು ಹೆಸರಾಯಿತು. ಒಟ್ಟಿನಲ್ಲಿ ಇದು ಭಾರತದ ಇತಿಹಾಸದಲ್ಲೇ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಟ್ಟಕಡೆಯ ಹಿಂದೂ ಸಾಮ್ರಾಜ್ಯ.[೮]

ಇವರಿಗೆ ಸಂಬಂಧಪಟ್ಟ ಶಾಸನವು ಹಿರೇಕೆರೂರು ತಾಲ್ಲೂಕಿನಲ್ಲಿ ಕಂಡುಬರುತ್ತದೆ. ಇವರ ಒಂದು ಶಾಸನವು ಮೇದೂರಿನ ಹಿಮ್ಮಾಮ್ ಸಾಬ್ ಹೊಲದ ಪ್ರದೇಶದಲ್ಲಿ ದೊರೆತಿದ್ದು, ಈ ಶಾಸನವು ಸಾಳ್ವನರಸಿಂಹವರ್ಮನಿಗೆ ಸಂಬಂಧಿಸಿದೆ. ಈ ಶಾಸನದ ಕಾಲ ಕ್ರಿ.ಶ.೧೪೮೯. ಈ ಶಾಸನದಲ್ಲಿ ಮೈದೂರಿನ ಬ್ರಹ್ಮದೇವಾಲಯಕ್ಕೆ ದಾನ ನೀಡಿದ ಕುರಿತಾದ ಉಲ್ಲೇಖ ಇದೆ.

೨.೪. ಸ್ಥಳನಾಮ

ಭೂಮಿಯ ಮೇಲೆ ಮಾನವಜೀವಿ ಗೋಚರವಾದದ್ದು ಸುಮಾರು ಹತ್ತು ಸಾವಿರ ವರ್ಷಗಳ ಹಿಂದೆಯೇ. ಆರಂಭಿಕ ದಿನಗಳಲ್ಲಿ ಮಾನವಜೀವಿಗೂ ಉಳಿದ ಜೀವರಾಶಿಗೂ ವ್ಯತ್ಯಾಸ ಕಂಡುಬರುವುದಿಲ್ಲ. ಇಬ್ಬರದೂ ಹೋರಾಟಮಯ ಜೀವನ. ಆದಿಮಾನವನ ಬದುಕಿನ ಹೋರಾಟವನ್ನು ನಾವು ಇಂದು ಊಹಿಸಿಕೊಳ್ಳುವುದು ಸಾಧ್ಯವಾಗದ ಮಾತು. ಆಹಾರಕ್ಕಾಗಿ ಅಲೆದಾಟ, ಬದುಕಿಗಾಗಿ ಪ್ರಕೃತಿಯೊಂದಿಗೆ ಹೋರಾಟ. ಇವು ಅವನ ನಿತ್ಯ ಕಾರ್ಯಗಳು ಆಗಿದ್ದವು.[೯]

ಆದಿಮಾನವರು ತಮ್ಮ ಜೀವನಕ್ಕೆ ಅಗತ್ಯವೆನಿಸಿದ ವಸ್ತುವಿಗಳಿಗೆ ತಮ್ಮದೇ ಭಾಷೆಯಲ್ಲಿ ಹೆಸರನ್ನು ಇಡಲು ತೊಡಗಿದರು. ಕಾಲಕಳೆದಂತೆ ನೆಲೆ ನಿಂತ ಜಾಗವು ಹಟ್ಟಿಯಾಯಿತು. ಕೇರಿಯಾಯಿತು, ಊರಾಯಿತು, ನಗರವಾಯಿತು. ಪರಿಣಾಮವಾಗಿ ಮೂಲ ಹೆಸರಿನ ಅರ್ಥ

ಮತ್ತು ಕಾರಣಗಳು ಜನರಿಂದ ಮರೆಯಾಗತೊಡಗಿದವು. ಹಾಗಾಗಿ ನಾವಿಂದು ಸ್ಥಳನಾಮಗಳ ಅರ್ಥ, ಹಿನ್ನೆಲೆ, ಚರಿತ್ರೆಯನ್ನು ಹುಡುಕುತ್ತ ಹೊರಟೆವು.[೧೦]

೨.೪.೧. ಮೇದೂರು ಸ್ಥಳನಾಮದ ಐತಿಹ್ಯ

ಮೇದೂರಿಗೆ ಪ್ರಾರಂಭದಲ್ಲಿ ಮೇಜವೂರು ಅನ್ನುತ್ತಿದ್ದರು. ಮೇಜೂರು ಅರಣ್ಯ ಪ್ರದೇಶದಲ್ಲಿತ್ತು. ಅಲ್ಲಿ ಗಿಡಗಂಟೆಗಳ ಅಗರ ಸಮೂಹವೇ ಇತ್ತು. ಅಲ್ಲಲ್ಲಿ ಕಲ್ಲುಬಂಡೆಗಳು, ಪಕ್ಕದಲ್ಲಿ ಕೆರೆ, ಕೆರೆಯ ಪಕ್ಕದಲ್ಲಿ ಮಾಕಳೇಶ್ವರ ದೇವಾಲಯ, ಬಸವೇಶ್ವರ ದೇವಾಲಯ, ಚೌಡೇಶ್ವರಿ ದೇವಾಲಯಗಳಿದ್ದರೂ ಜನರು ಸುದನಕಟ್ಟೆ, ಗಾಮನಕಟ್ಟೆ, ದೇಶಿಕೆರೆ, ಗಂಗನಕಟ್ಟೆ, ಹಾರಿಕಟ್ಟೆ (ಹಾದಿಕಟ್ಟೆ) ಹನುಮನಹಳ್ಳಿ ದುರ್ಗನಕಟ್ಟೆಯಲ್ಲಿ ವಾಸ ಮಾಡುತ್ತಿದ್ದರು. ಈ ಎಲ್ಲ ಊರಿನವರ ದನಕರುಗಳು ಮೇಯುವ ಸ್ಥಾನವೇ ಮೇದೂರು. ಈ ಮೇಜೂರ ಮಾಕಳೇಶ್ವರ ದೇವರಿಗೆ ಬಿಜ್ಜರಸನು ಭೂದಾನ ಮಾಡಿರುವನು. ಇದಕ್ಕೆ ಬಸವಣ್ಣ ದೇವರ ಗುಡಿಯಲ್ಲಿಯ ಶಿಲಾಶಾಸನವೇ ಸಾಕ್ಷಿಯಾಗಿದೆ. ಅದರಂತೆ ಇದೇ ಮಾಕಳೇಶ್ವರ ದೇವಾಲಯ ನಿರ್ಮಾಣಕ್ಕೆ ಮಾಕಳಗಾವುಂಡನು ದಾನ ಮಾಡಿದ ಉಲ್ಲೇಖ ಬಸವಣ್ಣ ಗುಡಿಯ ಹಿಂದಿನ ಶಿಲಾ ಶಾಸನದಲ್ಲಿದೆ. ಹೀಗೆ ಈ ಗ್ರಾಮ ಐತಿಹಾಸಿಕ ಸ್ಥಳವಾಗಿದೆ. ಈ ಅರಣ್ಯ ಪ್ರದೇಶದ ಈ ಸ್ಥಾನವನ್ನೇ ಯೋಗ್ಯ ಸ್ಥಾನವೆಂದು ಸಾದನಕಟ್ಟೆ ಮುಂತಾದ ಮೇಲಿನ ಏಳೂ ಊರವರು ಒಬ್ಬೊಬ್ಬರೇ ಈ ಮೇಜೂರಿಗೆ ಬಂದು ಕೆರೆಯ ದಂಡೆಯಲ್ಲಿಯ ಮಾಕಳೇಶ್ವರ ಬಸವೇಶ್ವರ, ಈಶ್ವರ ದೇವರ ಪೂಜೆ, ಮಾಡುತ್ತ ಇರಹತ್ತಿದ್ದರು. ಹೀಗೆ ದನಗಳು ಮೇದ ಊರು ಮೇಜೂರಿಗೆ ಬದಲಾಗಿ ಮೇದ–ಊರು ಮೇದುರಾಗಿ ಈಗ ಪವಾಡಪುರುಷ ಶ್ರೀ ಹುಟ್ಟು ಕಾಮೇಶ್ವರನ ಪವಿತ್ರ ಸ್ಥಳ ಯಾತ್ರಾ ಸ್ಥಾನವಾಗಿ ಪರಿಣಮಿಸಿದೆ. ಹೀಗೆ ಶಾಸನೋಕ್ತವಾಗಿ ಸ್ಥಳನಾಮದ ಬಗ್ಗೆ ಸ್ಪಷ್ಟಪಡಿಸಿ ಕೊಂಡಿರುವುದಾಗಿದೆ.[೧೧]

ಶಾಸನದ ಉಲ್ಲೇಖ

ಮಾಕಳೇಶ್ವರ ದೇವಾಲಯದ ಹಿಂಭಾಗದಲ್ಲಿರುವ ಶಾಸನವು ಕ್ರಿ.ಶ.೧೧ನೇ ಶತಮಾನದ ಲಿಪಿಯನ್ನು ಹೊಂದಿದ್ದು, ಮಾಕಳ ಗಾವುಂಡನೆಂಬ ಅಧಿಕಾರಿಯಿಂದ ಮಾಕಳೇಶ್ವರ ದೇವಾಲಯದ ನಿರ್ಮಾಣ ಹಾಗೂ ದಾನ ಬಿಟ್ಟ ಬಗೆಗೆ ದಾಖಲಿಸುತ್ತದೆ. ಇದರ ಸಮೀಪವಿರುವ ಇನ್ನೊಂದು ಶಾಸನವು ಕ್ರಿ.ಶ.೧೧೪೬ಕ್ಕೆ ಸೇರಿದ್ದು, ಮಹಾಸಾಮಂತ ಬಿಜ್ಜರಸನು ಮೇಜೂರಿನ ಮಾಕಳೇಶ್ವರ ದೇವರಿಗೆ ನೀಡಿದ ಭೂದಾನದ ಬಗೆಗೆ ತಿಳಿಸುತ್ತದೆ. ಹೀಗೆ ಈಶ್ವರ ದೇವಾಲಯ(ಬಸವನಗುಡಿ)ದ ಪ್ರಾಕಾರ ಗೋಡೆಯಲ್ಲಿ ಉಲ್ಲೇಖವಾಗಿರುವ ಶಾಸನದಲ್ಲಿ ಮೇಜೂರು ಎಂದು ಉಲ್ಲೇಖಗೊಂಡಿರುವುದು ತಿಳಿದುಬರುತ್ತದೆ. ಹೀಗೆ ಶಾಸನೋಕ್ತವಾಗಿ ಈ ಗ್ರಾಮಕ್ಕೆ ಮೇಜೂರು ಎಂದಿದ್ದು, ಕಾಲಾಂತರ ಮೇಜೂರು ಬದಲಿಗೆ ಮೇದೂರು ಆಗಿರುವ ಪ್ರತೀತಿ ಇದೆ. ಹೀಗೆ ಕ್ಷೇತ್ರಕಾರ್ಯಕ್ಕೆ ಹೋದಾಗ ಮೇಜೂರು ಮೇದೂರು ಆದ ಮಾಹಿತಿ ಸ್ಥಳೀಯ ನಾಗರಿಕರಿಂದ ತಿಳಿದುಬಂದಿದೆ.

ಅಡಿಟಿಪ್ಪಣಿಗಳು

೧. ಮಲ್ಲಪ್ಪ ಪಿ., ೨೦೦೧, **ಕರ್ನಾಟಕ ಭೂಗೋಳಶಾಸ್ತ್ರ,** ಪು.೧೮

೨. ತಳವಾರ ಹ.ಮು., ೧೯೯೭, **ಹಿರೇಕೆರೂರು ತಾಲ್ಲೂಕು ಭೂಗೋಳ,** ಪು.೨.

೩. ಶಿವತಾರಕ್ ಕೆ.ಬಿ., ೨೦೦೧, **ತುಮಕೂರು ಜಿಲ್ಲೆಯ ಪ್ರಾಗೈತಿಹಾಸಿಕ ಕುರಹುಗಳ ಸಾಂಸ್ಕೃತಿಕ ಅಧ್ಯಯನ,** ಪು.೩.

೪. **ಕನ್ನಡ ವಿಷಯ ವಿಶ್ವಕೋಶ,** ೨೦೦೯, ಪು.೮೭೭.

೫. ಅದೇ, ಪು.೨೩೪–೨೩೫.

೬. ಅದೇ, ಪು.೨೩೬.

೭. ಸೂರ್ಯನಾಥ ಯು.ಕಾಮತ್, ೨೦೦೫, **ಕರ್ನಾಟಕ ಸಂಕ್ಷಿಪ್ತ ಇತಿಹಾಸ,** ಪು.೮೭.

೮. ಸದಾಶಿವ ಕೆ., ೨೦೧೨, **ಸಮಗ್ರ ಭಾರತದ ಇತಿಹಾಸ,** ಪು.೪೫೭.

೯. ವಿಶ್ವನಾಥಯ್ಯ ಸಿ.ಎಂ., ೨೦೦೪, **ಕಡೂರು ತಾಲ್ಲೂಕಿನ ಸ್ಥಳನಾಮಗಳು,** ಪು.೨.

೧೦. ಅದೇ, ಪು.೩

೧೧. ತಳವಾರ ಹ.ಮು., ೧೯೯೧, **ಮೇದೂರು ಪವಾಡ ಪುರುಷ ಶ್ರೀ ಹುಟ್ಟು ಕಾಮೇಶ್ವರ ಸಂಕ್ಷಿಪ್ತ ಚರಿತ್ರೆ** ಪು.೫–೬.

ಅಧ್ಯಾಯ ಮೂರು

ದೇವಾಲಯ ಮತ್ತು ಮೂರ್ತಿಶಿಲ್ಪಕಲೆ

೩.೧. ದೇವಾಲಯಗಳು

೩.೨. ಮೂರ್ತಿಶಿಲ್ಪಗಳು

ಅಧ್ಯಾಯ ಮೂರು

ದೇವಾಲಯ ಮತ್ತು ಮೂರ್ತಿಶಿಲ್ಪ ಕಲೆ

ಮೇದೂರು ಪರಿಸರದಲ್ಲಿ ರಾಷ್ಟ್ರಕೂಟರಿಂದ ಹಿಡಿದು ವಿಜಯನಗರ ಕಾಲದವರೆಗೆ ಅನೇಕ ದೇವಾಲಯಗಳು ನಿರ್ಮಾಣವಾಗಿದೆ. ಅವುಗಳಲ್ಲಿ ಶೈವ, ವೈಷ್ಣವ ದೇವಾಲಯಗಳು ಪ್ರಮುಖವಾಗಿ ಕಂಡುಬರುತ್ತವೆ. ಜೈನ ಬಸದಿಗೆ ದಾನ ನೀಡಿದ ಶಾಸನ ಈ ಪರಿಸರದಲ್ಲಿದ್ದರೂ ಅದು ಈಗ ಉಳಿದುಬಂದಿಲ್ಲ. ಈ ದೇವಾಲಯಗಳೊಂದಿಗೆ ವಿವಿಧ ಪ್ರಕಾರದ ಮೂರ್ತಿಶಿಲ್ಪಗಳು ಮೇದೂರು ಪರಿಸರದಲ್ಲಿವೆ. ಗರ್ಭಗೃಹದಲ್ಲಿರುವ ಶಿಲ್ಪಗಳೊಂದಿಗೆ ವೀರಗಲ್ಲು ಮತ್ತು ಮಹಾಸತಿಗಲ್ಲುಗಳು ಸೂಕ್ಷ್ಮ ಕೆತ್ತನೆಗಳಿಂದ ಕೂಡಿವೆ.

೩.೧. ದೇವಾಲಯಗಳು

ದೇವಾಲಯ ಎಂದರೆ ದೇವರಿಗಾಗಿ ನೀರ್ಮಿಸಿದ ಅಲಯವೆ ಆಗಿದೆ. ಮಾನವನ–ದೈವ, ಇಹ–ಪರ, ವಾಸ್ತವಿಕ–ಆದರ್ಶ, ಇವುಗಳ ಮಿಲನದ ಸಂಕೇತವೆ ದೇವಾಲಯ. ಇವುಗಳು ಮಾನವರ ಧಾರ್ಮಿಕ ಶ್ರದ್ಧೆ, ಭಕ್ತಿ, ನಂಬಿಕೆಗಳ ಪ್ರತೀಕ. ಮಾನವರ ಜೀವನದಲ್ಲಿ ಪ್ರಕೃತಿ ಅತಿ ಮಹತ್ವದ ಪಾತ್ರ ವಹಿಸುತ್ತದೆ. ಪ್ರಕೃತಿದತ್ತ ಗಿಡ, ಮರ, ನದಿ, ಹಳ್ಳ, ಕೊಳ್ಳ ಇನ್ನೂ ಮುಂತಾದವುಗಳು ಸೃಷ್ಟಿಯ ಹಿನ್ನೆಲೆಯಲ್ಲಿ ಯಾವುದೋ ಒಂದು ಅನಂತಶಕ್ತಿಯು ಅಡಗಿದೆ ಎಂದು ಭಾವಿಸಿ ಅವುಗಳನ್ನು ಪೂಜಿಸಲು ಮಾನವರು ಪ್ರಯತ್ನಿಸಿದರು.[೧]

ಹಾಗೆಯೇ ಆ ಅನಂತಶಕ್ತಿಗೊಂದು ಮೂರ್ತ ರೂಪಕೊಟ್ಟು ಅದರ ರಕ್ಷಣೆಗಾಗಿ ಒಂದು ಆಲಯವನ್ನು ನಿರ್ಮಿಸಿದೆ. ಇದು ಮುಂದೆ ದೇವಾಲಯವಾಗಿ ಪರಿಣಮಿಸಿತು. ಭೂಮಿಯ ಮೇಲೆ ಕಟ್ಟಲ್ಪಟ್ಟ ವಸ್ತುಗಳನ್ನು ಗೃಹ ಮತ್ತು ದೇಗುಲ ವಸ್ತುಗಳೆಂದು ಕರೆಯಲಾಗಿದ್ದು. ದೇವರಿಗೆಂದು ಕಟ್ಟಿದ ಕಟ್ಟಡವು ದೇಗುಲವಾಗಿದೆ. ಭಾರತದ ಪ್ರಾಚೀನ ನಾಗರಿಕತೆ ಸಿಂಧೂ ಬಯಲಿನ ಜನರು ಪ್ರಕೃತಿಯ ಆರಾಧಕರಾಗಿದ್ದು, ಪಶುಪತಿ ಮೊದಲಾದ ವಿಗ್ರಹಗಳನ್ನು ಪೂಜಿಸುತ್ತಿದ್ದರು ಎಂಬುದು ಬೆಳಕಿಗೆ ಬಂದಿರುವ ಸಂಗತಿ. ಆದರೆ ಈ ಅವಧಿಯಲ್ಲಿ ವಿಗ್ರಹಗಳಿಗೆಂದು ಕಟ್ಟಿದ ದೇಗುಲವಾಸ್ತು

ಇದುವರೆಗೆ ಸ್ಪಷ್ಟವಾಗಿ ಗೋಚರಿಸಿಲ್ಲ. ಹಾಗಿದ್ದು ಈ ಸಂಸ್ಕೃತಿಯಿಂದ ಒಂದು ವಿಚಾರ ಸ್ಪಷ್ಟವಾಗುತ್ತದೆ. ಅದೇನೆಂದರೆ ದೇಗುಲವಾಸ್ತು ರಚನೆಗೆ ಪೂರ್ವದಲ್ಲಿ ಮೂರ್ತಿಶಿಲ್ಪದ ಬೆಳವಣಿಗೆ ಹಾಗೂ ಆರಾಧನೆ ಎಂಬುದು.[೨]

ಇಲ್ಲಿನ ನಗರಗಳ ಪಶ್ಚಿಮದಲ್ಲಿ ರಕ್ಷಣಾರ್ಥವಾಗಿ ಕೋಟೆಯ ಗೋಡೆ ಸಾರ್ವಜನಿಕ ಬಳಕೆಗಾಗಿ ನಿರ್ಮಿಸಿರುವ ಬೃಹತ್ ಗಾತ್ರದ, ಸಭಾಗೃಹಗಳು, ಕಣಜಗಳು, ಸ್ನಾನಗೃಹಗಳು ದೇವಾಲಯಗಳಾಗಿರ ಬಹುದಾದ ಕಟ್ಟಡಗಳು ಇವು ಪ್ರಾಚೀನ ಕಾಲದ ವಾಸ್ತುಶಿಲ್ಪ ನಿರ್ಮಿತಗಳಿಗೆ ಸಾಕ್ಷಿಯಾಗಿವೆ.[೩]

೩.೧.೧. ದೇವಾಲಯದ ಬೆಳವಣಿಗೆ

ತುಂಬಾ ಪ್ರಾಚೀನ ದೇಗುಲಗಳೆಂದರೆ ಗುಹೆಗಳೇ. ಹಳೆಯ ಜನರು ಸತ್ತವರನ್ನು ಶವಸಂಸ್ಕಾರ ಮಾಡುತ್ತಿದ್ದುದು ಗುಹೆಗಳಲ್ಲೇ. ಹೊರಗೆ ಎಲ್ಲಿಯಾದರೂ ಶವಸಂಸ್ಕಾರಮಾಡಿದರೆ ಸ್ಮಾರಕ ಕುಂಬವನ್ನು ಗುಹೆಯೊಳಗೆ ಅಡಗಿಸಿಡುತ್ತಿದ್ದರು. ಗುಹೆಯೆಂದರೆ ಸುರಕ್ಷಿತವಾದ ಪ್ರದೇಶ ಎಂದು ಮಾತ್ರವಲ್ಲದೆ, ಹೆಣವಾಗಲಿ, ಶವಸಂಸ್ಕಾರಮಾಡಿದ ಅವಶೇಷಗಳಾಗಲಿ ಬಹು ಕಾಲ ಕೆಡದೆ ಇರುವುದು ಗುಹೆಯಲ್ಲಿ ಸಾಧ್ಯ ಎಂಬ ಕಾರಣದಿಂದ ಈ ಪದ್ಧತಿಯು ಹಿಂದೆ ಕಂಡುಬರುತ್ತಿತ್ತು. ಗುಹೆಯಲ್ಲಿ ಚೇತನ ಅಡಗಿರುವ ಕಲ್ಪನೆಯು ಸಹಜವಾಗಿಯೆ ಮೂಡಿಬಂದಿರಬೆಕು.

ಉಪನಿಷತ್ತುಗಳಲ್ಲಿ 'ಹೃದಯ ಗುಹೆ' ಎಂಬ ಪ್ರಕ್ರಿಯ ಮೊದಲಾದುದೂ ಇದೇ ಹಿನ್ನೆಲೆಯಲ್ಲಿಯೇ ಇರಬೇಕು. ಪ್ರಕೃತಿಸಿದ್ಧವಾದ ಗುಹೆ ಇಲ್ಲದ ಕಡೆ ಜನರೇ ಗುಹೆಯನ್ನು ನಿರ್ಮಿಸಬೇಕಾಗುತ್ತಿತ್ತು. ಬಂಡೆಗಳನ್ನು ಕಡೆದು ಕೊರೆದು ಸಿದ್ಧಮಾಡಿದ ಗುಹೆಗಳೊಂದಿಗೆ ಬಿದಿರುಮರ ಮಣ್ಣುಗಳಿಂದ ಗುಹೆಯಾಕಾರದಲ್ಲಿ ಮಂದಿರಗಳನ್ನು ಮಾಡುತ್ತಿದ್ದುದುಂಟು. ಹಲವು ಜನಾಂಗಗಳಲ್ಲಿ ಈ ಪದ್ದತಿ ಉಳಿದುಬಂದಿದೆ.[೪]

ದೇವಾಲಯಗಳ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಉಳಿದುಬಂದಿರುವ ಕಟ್ಟಡಗಳೆಂದರೆ ಸ್ತೂಪಗಳೇ ಆಗಿದೆ. "ಸ್ತೂಪ" ಎಂಬ ಮಾತಿಗೆ ಧಾನ್ಯದ ರಾಶಿ ಅಥವಾ ಮಣ್ಣುಗುಡ್ಡೆ ಎಂಬ ಅರ್ಥಗಳಿವೆ. ಧಾನ್ಯದ ರಾಶಿಯೆಂದರೆ ತುಂಬ ಆಗತ್ಯವಾದುದ್ದು, ಮಣ್ಣುಗುಡ್ಡೆಯೆಂದರೆ ನೆನಪನ್ನು ಉಳಿಸುವಂಥದು. 'ಸ್ತೂಪ' ಎಂಬ ಮಾತನ್ನು ಯಜುರ್ವೇದದಲ್ಲಿ ಅಗತ್ಯವಾದ ಸ್ಮಾರಕ ಎಂಬ ಅರ್ಥದಲ್ಲಿ ಬಳೆಸಿದ್ದಾರೆ

ಬೌದ್ಧರು ಅಳವಡಿಸಿಕೊಂಡ ಸ್ತೂಪದ ಕಲ್ಪನೆ ಹರವುಳ್ಳ ಅರ್ಧಗೋಳಾಕಾರದ ರಚನೆ. ಅದರ ಒಳಮೈ ಟೊಳ್ಳಾಗಿರದೆ ಕಲ್ಲು ಹರಳು ಮಣ್ಣುಗಳಿಂದ ತುಂಬಿದ್ದು ಮೇಲ್ಭಾಗದಲ್ಲಿ ಇಟ್ಟಿಗೆಗಳ ಹೊದಿಕೆಯಿರುತ್ತದೆ. ಈ ಹೊದಿಕೆಯ ಮೇಲೆ ನಯವಾದ ಕಲ್ಲು ಚಪ್ಪಡಿಗಳನ್ನು ಜೋಡಿಸಿ ಕಟ್ಟಡವನ್ನು ಮುಗಿಸುತ್ತಾರೆ. ಅದನ್ನು ಮೇದಿಯೆಂಬ ಹೆಸರಿನ ವೃತ್ತಾಕಾರದ ವೇದಿಕೆಯ ಮೇಲೆ ಕಲ್ಲು ಗುಡ್ಡದಂತೆ ಕಾಣುವ ಈ ಸ್ತೂಪವನ್ನು ಕಟ್ಟುವವರು ಹೊರ ಬರಲು ಅನುಕೂಲವಾಗುವಂತೆ ದಾರಿಯನ್ನು ವೇದಿಯು ಒಳಗೊಳ್ಳುತ್ತಿದೆ.[೫]

ಹಿಂದು ದೇವಾಲಯವು ಬೌದ್ಧಸ್ತೂಪದಿಂದ ಬೆಳದು ಬಂದದು ಎಂದು ಹೇಳುವುದು ಸರಿಯೇ. ಆದರೆ ಹೀಗೆ ಹೇಳುವಾಗ ಬೌದ್ಧಸ್ತೂಪವು ವೈದಿಕ ಸ್ತೂಪದಿಂದ ಬೆಳೆದು ಬಂದುದು ಎಂಬುದನ್ನು ವೈದಿಕ ಸ್ತೂಪಗಳು ಪ್ರಾಚೀನ ಗುಹಾಲಯಗಳ ಹಿನ್ನೆಲೆಯಿಂದ ಬಂದವು ಎಂಬುದನ್ನು ಮರೆಯಬಾರದು. ವೈದಿಕ ಸ್ತೂಪದಲ್ಲಿರುವ ಐಂದ್ರಜಾಲಿಕ ಕಲ್ಪನೆಯೇ ಬೌದ್ಧಸ್ತೂಪದಲ್ಲಿ ಇರುವುದು. ಬೌದ್ಧಸ್ತೂಪದ ಸಂಬಂಧದಲ್ಲಿಯೂ ಹಲವಾರು ಕ್ರಿಯಾವಿಧಿಗಳುಂಟು ಇವು ವೈದಿಕ ಸ್ತೂಪದಲ್ಲಿರುವಂತೆಯೇ ಕಾಣುತ್ತವೆ. ಹೀಗೆ ಕಾಲಾಂತರದಲ್ಲಿ ದೇವಾಲಯಗಳು ಭಾರತವನ್ನು ಆಳಿದ ರಾಜಮನೆತನಗಳ ದ್ರಾವಿಡ, ನಾಗರ, ವೇಸರ, ಶೈಲಿಯಲ್ಲಿ ಆಯಾ ಕಾಲಕ್ಕೆ ದೇವಾಲಯಗಳು ರಚನೆಯಾಗಿದ್ದವು ಎಂದು ತಿಳಿಯುವ ಪ್ರತೀತಿಯಾಗಿದೆ.

ಸಂಖ್ಯೆ : ೧

ಊರು : ಮೇದೂರು

ಸ್ಥಳ : ಊರ ಬಸವಣ್ಣ ದೇವಾಲಯದ ಪ್ರಾಂಗಣದಲ್ಲಿ

ಸ್ಮಾರಕ : ಸಣ್ಣ ಬಸವೇಶ್ವರ ದೇವಾಲಯ

ಧರ್ಮ : ಶೈವ

ಕಾಲ : ಕ್ರಿ.ಶ.೯–೧೦ನೆಯ ಶತಮಾನ

ಶೈಲಿ : ರಾಷ್ಟ್ರಕೂಟ

ಅಭಿಮುಖ : ಪೂರ್ವ

ಈ ದೇವಾಲಯವು ಮೂರು ಗರ್ಭಗೃಹ ಹಾಗೂ ಒಂದು ನವರಂಗವನ್ನು ಹೊಂದಿದೆ. ಬಹುಶಃ ಇದು ತ್ರಿಕೂಟ ದೇವಾಲಯ. ಪೂರ್ವಾಭಿಮುಖವಾದ ಗರ್ಭಗೃಹದಲ್ಲಿ ಲಿಂಗವಿದೆ. ಪಶ್ಚಿಮಾಭಿಮುಖವಾದ ತೆರೆದ ಗರ್ಭಗೃಹದಲ್ಲಿ ಸೂರ್ಯನ ಶಿಲ್ಪ ಮತ್ತು ದಕ್ಷಿಣಕ್ಕೆ ಅಭಿಮುಖವಾಗಿ ತೆರೆದ ಗರ್ಭಗೃಹದಲ್ಲಿ ಲಿಂಗವಿದೆ. ನವರಂಗದಲ್ಲಿ ನಾಲ್ಕು ಕಂಬಗಳು, ಭುವನೇಶ್ವರಿಯನ್ನು ಹೊತ್ತಿವೆ. ಆ ಕಂಬಗಳ ಚೌಕಾಕಾರದ ಭಾಗಗಳಲ್ಲಿ ನಟರಾಜ ಮಿಥುನ, ಮತ್ತು ಉಬ್ಬುಶಿಲ್ಪಗಳಿವೆ. ದೇವಾಲಯದ ಪ್ರವೇಶದ್ವಾರವು ದಕ್ಷಿಣಕ್ಕಿದೆ. ಈ ದೇವಾಲಯವನ್ನು ನವೀಕರಿಸುವ ಕಾಲಕ್ಕೆ ಜಂಬಿಟ್ಟಿಗೆಗಳನ್ನು ಬಳಸಿ ಕಟ್ಟಲಾಗಿದೆ. ಈ ಗುಡಿಯನ್ನು ಜನತೆಯು ಹುತ್ತದ ಗುಡಿಯೆಂದು ಸಹ ಕರೆಯುತ್ತಾರೆ.

ಗರ್ಭಗೃಹಗಳಲ್ಲಿ ಲಿಂಗಗಳು, ಸೂರ್ಯ, ನವರಂಗದಲ್ಲಿ ನಂದಿ, ಸಪ್ತಮಾತೃಕೆಯ ಫಲಕ, ಭೈರವ, ಭೈರವಿ ಮತ್ತು ನಾಗರಶಿಲ್ಪಗಳಿವೆ. ಈ ದೇವಾಲಯಕ್ಕೆ ಹೊಂದಿಕೊಂಡಂತೆ ಶಿವಶರಣೆ ನೀಲಮ್ಮನ ದೇವಾಲಯವನ್ನು ಕಟ್ಟಲಾಗಿದೆ.

ಪಟ್ಟಿಕೆಯಲ್ಲಿ ಸೂಕ್ಷ್ಮವಾದ ಮಿಥುನ ಉಬ್ಬುಶಿಲ್ಪಗಳಿವೆ. ಈ ದೇವಾಲಯವನ್ನು ನವೀಕರಿಸಿರುವುದಕ್ಕೆ ಸಾಕ್ಷಿಯಾಗಿ ಅರ್ಧಮಂಟಪದ ಗೋಡೆಯಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಶಾಸನವಿದೆ. ಮಂಟಪದಲ್ಲಿ ರಾಷ್ಟ್ರಕೂಟರ ಶೈಲಿಯಲ್ಲಿರುವ ಎರಡು ಕಂಬಗಳಿವೆ. ಈ ದೇವಾಲಯಕ್ಕೆ ಐದು ತಲಗಳಿರುವ ಸಣ್ಣ ಗಾರೆಯ ಶಿಖರವಿದ್ದು ಗರ್ಭಗೃಹದಲ್ಲಿ ಲಿಂಗವಿದೆ. ಗುಡಿಯ ಮುಂದೆ ರಾಷ್ಟ್ರಕೂಟರ ಕಾಲದ ಎರಡು ಶಾಸನಗಳಿವೆ ಹಾಗೂ ಬಿತ್ತಿಯ ಭಾಗವು ಸರಳ ಶೈಲಿಯನ್ನು ಹೊಂದಿರುವುದು ಕಂಡುಬರುತ್ತದೆ.

ಸಂಖ್ಯೆ	:	೩
ಊರು	:	ಮೇದೂರು
ಸ್ಥಳ	:	ಬಸವಣ್ಣ ದೇವಾಲಯದ ಪ್ರಾಂಗಣ
ಸ್ಮಾರಕ	:	ಬಸವಣ್ಣ ದೇವಾಲಯ
ಧರ್ಮ	:	ಶೈವ
ಕಾಲ	:	ಕ್ರಿ.ಶ.೧೦–೧೧ನೇಯ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಅಭಿಮುಖ	:	ಪೂರ್ವ

ಬಸವಣ್ಣ ದೇವಾಲಯವು ಎರಡು ಗರ್ಭಗೃಹ, ತೆರೆದ ಅರ್ಧಮಂಟಪ ಮತ್ತು ನವರಂಗಗಳನ್ನು ಹೊಂದಿದೆ. ಪೂರ್ವಾಭಿಮುಖವಾಗಿರುವ ಗರ್ಭಗೃಹದಲ್ಲಿ ಶಿವಲಿಂಗವಿದೆ. ಎರಡು ದುಂಡನೆಯ ಕಂಬಗಳಿರುವ ತೆರೆದ ಅಂತರಾಳವು ಗರ್ಭಗೃಹದ ಮುಂದಿದೆ. ನವರಂಗದಲ್ಲಿನ ನಾಲ್ಕು ಕಂಬಗಳು ಭುವನೇಶ್ವರಿಯನ್ನು ಹೊತ್ತಿವೆ. ನವರಂಗ ಮತ್ತು ಅಂತರಾಳಗಳನ್ನು ಕಬ್ಬಿಣದ ಸಲಾಕೆಗಳಿಂದ ಬೇರ್ಪಡಿಸಲಾಗಿದೆ. ಗರ್ಭಗೃಹ ಮತ್ತು ನವರಂಗದ ಹೊರಭಿತ್ತಿಯನ್ನು ಸಿಮೆಂಟ್‌ನಿಂದ ಮುಚ್ಚಲಾಗಿದೆ. ಪಶ್ಚಿಮಾಭಿಮುಖವಾದ ಗರ್ಭಗೃಹದಲ್ಲಿ ಸೂರ್ಯ ಶಿಲ್ಪವಿದ್ದಿರಬೇಕು. ನವರಂಗದ ಉತ್ತರ ಮತ್ತು ದಕ್ಷಿಣ ಗೋಡೆಯಲ್ಲಿ ಪ್ರವೇಶದ್ವಾರಗಳಿವೆ. ಹೊಸ ರೇಖಾನಗರ ಮತ್ತು ಕದಂಬ ನಾಗರ ಶೈಲಿಯ ಶಿಖರವನ್ನು ದೇವಾಲಯಕ್ಕೆ ಹೊಂದಿಸಲಾಗಿದೆ. ನವರಂಗದ ಮೇಲೆಯೂ ಒಂದು ಶಿಖರವಿದೆ.

ಗರ್ಭಗೃಹದಲ್ಲಿ ಲಿಂಗ ಮತ್ತು ನವರಂಗದಲ್ಲಿ ದೊಡ್ಡ ನಂದಿಯ ಶಿಲ್ಪಗಳಿವೆ. ಭಗ್ನಗೊಂಡ ಮಹಿಷಮರ್ದಿನಿ, ಭಗ್ನಸಪ್ತಮಾತೃಕೆ, ಫಲಕ, ಭಗ್ನಗಣಪತಿ, ಶಿವ ಮತ್ತು ಮಹಾಕಾಲನ ಮೂರ್ತಿಶಿಲ್ಪಗಳಿವೆ.

ಸಂಖ್ಯೆ	:	೪
ಊರು	:	ಮೇದೂರು

ಸ್ಥಳ	:	ಬಸವಣ್ಣ ದೇವಾಲಯದ ಆವರಣದಲ್ಲಿ
ಸ್ಮಾರಕ	:	ಈಶ್ವರ ದೇವಾಲಯ
ಧರ್ಮ	:	ಶೈವ
ಕಾಲ	:	ಕ್ರಿ.ಶ.೧೧-೧೨ನೆಯ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ
ಅಭಿಮುಖ	:	ಪೂರ್ವ

ಈಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು, ವಿಸ್ತಾರವಾದ ಅಧಿಷ್ಠಾನ, ಗರ್ಭಗೃಹದಲ್ಲಿ ಲಿಂಗವಿದೆ. ಗರ್ಭಗೃಹದ ಬಾಗಿಲುವಾಡದ ಲಲಾಟದಲ್ಲಿ ಗಜಲಕ್ಷ್ಮಿಯು ಕಾಣುವುದು. ನವರಂಗದಲ್ಲಿ ಭುವನೇಶ್ವರಿ ಇದ್ದು, ನವರಂಗದಲ್ಲಿ ಸರಳ ಶೈಲಿಯ ಕಂಬಗಳು ಕಂಡುಬರುತ್ತದೆ. ಇದು ಅರ್ಧಮಂಟಪಗಳಿಂದ ಕೂಡಿರುವ ದೇವಾಲಯವಾಗಿದೆ. ಅರ್ಧಮಂಟಪದಲ್ಲಿನ ಗೋಡೆಗೆ ಆಂಟಿಕೊಂಡಿರುವಂತೆ ಒಂದು ಶಾಸನವಿದೆ. ಇದರ ಮುಂದೆ ವೀರಗಲ್ಲನ್ನು ಇರಿಸಲಾಗಿದ್ದು ದೇವಾಲಯದ ಭಿತ್ತಿ ಭಾಗ ಸರಳಶೈಲಿಯಲ್ಲಿದೆ. ಆದರೆ ಗುಡಿಗೆ ಶಿಖರವಿಲ್ಲ.

ಸಂಖ್ಯೆ	:	೫
ಊರು	:	ಮೇದೂರು
ಸ್ಥಳ	:	ಬಸವಣ್ಣ ದೇವಾಲಯದ ಪಕ್ಕದಲ್ಲಿ
ಸ್ಮಾರಕ	:	ಸರಸ್ವತಿ ದೇವಾಲಯ
ಧರ್ಮ	:	ವೈಷ್ಣವ
ಕಾಲ	:	ಕ್ರಿ.ಶ.೧೧-೧೨ನೇಯ ಶತಮಾನ
ಶೈಲಿ	:	ಕಲ್ಯಾಣಚಾಲುಕ್ಯ
ಅಭಿಮುಖ	:	ಪೂರ್ವ

ಸರಸ್ವತಿ ದೇವಾಲಯವು ಪೂರ್ವಾಭಿಮುಖವಾಗಿದ್ದು, ಒಂದು ಗರ್ಭಗೃಹವನ್ನು ಮಾತ್ರ ಹೊಂದಿದೆ. ಈ ದೇವಾಲಯದಲ್ಲಿ ಸರಸ್ವತಿಯ ಮೂರ್ತಿಶಿಲ್ಪವಿದೆ. ಗುಡಿಗೆ ಅಧಿಷ್ಠಾನ ಮತ್ತು ಶಿಖರ ಭಾಗಗಳಲ್ಲಿ ದೇವಾಲಯದ ಮುಂದೆ ರಾಷ್ಟ್ರಕೂಟರ ಕಾಲದ ಒಂದು ಅಪ್ರಕಟಿತ ಶಾಸನವಿರುವ ವೀರಗಲ್ಲು ಇದೆ. ಈ ದೇವಾಲಯದ ಭಿತ್ತಿ ಭಾಗವು ಸರಳ ಶೈಲಿಯನ್ನು ಹೊಂದಿದೆ. ಇದಕ್ಕೆ ಯಾವುದೇ ಶಿಖರವಿಲ್ಲ.

ಸಂಖ್ಯೆ	:	೬
ಊರು	:	ಮೇದೂರು
ಸ್ಥಳ	:	ಬಸವಣ್ಣ ದೇವಾಲಯದ ಸಮೀಪ
ಸ್ಮಾರಕ	:	ಹನುಮಂತ ದೇವಾಲಯ
ಧರ್ಮ	:	ವೈಷ್ಣವ
ಕಾಲ	:	ವಿಜಯನಗರೋತ್ತರ
ಶೈಲಿ	:	ವಿಜಯನಗರೋತ್ತರ
ಅಭಿಮುಖ	:	ಪೂರ್ವ

ಹನುಮಂತ ದೇವಾಲಯವು ಪೂರ್ವಾಭಿಮುಖವಾಗಿದ್ದು, ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಹನುಮಂತ ಶಿಲ್ಪವಿದ್ದು, ಬಾಗಿಲುವಾಡದ ಮೇಲೆ ದ್ವಾರಪಾಲಕ ಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ, ನವರಂಗದ ಮೇಲಿನ ಭಾಗದಲ್ಲಿ ಭುವನೇಶ್ವರಿ ಇದೆ. ನವರಂಗದಲ್ಲಿನ ನಾಲ್ಕು ಕಂಬಗಳು ಕಲ್ಯಾಣ ಚಾಲುಕ್ಯರ ಕಾಲದ್ದಾಗಿದ್ದು, ಅವುಗಳನ್ನು ಬಸವಣ್ಣ ದೇವಾಲಯದ ಪಕ್ಕದಲ್ಲಿ ಒಂದು ಹಾಳು ದೇಗುಲದಿಂದ ತಂದು ಇಲ್ಲಿರಿಸಿ ಕಟ್ಟಲಾಗಿದೆ. ಗರ್ಭಗೃಹದ ಹೊರಭಿತ್ತಿಯಲ್ಲಿ ಗಂಡಭೇರುಂಡ ಮತ್ತು ಲಜ್ಜಾಗೌರಿ, ಉಬ್ಬುಶಿಲ್ಪಗಳು, ಮೀನಿನ ಶಿಲ್ಪಗಳು, ಹಾವಿನ ಶಿಲ್ಪಗಳಿವೆ. ಮುಖಮಂಟಪದಲ್ಲಿಯೂ ಎರಡು ವಿಜಯನಗರೋತ್ತರ ಕಾಲದ ಕಂಬಗಳಿವೆ.

ಸಂಖ್ಯೆ	:	೭
ಊರು	:	ತಡಕನಹಳ್ಳಿ
ಸ್ಥಳ	:	ಊರ ಈಶಾನ್ಯಕ್ಕೆ ಕೆರೆ ಪಕ್ಕದಲ್ಲಿ
ಸ್ಮಾರಕ	:	ಕಲ್ಲಪ್ಪ ದೇವಾಲಯ
ಧರ್ಮ	:	ಶೈವ
ಕಾಲ	:	ಆಧುನಿಕ
ಶೈಲಿ	:	ಆಧುನಿಕ
ಅಭಿಮುಖ	:	ಪೂರ್ವ

ಕಲ್ಲಪ್ಪ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ ಮತ್ತು ಸಭಾಗೃಹವನ್ನು ಹೊಂದಿದೆ. ಈ ದೇವಾಲಯದಲ್ಲಿ ಪ್ರಾಚೀನ ಲಿಂಗ ಮತ್ತು ನಂದಿಯ ಶಿಲ್ಪಗಳಿವೆ. ಪ್ರಾಚೀನ ದೇವಾಲಯದ ಗರ್ಭಗೃಹ ಹಾಗೂ ಅಂತರಾಳದ ನೆಲಗಟ್ಟು ಹಾಗೆಯೇ ಉಳಿದಿದ್ದು, ಇತ್ತೀಚಿಗೆ ಸುತ್ತಲೂ ಪ್ರಾಕಾರಗೋಡೆಯನ್ನು ನಿರ್ಮಿಸಲಾಗಿದೆ. ದೇವಾಲಯದ ಮುಂದೆ ಧ್ವಜಸ್ತಂಭವಿದೆ. ದೇವಾಲಯದ ಭಿತ್ತಿಯ ಭಾಗವು ಸರಳಶೈಲಿಯಲ್ಲಿದ್ದು. ದೇವಾಲಯದ ದಕ್ಷಿಣಕ್ಕೆ ಪ್ರವೇಶದ್ವಾರವಿದೆ. ಗುಡಿಯ ಸಮೀಪ ಒಂದು ಮಾಸ್ತಿಕಲ್ಲು ಇದೆ.

ಸಂಖ್ಯೆ	:	೮
ಊರು	:	ತೋಟಗಂಟಿ
ಸ್ಥಳ	:	ಊರ ಪ್ರವೇಶದಲ್ಲಿ
ಸ್ಮಾರಕ	:	ಹೆಗ್ಗಪ್ಪ ದೇವಾಲಯ
ಧರ್ಮ	:	ಶೈವ
ಕಾಲ	:	ಆಧುನಿಕ
ಶೈಲಿ	:	ಸ್ಥಳೀಯ
ಅಭಿಮುಖ	:	ಪೂರ್ವ

ಹೆಗ್ಗಪ್ಪ ದೇವಾಲಯದಲ್ಲಿ ಗರ್ಭಗೃಹ ಹಾಗೂ ತೆರೆದ ಅಂತರಾಳವಿದೆ. ಗರ್ಭಗೃಹದ ದ್ವಾರಬಂಧವು ಮಾತ್ರವೇ ಪ್ರಾಚೀನವಾಗಿದ್ದು, ಗರ್ಭಗೃಹದಲ್ಲಿ ಲಿಂಗವಿದೆ. ದೇವಾಲಯ ಹೊರಭಿತ್ತಿಯು ಸರಳ ಶೈಲಿಯಲ್ಲಿದೆ. ದೇವಾಲಯದ ಶಿಖರ ಆಧುನಿಕ ಶೈಲಿಯಲ್ಲಿದ್ದು. ದೇವಾಲಯವು ಪೂರ್ವಾಭಿಮುಖವಾಗಿದೆ.

೩.೨. ಮೂರ್ತಿಶಿಲ್ಪಗಳು

ಭಾರತೀಯ ಶಿಲ್ಪಕಲೆಯು ಜಗತ್ತಿನ ಶಿಲ್ಪಕಲೆಯ ಇತಿಹಾಸದಲ್ಲಿ ಉನ್ನತವಾದ ಸ್ಥಾನಮಾನವನ್ನು ಪಡೆದುಕೊಂಡಿದೆ. ಶಿಲ್ಪ ಎನ್ನುವ ಮಾತು ಮುಂದೆ ಬಹಳ ವ್ಯಾಪಕವಾದ ಅರ್ಥವನ್ನು ಪಡೆದು ಪ್ರಸಿದ್ಧವಾದ ಅರವತ್ತನಾಲ್ಕು ಕಲೆಗಳಲ್ಲಿ 'ಶಿಲ್ಪ' ಎನ್ನುವ ಹೆಸರೇ ಅನ್ವಯವಾಗುತ್ತಿತ್ತು. ಮುಂದೆ ಈ ಪದದ ವ್ಯಾಪ್ತಿ ಪರಿಮಿತಿಗೊಂಡು, ಶಿಲ್ಪ ಎಂದರೆ ಮೂರ್ತಿಗಳ ನಿರ್ಮಾಣ ಎಂಬ ಅರ್ಥಕ್ಕೆ ಸೀಮಿತವಾಯಿತು.[೭]

ಮೂರ್ತಿ ಎಂಬುದಕ್ಕೆ ಪರ್ಯಾಯವಾಗಿ ಬಳಸಿರುವ ಪ್ರತಿಮಾಬಿಂಬ, ಪ್ರಕೃತಿ, ವಿಗ್ರಹ ಎಂಬ ಪದಗಳು ಅದೊಂದು ತಾಂತ್ರಿಕ ವಸ್ತು ಎಂಬಂತೆ ಅರ್ಥ ಕೊಡುತ್ತದೆ.[೮] ಜಗತ್ ಸೃಷ್ಟಿಯು

ಯಾವಾಗ ಮೊದಲಾಯಿತೋ ಅಗಲೇ ಶಿಲ್ಪವು ಪ್ರಾರಂಭವಾಗಿದೆ ಎಂದು ವೇದವು ಹೇಳಿದೆ. ಜಗತ್ ಸೃಷ್ಟಿಯದು ಜಗತ್‌ಶಿಲ್ಪ ಎಂದು ಈ ಜಗತ್ತಿನ ಸೃಷ್ಟಿಕರ್ತನನ್ನು ಜಗತ್ ಶಿಲ್ಪಿ ಎಂದು ವರ್ಣಿಸಿರುವುದುಂಟು.[೯]

ಶಿಲ್ಪ ಶಬ್ದವು ಶ್ರೀ ಸಮುದೌ ಎಂಬ ಧಾತುವಿನಿಂದ ಉತ್ಪತ್ತಿಯಾಗಿದ್ದು ಸಮಾಧಿ ಎಂಬ ಅರ್ಥವನ್ನು ಕೊಡುವ ಈ ಧಾತುವು ತಪಸ್ಸನ್ನು ಸೂಚಿಸುತ್ತದೆ.[೧೦] ಶಿಲ್ಪವು ಬಹುವ್ಯಾಪಕವಾದದ್ದು, ಇದನ್ನು ದೇವಶಿಲ್ಪ ಮತ್ತು ಮಾನವಶಿಲ್ಪ ಎಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ದೇವಶಿಲ್ಪಗಳು ಎಂದರೆ ದೇವಸಂಬಂಧ ಇರಿಸಿಕೊಂಡಿರುವ ಶಿಲ್ಪಗಳು. ಯಜ್ಞವೇದಿ, ಯಜ್ಞಕುಂಡ, ಯಜ್ಞಪಾತ್ರೆ, ಸುವರ್ಣಾಲಂಕಾರ, ರಥ, ಆಯುಧಗಳು, ಯಜ್ಞ ಮತ್ತು ಸುವರ್ಣ, ತಾಮ್ರ, ಕಬ್ಬಿಣ, ಮರ, ಕಲ್ಲು ಎಂಬ ಪಂಚವಿಧ ವಸ್ತುಗಳಲ್ಲಿ ದೇವಾಲಯಕ್ಕೆ ಯಜ್ಞ ಮತ್ತು ಪೂಜೆಗೆ ಸಂಬಂಧಿಸಿದಂತೆ ನಿರ್ಮಿಸುವ ಶಿಲ್ಪಗಳು ದೇವಶಿಲ್ಪಗಳೆಂದು ಪರಿಗಣಿಸಲ್ಪಡುತ್ತವೆ.[೧೧] ಪ್ರಪಂಚದಲ್ಲಿ ಮಾನವರ ಉಪಯೋಗಾರ್ಥವಾಗಿ ಅವರ ಬದುಕನ್ನು ಸುಖಗೊಳಿಸಲು ಮತ್ತು ಅವರ ಆತ್ಮದ ಸಂಸ್ಕರಣೆಗೆ ಅವಶ್ಯಕವಾಗಿ ಪಂಚವಿಧ ಶಿಲ್ಪಗಳನ್ನು ನಡೆಸಲಾಗುತ್ತದೆ. ಇವು ಇಹದಲ್ಲಿ ಮನುಷ್ಯರ ಜೀವನವು ಸುಖಮಯವಾಗಲು ನೆರವಾಗುತ್ತವೆ. ಇಂತಹ ಮನುಷ್ಯೋಪಯೋಗಿ ವಸ್ತು ನಿರ್ಮಾಣವು ಮಾನವಶಿಲ್ಪ ಎಂದು ಕರೆಯಲ್ಪಡುತ್ತದೆ.[೧೨] ಹೀಗೆ ದೇವ ಮತ್ತು ಮಾನವಶಿಲ್ಪಗಳು ಮನುಷ್ಯರ ಇಹಪರ ಬದುಕನ್ನು ಸುಖಮಯಗೊಳಿಸುತ್ತವೆ. ಶಿಲ್ಪವು ಮಾನವನ ಬಹಿರಂಗ, ಅಂತರಂಗಗಳನ್ನು ಸಂಸ್ಕರಿಸುವ ಪ್ರಬಲ ಶಕ್ತಿಯಾಗಿದೆ.

೩.೨.೧ ಮೂರ್ತಿಶಿಲ್ಪಗಳ ಉಗಮ

ಮೂರ್ತಿಶಿಲ್ಪವು ಅತ್ಯಂತ ಪ್ರಾಚೀನವಾದ ಕಲೆ. ಈ ಕಲೆಗೂ ವಿಗ್ರಹಾರಾಧನೆಗೂ ನಿಕಟವಾದ ಸಂಬಂಧವಿದ್ದುದರಿಂದ ಪ್ರಾಚೀನ ಭಾರತೀಯರು ಇತರ ಜನಾಂಗದವರು ಮೂರ್ತಿಶಿಲ್ಪದಲ್ಲಿ ತೊಡಗಿದರು. ಪ್ರಾಚೀನ ಈಜಿಪ್ಟ್, ಚೈನ, ಅಸ್ಸೀರಿಯಾ, ಬ್ಯಾಬಿಲೋನಿಯ ಮತ್ತು ಗ್ರೀಸ್ ದೇಶದವರು ಈ ಕಲೆಯಲ್ಲಿ ನಿಷ್ಣಾತರಾಗಿದ್ದರು. ಈಜಿಪ್ಟ್ ಜನಾಂಗದವರು 'ರ' ಎಂಬ ಸೂರ್ಯದೇವತೆಯ ಪ್ರತಿಮೆಯನ್ನು ಮಾಡಿ ಪೂಜಿಸುತ್ತಿದ್ದರೆಂದು ತಿಳಿದುಬಂದಿದೆ.

ಪ್ರಾಚೀನ ಭಾರತದಲ್ಲಿ ವೇದಗಳ ಕಾಲದಲ್ಲಿ(ಕ್ರಿ.ಪೂ.೨೦೦೦) ಮೂರ್ತಿಶಿಲ್ಪವು ತಲೆಯತ್ತಿದ್ದಿತು. ಈ ಮಾತನ್ನು ನಾವು ಎರಡು ಕಾರಣಗಳಿಂದ ದೃಡಪಡಿಸಬಹುದು. ಮೊದಲನೆಯದಾಗಿ ವೇದದ ಋಗ್ವೇದದಲ್ಲಿಯೇ ನಮಗೆ ದೇವತೆಗಳ ಶರೀರ ಮತ್ತು ಅವಯವಗಳ ವರ್ಣನೆಯೂ ಸ್ಫುಟವಾಗಿ ದೊರೆಯುತ್ತದೆ. ಎರಡನೆಯದಾಗಿ 'ತ್ವಷ್ಟು' ಎಂಬ ದೈವಶಿಲ್ಪಿಯ ಹೆಸರು ಋಗ್ವೇದದಲ್ಲಿಯೇ ಉಕ್ತವಾಗಿದೆ. ಋಷಿಗಳು ತಮ್ಮ ದಿವ್ಯದೃಷ್ಟಿಯಿಂದ ಕಂಡ ದೇವತಾಮೂರ್ತಿಗಳನ್ನು ಸ್ಥೂಲ ಪದಾರ್ಥಗಳಿಂದ ಮಾಡಿ ತೋರಿಸುವ ಸಾಮರ್ಥ್ಯ ಹೊಂದಿದ ಶಿಲ್ಪಗಳು, ವೈಭವಯುತವಾದ ವೇದದ ಸಮಾಜದಲ್ಲಿದ್ದುದು ಸಹಜವೇ ಆಗಿದೆ. ಅಲ್ಲದೆ ಭಾರತದಲ್ಲಿ ಮೂರ್ತಿಶಿಲ್ಪದ ಪಾಚೀನತೆಯನ್ನು ಸಮರ್ಥಿಸಲು ನಮಗೆ ಅನೇಕ ಗ್ರಂಥಗಳು ಆಧಾರವಾಗಿ ದೊರೆತಿವೆ.[೧೩]

ಪ್ರಾಚೀನ ಭಾರತದಲ್ಲಿ ಮೂರ್ತಿಶಿಲ್ಪವು ಬೆಳೆದು ಬರಲು ಅನೇಕ ಕಾರಣಗಳಿದ್ದವು. ಕ್ರಮೇಣ ಇದು ಬೆಳೆಯುತ್ತಾ ಬಂದು ದೇವತಾಗಣಗಳೊಂದು, ಜಾತಿ ಮತಗಳ ವೈವಿಧ್ಯತೆ ಮತ್ತೊಂದು ಜಾತಿ, ಜೊತೆಗೆ ಇರಾನ್, ಗ್ರೀಸ್ ದೇಶಗಳಿಂದ ನಮ್ಮ ದೇಶದ ಶಿಲ್ಪದ ಮೇಲೆ ಬೀರಿದ ಬೆಂಬಲ, ಇವಲ್ಲದೆ ಗಾಂಧಾರ, ಮಥುರಾ ಮತ್ತು ಅಮರಾವತಿಗಳಲ್ಲಿ ಪ್ರತಿಮಾ ನಿರ್ಮಾಣ ಬಾಹುಳ್ಯವಾಗಿದೆ. ಆ ಪ್ರತಿಮೆಗಳನ್ನು ಶ್ಲಾಘಿಸಿ ದೇಶದ ಇತರರು ಅವುಗಳನ್ನು ಕ್ರಯಕ್ಕೆ ಕೊಳ್ಳುತ್ತಿದ್ದ ಪದ್ಧತಿ.

ಪ್ರತಿಮಾರಾಧನೆಯ ಅವಶ್ಯಕತೆ ಹೆಚ್ಚಿದಂತೆಲ್ಲಾ ದೇಶದಲ್ಲಿ ಪ್ರತಿಮೆಗಳ ಸೃಷ್ಟಿ ಹಾಗೂ ಪ್ರಮಾಣ ಮುಂತಾದವುಗಳನ್ನು ವಿದಿಸುವ ಶಾಸ್ತ್ರಗಳು ಬೆಳೆದುಬಂದವು ಇಂತಹವುಗಳಲ್ಲಿ ಮುಖ್ಯವಾದವು ಶುಕ್ರನೀತಿಸಾರ, ವಿಷ್ಣುಧರ್ಮೋತ್ತರ, ಮಯಮತ, ಮಾನಸಾರ, ಬೃಹಿತ್ಸಂಹಿತ, ಶಿಲ್ಪರತ್ನ, ಶಿಲ್ಪಸಂಗ್ರಹ, ಶಿಲ್ಪಸಾರ, ವೈಖಾನಸಾಗಮ, ಭೋಧಾಯನ, ಗೃಹ್ಯಸೂತ್ರ, ಕಾರಣಾಗಮ, ಸುಪ್ರಭೇದಾಗಮ ಮುಂತಾದವುಗಳು ವೈದಿಕ ಮತ್ತು ತಾಂತ್ರಿಕ ಪ್ರತಿಮೆಗಳನ್ನು ಪ್ರಸ್ತಾಪಿಸಿವೆ.೧೪

ಭಾರತದಲ್ಲಿನ ಮೂರ್ತಿಶಿಲ್ಪಕ್ಕೆ ಸ್ಫೂರ್ತಿ ಕೊಟ್ಟವರಲ್ಲಿ ಅಗ್ರಗಣ್ಯರಾದವರು ಜೈನರು. ಇವರು ತಮ್ಮದೆ ಆದ ಮೂರ್ತಿಗಣವನ್ನೇ ಸೃಷ್ಟಿಸಿಕೊಂಡರು. ಇವರು ಮೊಟ್ಟಮೊದಲು ತಮ್ಮ ತೀರ್ಥಂಕರರ ಪ್ರತಿಮೆಗಳನ್ನು ನಿರ್ಮಿಸಿಕೊಂಡರು. ಇವರೊಡನೆ ಜೈನಪುರಾಣಗಳಲ್ಲಿರುವ ದೇವದೇವಿಯರ ವಿಗ್ರಹಗಳ ನಿರ್ಮಾಣವು ಅನಂತರ ಪ್ರಾರಂಭವಾಯಿತು. ಅಲ್ಲದೆ ಅಗಿನ ಸಮಾಜದಲ್ಲಿ ನೆಲೆಸಿದ ಗಣೇಶ, ಶ್ರೀ ಕುಬೇರ ಮುಂತಾದ ವೈದಿಕ ವಿಗ್ರಹಗಳನ್ನು ಇವರು ಒಪ್ಪಿ ಆ ದೇವತೆಗಳ ಪ್ರತಿಮೆಗಳನ್ನು ಮಾಡ ತೊಡಗಿದರು.

ಜೈನರಂತೆ ಬೌದ್ಧರ ಮೂರ್ತಿಶಿಲ್ಪ ಚಾತುರ್ಯವು ಭಾರತೀಯ ಶಿಲ್ಪದ ಅತ್ಯಂತ ಬಲವತ್ತರವಾದ ಆಧಾರಸ್ತಂಭ ಬೌದ್ಧರ ಪ್ರತಿಮೆಗಳು ಇವು ಅವರ ದೇವತಾಗಣವನ್ನು ಅನುಸರಿಸಿದಂತಿವೆ.

ಭಾರತೀಯ ಮೂರ್ತಿಶಿಲ್ಪವನ್ನರಿಯಲಿಚ್ಛಿಸುವವರು, ಮೂರ್ತಿಗಳಲ್ಲಿ ರಚಿತವಾಗುವ ಮುದ್ರೆ ಆಸನ ಚಿಹ್ನೆ ಮತ್ತು ಆಭರಣಗಳ ಪರಿಚಯ ಮಾಡಿಕೊಳ್ಳುವುದು ಅತ್ಯಗತ್ಯ. ಮುದ್ರೆಗಳು ವೈದಿಕ ಪ್ರತಿಮೆಗಳಿಗಿಂತ ಬೌದ್ಧ ಪ್ರತಿಮೆಗಳಲ್ಲಿ ಅತಿ ಮುಖ್ಯವಾದ ಅಂಶ. ಪ್ರತಿಮೆಗಳ ಕೈ ಮತ್ತು ಬೆರಳುಗಳ ವಿಶೇಷ ಸ್ಥಿತಿಗೆ 'ಮುದ್ರೆ' ಎಂದು ಹೆಸರು. ಈ ಮುದ್ರೆಗಳು ಪ್ರತಿಮಾಸೂಚಿತವಾದ ಮೂಲ ಮೂರ್ತಿಯ ಭಾವದ್ಯೋತಕಗಳು. ಇವು ಬಹು ವಿಧವಾದರೂ ಇವುಗಳಲ್ಲಿ ಮುಖ್ಯವಾದ 'ಅಭಯ' ಮತ್ತು 'ವರದ' ಮುದ್ರೆಗಳು ಬ್ರಾಹ್ಮಣ ಮತ್ತು ಬೌದ್ಧ ಪ್ರತಿಮೆಗಳಿಗೆ ಸುಧಾರಣೆಯಾದವು. "ಅಭಯ" ಮುದ್ರೆಯಲ್ಲಿ ಅಂಗೈ ಕಾಣುವಂತೆ ಒಂದು ಕೈ ಎತ್ತಲ್ಪಟ್ಟಿರುತ್ತದೆ. ಇದು ರಕ್ಷಣಸೂಚಕ 'ವರದ' ಮುದ್ರೆಯಲ್ಲಿ ಅಂಗೈ ಕಾಣದಂತೆ ಒಂದು ಕೈ ಕೆಳಗಡೆ ಬಾಗಿರುತ್ತದೆ. ಇದು ವರಪ್ರಧಾನದ್ಯೋತಕ. ಮುದ್ರೆಗಳು ಹಸ್ತ ಮತ್ತು ಅಂಗುಲಿಗಳು ವಿಶೇಷ ಸ್ಥಿತಿಯಾದರೆ 'ಆಸನ'ಗಳು ಕಾಲು ಮತ್ತು

ಚರಣಗಳ ವಿನ್ಯಾಸ ವಿಶೇಷ ಮುದ್ರೆಗಳು ಭಾವದ್ಯೋತಕ ಆಸನಗಳು ರಮಣೀಯಕ ಪ್ರತಿಮೆಗಳು ಬಹುವಿಧವಾದ ಆಸನಗಳಲ್ಲಿ ರಚಿತವಾದವು.[೧೫]

ಸಂಖ್ಯೆ : ಒಂದು

ಗ್ರಾಮ : ಮೇದೂರು

ಸ್ಮಾರಕ : ಬಸವಣ್ಣನ ಗುಡಿ

ಕಾಲಮಾನ : ೧೧ನೇ ಶತಮಾನ

ಹೆಸರು : ಸಪ್ತಮಾತೃಕೆ

ಪ್ರತಿಮೆ ಲಕ್ಷಣಗಳು: ಈ ಪಟ್ಟಿಯಲ್ಲಿ ಕ್ರಮವಾಗಿ ಸಪ್ತಮಾತೃಕೆಯರಾದ ಬ್ರಾಹ್ಮಿಣಿ, ಕೌಮಾರಿ, ಮಹೇಶ್ವರಿ, ವೈಷ್ಣವಿ, ವರಾಹಿ, ಇಂದ್ರಾಣಿ, ಚಾಮುಂಡಿ, ಸವ್ಯಲಲಿತಾಸನದಲ್ಲಿ ಆಸೀನರಾಗಿದ್ದಾರೆ. ಚತುರ್ಮುಖವುಳ್ಳ ಬ್ರಾಹ್ಮಿಣಿ ಚತುರ್ಭುಜೆಯಾಗಿದ್ದು ಬಲಬದಿಯ ಕೆಳಗಿನ ಕೈ ವರದ ಮುದ್ರೆಯಲ್ಲಿದ್ದು, ಮೇಲಿನ ಕೈಯಲ್ಲಿ ಪಾಶವಿದೆ. ಎಡಬದಿಯ ಕೆಳಗಿನ ಕೈ ಅಭಯಮುದ್ರೆಯಲ್ಲಿದ್ದು ಮೇಲಿನ ಕೈಯಲ್ಲಿ ಹಸ್ತ ಇದ್ದು ಪೀಠದಲ್ಲಿ ಅವಳ ವಾಹನ ಹಂಸವಿದೆ.

ಮಹೇಶ್ವರಿ ಚತುರ್ಭುಜೆಯಾಗಿದ್ದು ಬಲಬದಿಯ ಕೆಳಗಿನ ಕೈ ಅಭಯಮುದ್ರೆಯಲ್ಲಿದ್ದು, ಮೇಲಿನ ಕೈಯಲ್ಲಿ ಪರಶುವಿದೆ. ಎಡಬದಿಯ ಕೆಳಗಿನ ಕೈ ವರದಮುದ್ರೆಯಲ್ಲಿದ್ದು ಮೇಲಿನ ಕೈಯಲ್ಲಿ ಅಂಕುಶವಿದೆ. ಪೀಠದಲ್ಲಿ ಅವಳ ವಾಹನ ನಂದಿ ಇದೆ. ಕೌಮಾರಿ ಚತುರ್ಭುಜೆಯಾಗಿದ್ದು, ಬಲಬದಿಯ ಕೆಳಗಿನ ಕೈ ವರದಮುದ್ರೆಯಲ್ಲಿದ್ದು, ಮೇಲಿನ ಕೈಯಲ್ಲಿ ಪತಾಕೆ ಇದೆ. ಎಡಬದಿಯ ಕೆಳಗಿನ ಕೈ ಅಭಯಮುದ್ರೆಯಲ್ಲಿದ್ದು, ಮೇಲಿನ ಕೈಯಲ್ಲಿ ಪತಾಕೆ ಇದೆ. ಎಡಬದಿಯ ಕೆಳಗಿನ ಕೈ ಅಭಯಮುದ್ರೆಯಲ್ಲಿದ್ದು, ಮೇಲಿನ ಕೈಯಲ್ಲಿ ಪರಶುವಿದೆ. ಪೀಠದಲ್ಲಿ ಅವಳ ವಾಹನ ಮಯೂರವಿದೆ. ವೈಷ್ಣವಿ ಚತುರ್ಭುಜೆಯಾಗಿದ್ದು, ಬಲಬದಿಯ ಕೆಳಗಿನ ಕೈ ವರದಮುದ್ರೆಯಲ್ಲಿದ್ದು, ಮೇಲಿನ ಕೈಯಲ್ಲಿ ಗೆರೆ ಇದೆ, ಎಡಬದಿಯ ಕೆಳಗಿನ ಕೈ ಅಭಯಮುದ್ರೆಯಲ್ಲಿದ್ದು ಮೇಲಿನ ಕೈಯಲ್ಲಿ ಖಡ್ಗವಿದೆ. ಎಡಬದಿಯ ಕೆಳಗಿನ ಕೈ ಅಭಯಮುದ್ರೆಯಲ್ಲಿದ್ದು, ಮೇಲಿನ ಕೈಯಲ್ಲಿ ಖೇಡಕವಿದೆ. ಪೀಠದಲ್ಲಿ ಅವಳ ವಾಹನ ಮಹಿಷವಿದೆ. ಇಂದ್ರಾಣಿ ಚತುರ್ಭುಜೆಯಾಗಿದ್ದು, ಬಲಬದಿಯ ಕೆಳಗಿನ ಕೈ ವರದಮುದ್ರೆಯಲ್ಲಿದ್ದು, ಮೇಲಿನ ಕೈಯಲ್ಲಿ ವಜ್ರವಿದೆ. ಎಡಬದಿಯ ಕೆಳಗಿನ ಕೈ ಅಭಯ ಮುದ್ರೆಯಲ್ಲಿದ್ದು, ಮೇಲಿನ ಕೈಯಲ್ಲಿ ಪದ್ಮವಿದೆ. ಪೀಠದಲ್ಲಿ ಅವಳ ವಾಹನ ಆನೆ ಇದೆ. ಚಾಮುಂಡಿ ಚತುರ್ಭುಜೆಯಾಗಿದ್ದು, ಅವುಗಳಲ್ಲಿ ಕ್ರಮವಾಗಿ ಖಡ್ಗ, ಚಕ್ರ, ಖೇಡಕ, ಮತ್ತು ಪಾಶಗಳಿವೆ. ಪೀಠದಲ್ಲಿ ಅವಳ ವಾಹನ ಸಿಂಹ ಇದೆ. ಬ್ರಾಹ್ಮಿಣಿ ಮತ್ತು ಮಹೇಶ್ವರಿ ಜಟಾಮುಕುಟ ಹಾಗೂ ಉಳಿದವರ ಕರಂಡಮುಕುಟ, ಕರ್ಣ ಕುಂಡಲ, ಕಂಠಹಾರ, ಮಣಿಸರ, ಕಲೆ, ವಸ್ತ್ರ, ತೋಳುಬಂದಿ, ಕೈಬಳೆ, ಕಾಲ್ಕಡಗ, ಬೆರಳುಂಗುರ

ಮೊದಲಾದ ವಸ್ತ್ರಾಭರಣಗಳನ್ನು ಧರಿಸಿದ್ದಾರೆ. ಬ್ರಾಹ್ಮಿಣಿಯ ಬಲಬದಿಯಲ್ಲಿ ವೀಣಾಪಾಣಿ, ವೀರಭದ್ರ ಮತ್ತು ಚಾಮುಂಡಿಯ ಎಡಬದಿಯಲ್ಲಿ ಗಣೇಶನಿದ್ದು ಪೀಠದಲ್ಲಿ ಅವರ ವಾಹನಗಳಾದ ನಂದಿ ಮತ್ತು ಮೂಷಕಗಳಿವೆ. ಈ ಪಟ್ಟಿಕೆಯಲ್ಲಿ ಪ್ರತಿಯೋರ್ವ ದೇವತೆಗೂ ಪ್ರತ್ಯೇಕವಾದ ಪ್ರಭಾವಳಿಯನ್ನು ತೋರಿಸಲಾಗಿದೆ.

ಸಂಖ್ಯೆ : ಎರಡು

ಗ್ರಾಮ : ಮೇದೂರು

ಸ್ಮಾರಕ : ಸರಸ್ವತಿ ದೇವಾಲಯ

ಕಾಲಮಾನ : ೧೧ನೇ ಶತಮಾನ

ಹೆಸರು : ಸರಸ್ವತಿ

ಪ್ರತಿಮೆಯ ಲಕ್ಷಣಗಳು: ಸರಸ್ವತಿ ದೇವಾಲಯದ ಗರ್ಭಗುಡಿಯಲ್ಲಿ ಸರಸ್ವತಿ ಮೂರ್ತಿಶಿಲ್ಪವು ೧೧ನೇ ಶತಮಾನದ್ದಾಗಿದೆ. ಈ ಮೂರ್ತಿಶಿಲ್ಪವು ಪಟ್ಟಿಕೆಯ ಆಕೃತಿಯ ಪೀಠದ ಮೇಲಿದೆ. ಕಿವಿಯಲ್ಲಿ ಪತ್ರಕುಂಡಲ, ಮೂಗುಬೊಟ್ಟು, ಕೊರಳಹಾರ, ಕುಚಬಂಧಕಗಳಿದ್ದು, ಭುಜಕೀರ್ತಿ, ಕೇಯೂರ, ಕೈಕಡಗ, ಬೆರಳುಗಳಲ್ಲಿ ಉಂಗುರಗಳನ್ನು ಧರಿಸಿದೆ. ಚತುರ್ಭುಜಧಾರಿಯಾದ ಈ ಮೂರ್ತಿಯ ಮೇಲಿನ ಕೈಗಳಲ್ಲಿ ಅಂಕುಶಪಾಶವಿದ್ದು, ಕೆಳಗಿನ ಕೈಯಲ್ಲಿ ಅಕ್ಷಕಮಾಲೆಯುಕ್ತ ಅಭಯ ಹಸ್ತ ಹಾಗು ಪುಸ್ತಕವಿದೆ. ಪಾದಗಳ ಮೇಲೆ ಉದ್ದ ವಸ್ತ್ರವಿದೆ. ಕಾಲುಗಳಲ್ಲಿ ದಪ್ಪನೆಯ ಕಾಲಕಡಗ, ಕಾಲಿನ ಬೆರಳುಗಳಲ್ಲಿ ಉಂಗುರಗಳಿವೆ. ಪೀಠದಲ್ಲಿ ಸರಸ್ವತಿಯ ವಾಹನ ಹಂಸವಿದೆ. ಇದರ ಸುತ್ತಲೂ ಚಿತ್ತಾರಕಾರದ ಬಳ್ಳಿಗಳನ್ನು ಕೆತ್ತಲಾಗಿದೆ. ಹಂಸಪೀಠದ ಮೇಲೆ ಒಂದು ಕೈ ಮುರಿದ ಆಸೀನ ಸರಸ್ವತಿ ಮೂಲ ವಿಗ್ರಹವಿದೆ.

ಸಂಖ್ಯೆ : ಮೂರು

ಗ್ರಾಮ : ಮೇದೂರು

ಸ್ಮಾರಕ : ಈಶ್ವರ ಗುಡಿ(ಸಣ್ಣ ಬಸವಣ್ಣನ ಗುಡಿ)

ಕಾಲಮಾನ : ೧೧ನೇ ಶತಮಾನ

ಹೆಸರು : ಲಿಂಗ

ಪ್ರತಿಮೆಯ ಲಕ್ಷಣಗಳು: ಈಶ್ವರ ಗುಡಿ(ಬಸವಣ್ಣನ ಗುಡಿ) ಗರ್ಭಗೃಹದಲ್ಲಿರುವ ಲಿಂಗವು ಸುಮಾರು ಎರಡು ಅಡಿ ಎತ್ತರ, ಒಂದೂವರೆ ಅಡಿ ಅಗಲವಿದ್ದು, ಕಪ್ಪು ಶಿಲೆಯಿಂದ ನಿರ್ಮಾಣವಾಗಿದೆ. ಇದು ಮೂರು ಹಂತಗಳಲ್ಲಿದ್ದು, ಪೀಠ, ಪಾಣಿಬಟ್ಟಲು, ಶೀರೋಭಾಗಗಳನ್ನು ಹೊಂದಿದೆ. ಪೀಠದಲ್ಲಿ ಉಪಾನ, ಜಗತಿ, ಪದ್ಮ, ತ್ರಿಪಟ್ಟೆ, ಕುಮುದ, ಗಮನ ಸೆಳೆಯುತ್ತದೆ. ನಂತರ ಪಾಣಿಬಟ್ಟಲಿನಲ್ಲಿ ಜಲ ಹರಿಯುತ್ತಿದೆ.

ಸಂಖ್ಯೆ : ನಾಲ್ಕು

ಗ್ರಾಮ : ಮೇದೂರು

ಸ್ಮಾರಕ : ಸಣ್ಣ ಬಸವಣ್ಣನ ಗುಡಿ

ಕಾಲಮಾನ : ೧೧ನೇ ಶತಮಾನ

ಹೆಸರು : ಮಹಿಷಮರ್ದಿನಿ

ಪ್ರತಿಮೆಯ ಲಕ್ಷಣಗಳು : ಸಣ್ಣ ಬಸವಣ್ಣ ದೇವಾಲಯದ ನವರಂಗದಲ್ಲಿರುವ ಮಹಿಷಮರ್ದಿನಿ ಶಿಲ್ಪವು ಸುಮಾರು ಮೂರು ಅಡಿ ಎತ್ತರ, ಒಂದು ಅಡಿ ಅಗಲ ವಿಸ್ತೀರ್ಣದಲ್ಲಿದೆ. ಚತುರ್ಭುಜ ಧಾರಿಯಾದ ಮಹಿಷಮರ್ದಿನಿಯು ದ್ವಿಭಂಗಿಯಲ್ಲಿ ಇರುವಳು. ತನ್ನ ಕೈಗಳಲ್ಲಿ ಕ್ರಮವಾಗಿ ತ್ರಿಶೂಲ, ಚಕ್ರ, ಶಂಖವನ್ನು ಹೊಂದಿದ್ದು ಇನ್ನೊಂದು ಕೈಯಲ್ಲಿ ಮಹಿಷನ ತಲೆಯನ್ನು ಹಿಡಿದಿದ್ದು ಕೊಲ್ಲುತ್ತಿರುವಳು. ಕಿರೀಟ ಮುಕುಟಧಾರಿಯಾಗಿ ಮಹಿಷಮರ್ದಿನಿಯು ಕರ್ಣಕುಂಡಲ, ಕಂಠಹಾರ, ತೋಳುಬಂದಿ, ಉದರ ಬಂಧ, ಕಾಲ್ಕಡಗ ಮೊದಲಾದ ಆಭರಣಗಳಿಂದ ಅಲಂಕೃತಗೊಂಡಿರುವಳು. ಮಹಿಷ ಮರ್ದಿನಿಯ ವಾಹನವಾದ ಸಿಂಹವನ್ನು ಕೆತ್ತಲಾಗಿದೆ. ಸುತ್ತಲೂ ಪ್ರಭಾವಳಿದ್ದು, ಶಿಲ್ಪದ ಕೆಳಗೆ ತನ್ನ ತ್ರಿಶೂಲದಿಂದ ಮಹಿಷವನ್ನು ಮರ್ಧಿಸುತ್ತಿರುವ ಸ್ವರೂಪವನ್ನು ಶಿಲ್ಪದಲ್ಲಿ ಸ್ಪಷ್ಟವಾಗಿ ರೂಪಿಸಲಾಗಿದೆ.

ಸಂಖ್ಯೆ : ಐದು

ಗ್ರಾಮ : ಮೇದೂರು

ಸ್ಮಾರಕ : ದೊಡ್ಡ ಬಸವೇಶ್ವರ ದೇವಾಲಯ

ಕಾಲಮಾನ : ೧೧ನೇ ಶತಮಾನ

ಹೆಸರು : ನಂದಿ ಶಿಲ್ಪ

ಪ್ರತಿಮೆಯ ಲಕ್ಷಣಗಳು: ಶಿವನ ವಾಹನವೇ ನಂದಿ. ಇದನ್ನು ಶಿವಲಿಂಗಕ್ಕೆ ಅಭಿಮುಖವಾಗಿ ಸ್ಥಾಪಿಸಿ ಪೂಜಿಸುತ್ತಾರೆ. ಇದನ್ನು ಪ್ರಾಚೀನವಾದ ಶೈವ ದೇವಾಲಯಗಳಲ್ಲಿ ಮಾತ್ರವಲ್ಲದೆ, ಇತ್ತೀಚೆಗೆ ನಿರ್ಮಾಣಗೊಂಡ ದೇವಾಲಯಗಳಲ್ಲಿಯೂ ಕಾಣಬಹುದು. ಪ್ರಸ್ತುತ ಅಧ್ಯಯನ ಪ್ರದೇಶದ ಎಲ್ಲಾ ಶೈವ ದೇವಾಲಯಗಳಲ್ಲೂ ನಂದಿ ಶಿಲ್ಪಗಳಿವೆ. ಆದರೆ ಇಂದು ಈಶ್ವರ ದೇವಾಲಯ, ದೊಡ್ಡ ಬಸವೇಶ್ವರ ದೇವಾಲಯ ಇತ್ಯಾದಿ ದೇವಾಲಯಗಳಲ್ಲಿ ಮಾತ್ರ ಈ ಶಿಲ್ಪವನ್ನು ಕಾಣುತ್ತೇವೆ. ಉಳಿದ ಶೈವ ದೇವಾಲಯಗಳಲ್ಲಿ ನಂದಿ ಶಿಲ್ಪಗಳಿದ್ದವು ಎಂಬುದಕ್ಕೆ ಕುರುಹುಗಳಿದ್ದು, ಕಾಲಾಂತರದಲ್ಲಿ ಕಣ್ಮರೆಯಾಗಿರುವುದು ಕಂಡುಬರುತ್ತದೆ. ಉಳಿದಿರುವ ಎಲ್ಲಾ ನಂದಿ ಶಿಲ್ಪಗಳು ಚೌಕಾಕಾರದ ಪೀಠದ ಮೇಲೆ ಆಸೀನವಾಗಿದ್ದು, ಎಡಗಾಲನ್ನು ಮುಂದೆ ಮಡಿಚಿಕೊಂಡು ಬಲಗಾಲನ್ನು ಹಿಂದಕ್ಕೆ ಎಳೆದುಕೊಂಡಿವೆ. ದೇಹವು ದಷ್ಟಪುಷ್ಟವಾಗಿರುವ ರೀತಿಯಲ್ಲಿ ರಚಿತಗೊಂಡಿವೆ.

ಸಂಖ್ಯೆ	:	ಆರು
ಗ್ರಾಮ	:	ಮೇದೂರು
ಸ್ಮಾರಕ	:	ಸಣ್ಣ ಬಸವೇಶ್ವರ ದೇವಾಲಯ
ಕಾಲಮಾನ	:	೧೧ನೇ ಶತಮಾನ
ಹೆಸರು	:	ವಿಷ್ಣು ಶಿಲ್ಪ

ಪ್ರತಿಮೆಯ ಲಕ್ಷಣಗಳು: ಸಣ್ಣ ಬಸವೇಶ್ವರ ದೇವಾಲಯದಲ್ಲಿರುವ ಶಿಲ್ಪವು ಎರಡು ಅಡಿ ಎತ್ತರ, ಒಂದೂವರೆ ಅಡಿ ಅಗಲ ವಿಸ್ತೀರ್ಣದಲ್ಲಿದೆ. ಈ ವಿಷ್ಣು ವಿಗ್ರಹದಲ್ಲಿ ವಿಷ್ಣು ಚತುರ್ಭುಜಧಾರಿಯಾಗಿದ್ದು, ಕೈಗಳಲ್ಲಿ ಪದ್ಮ, ಚಕ್ರ, ಗದಾ ಮತ್ತು ಶಂಖಗಳಿವೆ. ಬದಿಗಳಲ್ಲಿ ಭೂದೇವಿ ಮತ್ತು ಶ್ರೀದೇವಿಯರಿದ್ದಾರೆ. ಈ ಶಿಲ್ಪದ ಬದಿಗೆ ನಾಗ ನಾಗಿಣಿಯರ ಶಿಲ್ಪವೂ ಇದೆ.

ಸಂಖ್ಯೆ	:	ಏಳು
ಗ್ರಾಮ	:	ಮೇದೂರು
ಸ್ಮಾರಕ	:	ಸಣ್ಣ ಬಸವೇಶ್ವರ ದೇವಾಲಯ
ಕಾಲಮಾನ	:	೧೧ನೇ ಶತಮಾನ
ಹೆಸರು	:	ಸೂರ್ಯಶಿಲ್ಪ

ಪ್ರತಿಮೆಯ ಲಕ್ಷಣಗಳು : ಸಣ್ಣ ಬಸವೇಶ್ವರ ದೇವಾಲಯವು ತ್ರಿಕೂಟ ದೇವಾಲಯವಾಗಿದೆ. ಈ ದೇವಾಲಯದಲ್ಲಿರುವ ಸೂರ್ಯಶಿಲ್ಪವು ಎರಡು ಅಡಿ ಎತ್ತರ, ಒಂದೂವರೆ ಅಡಿ ಅಗಲ ವಿಸ್ತೀರ್ಣದಲ್ಲಿದೆ. ಇಲ್ಲಿಯ ಸೂರ್ಯನು ಸಮಭಂಗಿಯಲ್ಲಿದ್ದು, ತನ್ನ ಎರಡು ಕೈಗಳಲ್ಲಿ ಕಮಲಗಳು, ಆತನ ಬದಿಗಳಲ್ಲಿ ವಿಷ್ಣು ಮತ್ತು ಪ್ರತ್ಯೋಷೆಯರಿದ್ದಾರೆ. ಪೀಠದಲ್ಲಿ ಏಳು ಅಶ್ವಗಳಿವೆ. ಆತನ ಅರ್ಧವೃತ್ತಾಕಾರದ ಪ್ರಭಾವಳಿಯನ್ನು ಮಕರತೋರಣದಲ್ಲಿ ಹೊಂದಿದ್ದು ಅದರಲ್ಲಿ ಹನ್ನೆರಡು ರಾಶಿಗಳ ಚಿಕ್ಕ ಚಿಕ್ಕ ಚಿತ್ರಗಳಿವೆ. ಮಕರ ಸವಾರರನ್ನು ಚಿತ್ರಿಸಲಾಗಿದೆ.

ಸಂಖ್ಯೆ	:	ಎಂಟು
ಗ್ರಾಮ	:	ಮೇದೂರು
ಸ್ಮಾರಕ	:	ಸಣ್ಣ ಬಸವೇಶ್ವರ ದೇವಾಲಯ
ಕಾಲಮಾನ	:	೧೦-೧೧ನೇ ಶತಮಾನ
ಹೆಸರು	:	ಕಾಳಿ ಶಿಲ್ಪ

ಪ್ರತಿಮೆಯ ಲಕ್ಷಣಗಳು: ಈ ದೇವಾಲಯದಲ್ಲಿ ಎರಡು ಕಾಳಿಯ ಶಿಲ್ಪಗಳಿವೆ. ಕುಳಿತ ಭಂಗಿಯಲ್ಲಿರುವ(ಒಂದು ಶಿಲ್ಪದಲ್ಲಿ) ಈ ದೇವಿಯ ನಾಲ್ಕು ಕೈಗಳಲ್ಲಿ ಖಡ್ಗ, ತ್ರಿಶೂಲ, ಡಮರು (ಒಡೆದಿದೆ) ಮತ್ತು ಕಪಾಲಗಳಿವೆ. ಪ್ರೇತನನ್ನು ಪೀಠದಲ್ಲಿ ಚಿತ್ರಿಸಲಾಗಿದೆ ಹಾಗೂ ವಸ್ತ್ರಾಭರಣಗಳನ್ನು ಈಕೆ ಧರಿಸಿರುವಳು.

ಸಂಖ್ಯೆ : ಒಂಬತ್ತು

ಗ್ರಾಮ : ಮೇದೂರು

ಸ್ಮಾರಕ : ಈಶ್ವರ ದೇವಾಲಯ

ಕಾಲಮಾನ : ೯ ಮತ್ತು ೧೦ನೇ ಶತಮಾನ

ಹೆಸರು : ದ್ವಾರಪಾಲಕ

ಪ್ರತಿಮೆಯ ಲಕ್ಷಣಗಳು: ದೇವಾಲಯಗಳಲ್ಲಿ ದ್ವಾರಪಾಲಕರಿಗೆ ವಿಶೇಷ ಸ್ಥಾನವಿರುತ್ತದೆ. ದೇವಾಲಯದ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖಮಂಟಪಗಳ ದ್ವಾರಬಂಧದ ಕೆಳಭಾಗದಲ್ಲಿ ಇವರನ್ನು ಶಿಲ್ಪಿಸಿರುವುದು ರೂಢಿಯಲ್ಲಿದೆ. ದ್ವಾರಪಾಲಕರ ಶಿಲ್ಪಗಳು ಆಯಾಪಂಥಗಳಿಗೆ ಅನುಗುಣವಾಗಿ ಇರುತ್ತವೆ. ಶೈವ ದೇವಾಲಯಗಳಲ್ಲಿ ಶೈವ ದ್ವಾರಪಾಲಕರನ್ನು ವೈಷ್ಣವ ದೇವಾಲಯದಲ್ಲಿ ವೈಷ್ಣವ ದ್ವಾರಪಾಲಕರನ್ನು ಶಿಲ್ಪಿಸಲಾಗುತ್ತದೆ. ಆಯಾ ದಿಕ್ಕಿಗೆ ಅನುಗುಣವಾಗಿ ಇರುವ ದ್ವಾರಪಾಲಕರಿಗೆ ಬೇರೆ ಬೇರೆ ಹೆಸರುಗಳಿವೆ. ವೈಷ್ಣವ ದ್ವಾರಪಾಲಕರನ್ನು ಜಯ–ವಿಜಯ ಎಂದು ಕರೆಯುತ್ತಾರೆ. ಇವರ ಕೈಗಳಲ್ಲಿ ಶಂಖ, ಚಕ್ರ, ಗದೆ ಇದ್ದು ಮತ್ತೊಂದು ಹಸ್ತವು ಸೂಚಿಹಸ್ತವಾಗಿರುತ್ತದೆ. ಶೈವ ದ್ವಾರಪಾಲಕರಲ್ಲಿ ತ್ರಿಶೂಲ, ಡಮರು, ಪಾಶ, ಗದೆ ಮತ್ತು ಅಭಯ ಹಸ್ತ(ಚಿತ್ರ)ವನ್ನು ಹೊಂದಿರುತ್ತದೆ. ಇವರನ್ನು ನಂದಿಭೃಂಗಿ ಎಂದು ಕರೆಯುತ್ತಾರೆ. ಪೂರ್ವ ಭಾಗದಲ್ಲಿರುವವರನ್ನು ಚಂಡ ಪ್ರಚಂಡ ಎಂತಲೂ, ಪಶ್ಚಿಮ ದಿಕ್ಕಿನಲ್ಲಿ ಇರುವವರನ್ನು ಧಾತ್ರ–ವಿಧಾತ್ರ ಎಂತಲೂ ದಕ್ಷಿಣ ದಿಕ್ಕಿನಲ್ಲಿರುವವರನ್ನು ಭದ್ರ–ಸುಭದ್ರ ಎಂತಲೂ ಕರೆಯುತ್ತಾರೆ(ಈಶ್ವರ ಸಂಹಿತೆ, ಪದ್ಮ ಸಂಹಿತೆ). ಸಾಮಾನ್ಯವಾಗಿ ತ್ರಿಕೂಟ ದೇವಾಲಯಗಳಲ್ಲಿ ಬೇರೆ ಬೇರೆ ದಿಕ್ಕಿಗಿರುವ ದ್ವಾರಪಾಲಕರ ಶಿಲ್ಪಗಳನ್ನು ಗಮನಿಸಬಹುದು. ಶಿಲ್ಪಗಳನ್ನು ದೇವಾಲಯದ ದಕ್ಷಿಣಕ್ಕೆ ಅನುಗುಣವಾಗಿ ಶಿಲ್ಪಿಸಿರುತ್ತಾರೆ. ಇವುಗಳನ್ನು ದೇವಾಲಯದ ಎಲ್ಲಾ ಭಾಗಗಳಲ್ಲೂ ನಿರ್ಮಿಸಬಾರದೆಂದು ನಿಯಮವಿಲ್ಲ. ಆದುದರಿಂದ ಕೆಲವು ದೇವಾಲಯಗಳಲ್ಲಿ ಮುಖಮಂಟಪಗಳ ದ್ವಾರದ ಇಕ್ಕೆಲಗಳಲ್ಲಿ ಮಾತ್ರ ದ್ವಾರಪಾಲಕರ ಶಿಲ್ಪಗಳನ್ನು ಶಿಲ್ಪಿಸಿರುತ್ತಾರೆ. ಈ ತರಹದ ಶಿಲ್ಪಗಳನ್ನು ಈಶ್ವರ ದೇವಾಲಯ, ಮಾಕಳೇಶ್ವರ ದೇವಾಲಯಗಳಲ್ಲಿ ಕಾಣಬಹುದು.[೧೦]

ಸಂಖ್ಯೆ : ಹತ್ತು

ಗ್ರಾಮ : ಮೇದೂರು

ಸ್ಮಾರಕ : ಈಶ್ವರ ದೇವಾಲಯ

ಕಾಲಮಾನ : ೧೦ನೇ ಶತಮಾನ

ಹೆಸರು : ಭೈರವಶಿಲ್ಪ

ಪ್ರತಿಮೆಯ ಲಕ್ಷಣಗಳು: ಭೈರವನು ಶಿವನ ಒಂದು ಅವತಾರ. ಭೈರವನ ಶಿಲ್ಪದ ಬಗ್ಗೆ ವಿಷ್ಣು ಧರ್ಮಾತ್ತರದಲ್ಲಿ ಉಲ್ಲೇಖವಿದ್ದು ಒಟ್ಟು ೬೪ ಭೈರವನ ಅವತಾರಗಳಿವೆ. ಇವುಗಳಲ್ಲಿ ವಟುಕ ಭೈರವ ಮತ್ತು ಸೌಣಾಕರ್ಷಣ ಭೈರವ ಮುಖ್ಯವಾದವುಗಳಾಗಿವೆ.[೧೧] ಭೈರವನ ರೂಪದಲ್ಲಿದ್ದು ಪೀಠದಲ್ಲಿ ಚೇಳಿನ ಶಿಲ್ಪವಿದೆ. ಚತುರ್ಭುಜವನ್ನು ಹೊಂದಿರುವ ಭೈರವ ೩ ಕೈಗಳಲ್ಲಿ ತ್ರಿಶೂಲ, ಡಮರು ಮತ್ತು ಖಡ್ಗವನ್ನು ಹೊಂದಿದ್ದು, ಮತ್ತೊಂದು ಕೈಯಲ್ಲಿ ರುಂಡವಿದೆ, ಅದನ್ನು ನಾಯಿಯು ನೆಕ್ಕುತ್ತಿರುವ ಶಿಲ್ಪವನ್ನು ಕೆತ್ತಲಾಗಿದೆ. ಕೆಲವು ಶಿಲ್ಪಗಳಲ್ಲಿ ರುಂಡಮಾಲೆಯನ್ನು ಧರಿಸಿ ಕಿವಿಗಳಿಗೆ ಸರ್ಪದ ಕುಂಡಲಗಳನ್ನು ಧರಿಸಿರುವುದೆಂದು ಮತ್ತು ಕಾಲಲ್ಲಿ ಪಾದುಕೆಗಳನ್ನು ಧರಿಸಿರುವುದು, ಸೊಂಟದಲ್ಲಿ ಗಂಟೆಯಿರುತ್ತದೆ. ಮಂಡಿಯ ಭಾಗದಲ್ಲಿ ಸರ್ಪಸುರುಳಿ ಹಾಕಿಕೊಂಡಿರುತ್ತದೆ. ಇದರ ಇಕ್ಕೆಲಗಳಲ್ಲಿ ಬೇತಾಳಗಳು ನರ್ತಿಸುತ್ತಿರುವಂತೆ ಕೆತ್ತಲಾಗಿದೆ. ಅಲ್ಲದೇ ಸುಂದರವಾದ ಕಿರೀಟದಿಂದ ಶಿರವನ್ನು ಅಲಂಕರಿಸಲಾಗಿರುತ್ತದೆ.

ಸಂಖ್ಯೆ : ಹನ್ನೊಂದು

ಗ್ರಾಮ : ಮೇದೂರು

ಸ್ಮಾರಕ : ಮಾಕಳೇಶ್ವರ ದೇವಾಲಯ

ಕಾಲಮಾನ : ೧೧ನೇ ಶತಮಾನ

ಹೆಸರು : ವೀರಭದ್ರ

ಪ್ರತಿಮೆಯ ಲಕ್ಷಣಗಳು : ಮೇದೂರು ಗ್ರಾಮದ ಮಾಕಳೇಶ್ವರ ದೇವಾಲಯದ ಅಂತರಾಳದಲ್ಲಿ ವೀರಭದ್ರನ ಮೂರ್ತಿಶಿಲ್ಪ ಕಂಡುಬರುತ್ತದೆ. ವೀರಭದ್ರನ ಕೈಯಲ್ಲಿ ಬಿಲ್ಲು, ಬಾಣ, ಖಡ್ಗಗಳಿದ್ದು, ಒಂದು ಕೈಯನ್ನು ಖೇಟದ ಮೇಲೆ ಇಟ್ಟು ನಿಂತಿದ್ದಾನೆ. ಕೆಳಭಾಗದಲ್ಲಿ ದಕ್ಷಾಸುರನ ಉಬ್ಬು ಶಿಲ್ಪವಿದೆ. ವೀರಭದ್ರನು ಕಪಾಲಭೂಷಿತ ಕಿರೀಟವನ್ನು ತೊಟ್ಟಿದ್ದಾನೆ. ಕೊರಳಲ್ಲಿ ಹಾರವಿದೆ. ಕಾಲು ಮತ್ತು ಕೈಗಳಲ್ಲಿ ಕಡಗಗಳಿವೆ. ತೋಳುಬಂದಿಯಲ್ಲಿ ಪಟ್ಟಿಕೆಗಳಿವೆ. ಮೇಲ್ಭಾಗದಲ್ಲಿ ಎರಡು ನಾಗಶಿಲ್ಪಗಳು ಕಪ್ಪುಶಿಲೆಯಿಂದ ನಿರ್ಮಾಣಗೊಂಡಿವೆ.

ಸಂಖ್ಯೆ : ಹನ್ನೆರಡು

ಗ್ರಾಮ : ಮೇದೂರು

ಸ್ಮಾರಕ : ಮಾಚಿಕಳೇಶ್ವರ ದೇವಾಲಯ

ಕಾಲಮಾನ : ೧೧ನೇ ಶತಮಾನ

ಹೆಸರು : ಗಣೇಶ ಶಿಲ್ಪ

ಪ್ರತಿಮೆಯ ಲಕ್ಷಣಗಳು : ಮೇದೂರು ಗ್ರಾಮದಲ್ಲಿನ ಮಾಕಳೇಶ್ವರ ದೇವಾಲಯದ ಅಂತರಾಳದಲ್ಲಿ ಗಣೇಶನ ಮೂರ್ತಿಶಿಲ್ಪವಿದೆ. ಇದು ಪದ್ಮಾಸನದಲ್ಲಿದ್ದು, ನಾಲ್ಕು ಕೈಗಳನ್ನು ಹೊಂದಿದೆ. ಶಿಲ್ಪದ ಎರಡು ಕೈಗಳಲ್ಲಿ ಶಂಖ, ಪಾಶಗಳಿವೆ. ಒಂದು ಕೈ ಅಭಯಮುದ್ರೆ, ಇನ್ನೊಂದು ಕೈಯಲ್ಲಿ ಫಲವಿದೆ. ಮೂರ್ತಿಯ ಸುತ್ತಲಿನ ಭಾಗವು ತ್ರುಟಿತಗೊಂಡಿದೆ. ಗಣೇಶ ಮೂರ್ತಿಶಿಲ್ಪವು ಕಪ್ಪುಶಿಲೆಯಿಂದ ನಿರ್ಮಾಣಗೊಂಡಿದೆ.

ಸಂಖ್ಯೆ : ಹದಿಮೂರು

ಗ್ರಾಮ : ಮೇದೂರು

ಸ್ಮಾರಕ : ಹನುಮಂತ ದೇವಾಲಯ

ಕಾಲಮಾನ : ವಿಜಯನಗರೋತ್ತರ

ಹೆಸರು : ಹನುಮಂತ ಶಿಲ್ಪ

ಪ್ರತಿಮೆಯ ಲಕ್ಷಣಗಳು : ಮೇದೂರು ಗ್ರಾಮದಲ್ಲಿನ ಹನುಮಂತ ದೇವಾಲಯದ ಗರ್ಭಗೃಹದಲ್ಲಿರುವ ಈ ಮೂರ್ತಿಶಿಲ್ಪವು ವಿಜಯನಗರ ಕಾಲದ್ದಾಗಿರಬೇಕು. ಈ ಹನುಮಂತನ ಮೂರ್ತಿಯನ್ನು ಕಪ್ಪು ಶಿಲೆಯಲ್ಲಿ ಕಂಡರಿಸಲಾಗಿದೆ. ಹನುಮಂತನು ಸ್ಥಾನಿಕ ಭಂಗಿಯಲ್ಲಿದ್ದು, ಇದು ನಾಲ್ಕು ಅಡಿ ಎತ್ತರವನ್ನು ಹೊಂದಿದೆ. ಹನುಮಂತನ ಬಲಗೈ, ಅಭಯಹಸ್ತದಲ್ಲಿದ್ದರೆ, ಎಡಗೈ, ಸೊಂಟದ ಮೇಲಿದೆ. ಕೈಗಳಲ್ಲಿ ಆಯುಧಗಳು, ಕಿವಿಯಲ್ಲಿ ಕರ್ಣಕುಂಡಲ, ಕಂಠಹಾರ, ಯಜ್ಞೋಪವೀತ ಜಪಮಾಲೆ, ಉದರಬಂಧ, ಕಟೀಸೂತ್ರ, ತೋಳುಬಂದಿ, ಕೈಕಡಗ, ಕಾಲ್ಗಡಗ ಧರಿಸಿದ್ದಾನೆ. ಹನುಮಂತನ ಬಾಲ ಹಿಂಭಾಗದಿಂದ ಸುತ್ತಿ ಮೊಣಕಾಲಿನವರೆಗೂ ವಿಸ್ತರಿಸಿಕೊಂಡಿದೆ. ಈ ಮೂರ್ತಿಯ ಎರಡು ಕಾಲುಗಳ ಮಧ್ಯದಲ್ಲಿ ಸಣ್ಣದಾದ ಹನುಮಂತನ ಉಬ್ಬುಶಿಲ್ಪವಿದೆ. ಇದು ಮೂಲಮೂರ್ತಿಯ ಆಕಾರವನ್ನು ಹೊಂದಿದೆ.

ಅಡಿಟಿಪ್ಪಣಿಗಳು

೧. ಸುರೇಶ್ ಕೆ.ಎಂ. ಮತ್ತು ಇತರರು, ೨೦೦೧, **ಕರ್ನಾಟಕ ದೇವಾಲಯ ಕೋಶ, ಕೊಪ್ಪಳ ಜಿಲ್ಲೆ,** ಪು.೧೩.

೨. ಅದೇ, ಪು.೧೪-೧೫.

೩. ಜ್ಞಾನಾನಂದ ಜಿ., ೨೦೦೨, **ಶಿಲ್ಪಾದರ್ಶ, ಸಂಪುಟ ೨,** ಪು.೭.

೪. ರಾಮಚಂದ್ರರಾವ್ ಸಾ. ಕೃ., ೨೦೧೦, **ಭಾರತದ ದೇವಾಲಯ ನೆಲೆ–ಹಿನ್ನಲೆ,** ಪು.೨೩.

೫. ಅದೇ, ಪು.೨೪.

೬. ಅದೇ, ಪು.೨೮.

೭. ತಿಪ್ಪೇರುದ್ರಸ್ವಾಮಿ ಎಚ್., ೨೦೦೭, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ,** ಪು.೫೨೩.

೮. ದತ್ತಾತ್ರಯ ಜಿ., ಕುಲಕರ್ಣಿ, ೨೦೦೬, **ಪೂರ್ವೋಕ್ತ,** ಪು.೨೩೦.

೯. ಕರುಗುಂದ ಟಿ., ಪಂಕಜಾಕ್ಷ, ೨೦೦೬, **ಶಿಲ್ಪ ಸೌಂದರ್ಯ,** ಪು.೩.

೧೦. ಜ್ಞಾನಾನಂದ ಜಿ., ೨೦೦೨, **ಶಿಲ್ಪದಾರ್ಶ, ಸಂಪುಟ ೧,** ಪು.೩.

೧೧. ಅದೇ, ಪು.೩–೪.

೧೨. ಅದೇ, ಪು.೪೨.

೧೩. ತಿಪ್ಪೇಸ್ವಾಮಿ ಪಿ. ಆರ್., ೧೯೯೪, **ಶಿಲ್ಪಕಲಾ ಪ್ರಪಂಚ,** ಪು. ೭೮–೭೯.

೧೪. ಅದೇ, ಪು. ೮೧–೮೨.

೧೫. ಅದೇ, ಪು. ೮೪–೮೬.

೧೬. ಗೋಪಿನಾಥರಾವ್ ಟಿ.ವಿ., ೧೯೮೫, **ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಫಿ, ಸಂ.೧,** ಪು.೧೮೨

೧೭. ಅದೇ, ಪು.೧೭೭

ಅಧ್ಯಾಯ ನಾಲ್ಕು

ಶಾಸನ

೪.೧. ಧಾರ್ಮಿಕತೆ

೪.೨. ಸಾಮಾಜಿಕತೆ

೪.೩. ಆರ್ಥಿಕತೆ

ಅಧ್ಯಾಯ ನಾಲ್ಕು

ಶಾಸನ

ಶುದ್ಧ ಐತಿಹಾಸಿಕ ಸಾಹಿತ್ಯದ ಕೊರತೆಯಿರುವುದರಿಂದ ಪ್ರಾಚೀನ ಮತ್ತು ಮಧ್ಯಕಾಲೀನ ಭಾರತದ ಇತಿಹಾಸದ ಪುನಾರಚನೆಗೆ ವಿವಿಧ ಆಕರ ಸಾಮಗ್ರಿಗಳನ್ನು ಬಳಸುವ ಅವಶ್ಯಕತೆ ಇರುವುದು ಸರ್ವವಿಧಿತ. ಇಂತಹ ಆಕರಗಳಲ್ಲಿ ಶಾಸನಗಳಿಗೆ ಪ್ರಮುಖ ಸ್ಥಾನವಿದೆ. ಶಾಸನಗಳು ಕಲ್ಲು, ಲೋಹ, ಇಟ್ಟಿಗೆ, ಶಂಖ ಮುಂತಾದ ವಿವಿಧ ಸಾಮಗ್ರಿಗಳ ಮೇಲೆ ಲಿಖಿತವಾಗಿರುತ್ತವೆ. ರಾಜಕೀಯ ಆಗುಹೋಗುಗಳನ್ನು ದಾಖಲಿಸುವುದೇ ಶಾಸನಗಳ ಮುಖ್ಯ ಉದ್ದೇಶವಾಗಿರುವುದಿಲ್ಲ. ಕೆಲವು ಅಪವಾದಗಳನ್ನು ಹೊರತುಪಡಿಸಿದರೆ ಧಾರ್ಮಿಕ ದಾನದತ್ತಿಗಳನ್ನು ದಾಖಲಿಸುವ ಶಾಸನಗಳೇ ಹೆಚ್ಚು. ಆದರೆ ಆ ನೆಪದಲ್ಲಿ ಅವು ಅಂದಂದಿನ ಐತಿಹಾಸಿಕ ಸ್ಥಿತಿಗತಿಗಳ ಮೇಲೆ ಚೆಲ್ಲುವ ಬೆಳಕು ಅಪಾರ. ಸಾಮಾಜಿಕ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ಸಾಹಿತ್ಯದ ಸ್ವರೂಪ, ಧರ್ಮಪಂಥಗಳ ಬೆಳವಣಿಗೆ, ವಾಸ್ತುಶಿಲ್ಪ ಕಲೆಗಳ ವಿಕಾಸ ಮುಂತಾದ ಹಲವು ವಿಷಯಗಳು ಇತಿಹಾಸದ ಗರ್ಭದಲ್ಲಿರುತ್ತದೆ. ಭಾರತೀಯ ಇತಿಹಾಸಕ್ಕೆ ಸಂಬಂಧಿಸಿದಂತೆ ಬಹುಶಃ ಶಾಸನ ಆಕರಗಳಿಂದ ಒದಗುವ ಐತಿಹಾಸಿಕ ಸಾಮಗ್ರಿಯ ಹರವು ಇನ್ನಾವ ಆಕರದಿಂದಲೂ ಲಭ್ಯವಾಗದು.

ಪ್ರಸಿದ್ಧ ಶಾಸನತಜ್ಞ ಡಿ.ಸಿ.ಸರ್ಕಾರ್ ಅವರು ಒಂದೆಡೆ ಹೇಳಿರುವಂತೆ "ಭಾರತದ ಪ್ರಾಚೀನ ಮತ್ತು ಮಧ್ಯಕಾಲೀನ ಇತಿಹಾಸದ ನಮ್ಮ ೮೦ ಪ್ರತಿಶತ ಜ್ಞಾನ, ಶಾಸನ ಆಕರಗಳನ್ನೇ ಅವಲಂಬಿಸಿದೆ. ರಾಜಕೀಯ ಇತಿಹಾಸವಷ್ಟೇ ಅಲ್ಲದೇ, ಕಲೆ, ಸಾಹಿತ್ಯ, ಧರ್ಮ, ಭಾಷೆ ಮುಂತಾದ ಸಾಂಸ್ಕೃತಿಕ ಅಂಶಗಳ ಕುರಿತು ಭೌಗೋಳಿಕ ಮತ್ತು ಕಾಲಮಾನದ ಚೌಕಟ್ಟಿನಲ್ಲಿ ಇತಿಹಾಸವನ್ನು ರಚಿಸಿರುವ ನಿಟ್ಟಿನಲ್ಲಿ ಶಾಸನಗಳ ಪಾತ್ರ ಹಿರಿದಾದುದು."[೧]

ಯಾವುದೇ ಒಂದು ಸ್ಥಳೀಯ ಪ್ರದೇಶದ ಪಾರಂಪರಿಕ ಸಂಸ್ಕೃತಿಯನ್ನು ಕಟ್ಟಿಕೊಡುವಲ್ಲಿ ಶಾಸನಗಳು ಪ್ರಮುಖ ಪಾತ್ರ ವಹಿಸುತ್ತವೆ. ಶಾಸನಗಳ ಕ್ರಮಬದ್ಧವಾದ ಅಧ್ಯಯನ ಶಾಖೆಗೆ ಶಾಸನಶಾಸ್ತ್ರ ಎಂದು ಕರೆಯಲಾಗಿದೆ. ಶಾಸನ ಎಂಬ ಸಂಸ್ಕೃತ ಪದಕ್ಕೆ 'ರಾಜಾಜ್ಞೆ' ಎಂಬುದು ಮೂಲಾರ್ಥ. ಶಾಸ್ ಎಂಬ ಧಾತುವಿನಿಂಧ ಬಂದದ್ದು 'ಶಾಸನ'. ಶಾಸ್ ಧಾತುವಿಗೆ ಆಜ್ಞಾಪಿಸು, ಶಿಕ್ಷಿಸು,

ನಿಯಂತ್ರಿಸು ಎಂಬ ಅರ್ಥಗಳಿವೆ. ಶಾಸನ ಎಂಬುದು ಮೂಲತಃ ದಾನಸಂಬಂಧವಾದ ರಾಜಾಜ್ಞೆಯಾಗಿತ್ತು. ಈ ಅರ್ಥದಲ್ಲಿ ಶಾಸನಗಳೆಂದರೆ ದಾನಶಾಸನಗಳೇ. ಶಾಸನ ಎಂಬ ಪದವು 'Inscripiton' ಎಂಬ ಆಂಗ್ಲಶಬ್ದದ ಸಮಾನಾರ್ಥಕವಾಗಿ ಬಳಕೆಯಾಗುತ್ತದೆ. Epigraph ಎಂಬ ಪದ ಪ್ರಯೋಗವೂ ಉಂಟು. ಜೆ.ಎಫ್.ಫ್ಲೀಟ್ ಅವರು ಹೇಳುವಂತೆ "ಶಾಸನಗಳು ಬಹು ಸಂದರ್ಭಗಳಲ್ಲಿ ಅಧಿಕೃತ, ಲಕ್ಷಣವುಳ್ಳ ಸಾಧಾರಣವಾಗಿ ಸಂಕೀರ್ಣವಾದ ಸಂಗತಿಗಳನ್ನು ಸಾರುವ, ದಿನಾಂಕ ಇರುವ ಅಥವಾ ಇಲ್ಲದಿರುವ ಮತ್ತು ತಾವು ಪ್ರಸ್ತಾಪಿಸುವ ವಿಷಯಗಳ ಬಗ್ಗೆ ಶಾಶ್ವತವಾದ ದಾಖಲೆಗಳಾಗಬೇಕೆಂದು ಉದ್ದಿಷ್ಟವಾದ ಪ್ರಕಟಣೆಗಳು."[೨]

ಶಾಸನಗಳು ರಾಜರ ಆಜ್ಞೆಗಳನ್ನು ತಿಳಿಸುವ ಬರಹಗಳನ್ನು ಸೂಚಿಸುತ್ತವೆ ಎಂದು ಕೌಟಿಲ್ಯನು ಹೇಳಿದ್ದಾನೆ. ಮೂಲತಃ ರಾಜಾಜ್ಞೆಗಳು ಅಥವಾ ಶಾಸನಗಳು ತಾಳಪತ್ರದ ಮೇಲಿರುತ್ತಿದ್ದುವೆಂದು ತಿಳಿದುಬರುತ್ತದೆ. ಅವುಗಳನ್ನು ಶಾಶ್ವತಗೊಳಿಸುವುದಕ್ಕಾಗಿ ತಾಮ್ರಪಟಗಳ ಮೇಲೂ, ಕಲ್ಲಿನ ಮೇಲೂ ಕೊರೆದರು. ರಾಜಾಜ್ಞೆ ಎಂಬ ಮೂಲಾರ್ಥ ಕ್ರಮೇಣ ವಿಸ್ತೃತವಾಗಿದ್ದನ್ನು ಕಾಣುತ್ತೇವೆ. ದಾನ ಶಾಸನಗಳ ಸಂಖ್ಯೆ ಹೆಚ್ಚಾಯಿತು. ದೇವಾಲಯಗಳಿಗೆ, ಮಠಮಾನ್ಯಗಳಿಗೆ, ಅಗ್ರಹಾರಗಳಿಗೆ, ಬ್ರಾಹ್ಮಣರು, ಪುರೋಹಿತರಿಗೆ ದಾನಗಳನ್ನು ನೀಡುವುದು ಹೆಚ್ಚಾಯಿತು. ಮುಂದೆ ಅದರಲ್ಲಿ ರಾಜನಿಂದ ಪಡೆದ ದಾನ ಧರ್ಮದ ವಿಷಯವನ್ನು ದಾನ ಪಡೆದಿರುವ ವ್ಯಕ್ತಿ ತಮ್ಮ ಜಮೀನಿನ ಹೊಲದ ಬದುಗಳಲ್ಲಿ ಕಲ್ಲಿನಲ್ಲಿ ಕೆತ್ತಿಸಿ ನೆಡುತ್ತಿದ್ದರು. ಪ್ರತಿಯೊಂದು ಶಾಸನವು ಧರ್ಮಸ್ತೋತ್ರಗಳಿಂದಲೇ ಪ್ರಾರಂಭಗೊಳ್ಳುತ್ತವೆ. ಶಾಸನಗಳಲ್ಲಿ ಸೂರ್ಯ, ಚಂದ್ರರ ಚಿತ್ರಗಳು ಕಂಡುಬರುತ್ತದೆ. ಅಂದರೆ ಕೊಟ್ಟಿರುವ ದಾನವು ಸೂರ್ಯ, ಚಂದ್ರರು ಇರುವ ತನಕ ಇರಲಿ ಎಂಬ ಉದ್ದೇಶವಾಗಿತ್ತು. ಶಾಸನಗಳಲ್ಲಿ ಶಿಲಾ ಶಾಸನಗಳು, ತಾಮ್ರಶಾಸನಗಳು, ಸ್ತಂಭಶಾಸನಗಳು, ಗುಹಾಶಾಸನಗಳು, ದಾನಶಾಸನಗಳು, ಜೊತೆಗೆ ವೀರಗಲ್ಲುಗಳು, ಮಹಾಸತಿ ಕಲ್ಲುಗಳು, ವೀರ ಮಾಸ್ತಿಗಲ್ಲುಗಳು, ನಿಸಿಧಿಕಲ್ಲುಗಳನ್ನು ಕಾಣಬಹುದು.[೩]

ಕಾಲಾನಂತರದಲ್ಲಿ ಶಾಸನಗಳ ಮಹತ್ವ ಹೆಚ್ಚಿದಂತೆ ಧರ್ಮದ ಲೇಪನ ಮಾಡಲಾಯಿತು. ಅಶೋಕನು ತಾನು ಹಾಕಿಸಿದ ಶಾಸನಗಳನ್ನು ಧರ್ಮಶಾಸನ(ಲಿಪಿ)ಗಳೆಂದು ಕರೆದುಕೊಂಡಿದ್ದಾನೆ. Inscribe ಎಂಬುದರಿಂದ ಬಂದ ಕೆತ್ತನೆ, ಕೊರೆ, ಕಂಡರಿಸು ಎಂಬ ಅರ್ಥಕ್ಕೆ ಬದಲಾಗಿ ಆಡಳಿತ, ಪ್ರಭುತ್ವ, ಆಜ್ಞೆ, ಅಪ್ಪಣೆ, ಕಾನೂನು, ಕಟ್ಟಳೆ, ವಿಧಿ ನಿಗ್ರಹ, ಹಿಡಿತ, ಶಿಕ್ಷೆ, ದಂಡನೆ, ಶಾಸ್ತ್ರ, ಒಪ್ಪಂದ, ಕರಾರು ಎಂಬ ವ್ಯಾಪಕ ಅರ್ಥವನ್ನು ಶಾಸನ ಪಡೆದುಕೊಂಡಿತು.[೪]

ಕರ್ನಾಟಕದಲ್ಲಿ ಮೌರ್ಯರ ಕಾಲದಿಂದ ಹಿಡಿದು ಪಾಳೆಯಗಾರರ ನಂತರದ ಕಾಲದವರೆಗೂ ಶಾಸನಗಳು ಲಭ್ಯವಾಗಿದ್ದು, ಆಯಾ ಕಾಲದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕ, ದೇವಾಲಯಗಳ ನಿರ್ಮಾಣ, ವಾಸ್ತುಶಿಲ್ಪ, ಕೆರೆಗಳ ನಿರ್ಮಾಣ ಮುಂತಾದ ವಿಚಾರಗಳನ್ನು ತಿಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ಎಲ್ಲಾ ಅಂಶಗಳಿಂದ ಒಂದು

ಪ್ರದೇಶದ ಪುರಾತತ್ವದ ಪುನಾರಚನೆಗೆ ಶಾಸನಗಳು ಮುಖ್ಯ ಆಕರಗಳಾಗಿದ್ದು, ಇದರಲ್ಲಿ ಶಿಲಾಶಾಸನಗಳು, ವೀರಗಲ್ಲುಗಳು, ಮಹಾಸತಿ ಕಲ್ಲುಗಳು ಮುಂತಾದವುಗಳನ್ನು ಕಾಣಬಹುದು.

೪.೧. ಧಾರ್ಮಿಕತೆ

ಮಾನವನ ಸಾಂಸ್ಕೃತಿಕ ಬದುಕಿನ ಜೀವನಾಡಿ ಧರ್ಮ. ಮುಖ್ಯವಾಗಿ ಧರ್ಮವೇ ಭಾರತೀಯರ ಸಂಸ್ಕೃತಿಯ ಬದುಕಿಗೆ ಮಾರ್ಗದರ್ಶಿ. ಹೀಗಿರುವಾಗ ಭಾರತದಲ್ಲಿ ಕ್ರಿ.ಪೂ.ದಿಂದಲೇ ಅಸ್ತಿತ್ವದಲ್ಲಿದ್ದ ಸನಾತನ ಧರ್ಮವು ನಂತರದಲ್ಲಿ ತನ್ನ ಸ್ವರೂಪದಲ್ಲಿ ಹಲವಾರು ಬದಲಾವಣೆಗಳನ್ನು ಹೊಂದಿತ್ತು. ಅಂದರೆ ಆಚಾರ–ವಿಚಾರಗಳು ಪರಿವರ್ತನೆಗೊಂಡು ಅನೇಕ ಧರ್ಮಗಳಾಗಿ ಪರಿಣಮಿಸಿದವು. ಕರ್ನಾಟಕ ತನ್ನ ಜೀವನದ ಎಲ್ಲಾ ಮುಖಗಳಲ್ಲಿಯೂ ಧರ್ಮವನ್ನು ಅಳವಡಿಸಿಕೊಂಡಿತ್ತು. ವೇದ ಉಪನಿಷತ್ತುಗಳು, ಆಗಮ ಸ್ಮೃತಿಗಳು, ಇತಿಹಾಸ, ಪುರಾಣಗಳು ನಿರೂಪಿಸಿದ ಮತ್ತು ರೂಪಿಸಿದ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಇದು ಬೆಳೆದುದಲ್ಲದೆ, ಆ ಪರಂಪರೆಯನ್ನು ಬಳಸುವುದಕ್ಕೆ ತನ್ನ ಕೊಡುಗೆಯನ್ನು ನೀಡಿತು.[೫] ಹೀಗಾಗಿ ಪ್ರಾಚೀನ ಕಾಲದಿಂದಲೂ ವಿವಿಧ ಧರ್ಮಗಳು ಬೆಳೆದು ಬಂದು, ಜನತೆಯ ಧಾರ್ಮಿಕ ಶ್ರದ್ಧೆ, ಧಾರ್ಮಿಕ ಸಮನ್ವಯತೆ, ಔದಾರ್ಯಗಳನ್ನು ಕಾಣುತ್ತೇವೆ. ಇಲ್ಲಿನ ನೆಲ, ಜಲ, ವಾಯು ಹಾಗೂ ಸೂಕ್ತ ವಾತಾವರಣ ಪ್ರಾಚೀನ ಕಾಲದಿಂದಲೂ ವಿವಿಧ ಧಾರ್ಮಿಕ ನಂಬಿಕೆಗಳನ್ನು ಹಾಗೂ ಧರ್ಮಗಳನ್ನು ಆಕರ್ಷಿಸುತ್ತಿತ್ತು. ಕರ್ನಾಟಕದಲ್ಲಿ ಕ್ರಿ.ಪೂ.ದಿಂದಲೂ ಜನಜೀವನ ಉತ್ತಮ ಗುಣಮಟ್ಟವನ್ನು ಹೊಂದಿತ್ತು ಎಂಬುದು ಇಲ್ಲಿನ ಬೃಹತ್ ಶಿಲಾಯುಗದ ಸಂಸ್ಕೃತಿಯ ನೆಲೆಗಳಿಂದ ಅಧ್ಯಯನ ಮಾಡಬಹುದಾಗಿದೆ. ಆದರೆ ವೈದಿಕ ನಂಬಿಕೆಗಳು ಈ ಕಾಲದಲ್ಲಿ ಕರ್ನಾಟಕದಲ್ಲಿ ಇದ್ದವು ಎಂದು ಹೇಳುವುದು ಕಷ್ಟಸಾಧ್ಯ. ಹೀಗಿರುವಾಗ ಕ್ರಿ.ಪೂ.೪–೩ನೇ ಶತಮಾನಗಳಲ್ಲಿ ಕರ್ನಾಟಕದಲ್ಲಿ ಜೈನ ಮತ್ತು ಬೌದ್ಧಧರ್ಮಗಳು ಪರಿಚಯಿಸಲ್ಪಟ್ಟವು. ಉದಾಹರಣೆಗೆ ಆ ಕಾಲದಲ್ಲಿಯೂ ಚಂದ್ರಗುಪ್ತಮೌರ್ಯ ಹಾಗೂ ಭದ್ರಬಾಹು ಬಂದು ನೆಲೆಸಿದ್ದರು ಎನ್ನುವುದು ಜೈನ ಪರಂಪರೆಯಿಂದ ತಿಳಿದುಬರುತ್ತದೆ.[೬]

ಕರ್ನಾಟಕದ ಅರಸುಮನೆತನಗಳು ಧರ್ಮಸಹಿಷ್ಣುತೆಯನ್ನು ಅನುಸರಿಸದ ಧರ್ಮಗಳ ಅನುಯಾಯಿಗಳಿಗೆ ಧಾರ್ಮಿಕ ಸ್ವತಂತ್ರವನ್ನು ನೀಡಿ ಆ ಕಾಲದ ರಾಜ್ಯ ಆಡಳಿತದ ಮುಖ್ಯ ಲಕ್ಷಣವಾಗಿ ಧರ್ಮ ಸಮನ್ವಯತೆ ಪ್ರಭಾವ ಬೀರಿತು. ಸ್ವಧರ್ಮದ ರಕ್ಷಣೆ ಮತ್ತು ಪರಧರ್ಮ ಸಹಿಷ್ಣುತೆ ಎನ್ನುವುದು ಅಂದಿನ ಕಾಲದ ಅರಸರ ಧ್ಯೇಯವಾಗಿತ್ತು. ಜೈನಧರ್ಮ, ಬೌದ್ಧಧರ್ಮ, ವೈಷ್ಣವಧರ್ಮ, ಶೈವಧರ್ಮಗಳು ರಾಜನಿಂದ ಮನ್ನಣೆ ಪಡೆದಿದ್ದವು. ಹೀಗಾಗಿ ಹಿರೇಕೆರೂರು ತಾಲ್ಲೂಕಿನ ಮೇದೂರು ಗ್ರಾಮದ ಧಾರ್ಮಿಕ ಸಮನ್ವಯತೆ ಹಾಗೂ ಅಂದಿನ ಧಾರ್ಮಿಕ ಸ್ಥಿತಿಯನ್ನು ಸ್ಪಷ್ಟವಾಗಿ ಮತ್ತು ನಿಖರವಾಗಿ ಗುರುತಿಸಲು ಇಲ್ಲಿ ದೊರೆತ ಶಾಸನಗಳು ಸಹಾಯಕವಾಗುತ್ತವೆ.

ಬೌದ್ಧಧರ್ಮ

ಪ್ರಾಚೀನ ಭಾರತೀಯ ಧರ್ಮಗಳಲ್ಲಿ ಒಂದಾದ ಬೌದ್ಧಧರ್ಮವು ಬುದ್ಧ ಬೋಧಿಸಿದ ಧರ್ಮವಾಗಿದೆ. ಭಾರತೀಯ ದರ್ಶನಗಳ ಜಿಜ್ಞಾಸೆಯ ಬಲದಿಂದಲೇ ಬಂದ ವಿಚಾರಗಳಲ್ಲಿ ಜೀವನದ ಸಮಸ್ಯೆಗಳನ್ನು ಸಮರ್ಪಕವಾಗಿ ಪರಿಹರಿಸಿಕೊಳ್ಳಲು ಚಿತ್ತಸ್ಥೈರ್ಯ ಹಾಗೂ ಚಿತ್ತಶುದ್ಧಿಯ ಮಾರ್ಗ ಹುಡುಕುವ ಕಾತರದಿಂದ ಹುಟ್ಟಿ ಬಂದವು. ಈ ಮಾತಿಗೆ ಉತ್ತಮ ನಿದರ್ಶನ ಬೌದ್ಧಧರ್ಮ.[೭]

ಬೌದ್ಧಧರ್ಮಕ್ಕೆ ಹಿನ್ನಲೆಯಾಗಿ ವೈದಿಕ ಸಂಸ್ಕೃತಿಯಿದೆ. ಬುದ್ಧನ ಉದಯವಾಗುವಷ್ಟರಲ್ಲೇ ಸಂಹಿತೆಗಳು ಬ್ರಾಹ್ಮಣ, ಆರಣ್ಯಕಗಳು, ಉಪನಿಷತ್ತುಗಳು ಸಿದ್ಧವಾಗಿದ್ದವು. ಸಾಂಖ್ಯದರ್ಶನವು ಯೋಗ ಪದ್ಧತಿ ಪ್ರಚಲಿತವಾಗಿದ್ದು, ವಿವಿಧ ಮತಗಳನ್ನು ಅನುಸರಿಸುತ್ತಿದ್ದ ತೀರ್ಥಂಕರರು, ಪರಿವ್ರಾಜಕರು ನಾಡಿನ ತುಂಬ ಇದ್ದರು.[೮] ಈ ಧರ್ಮವು ಕ್ರಿ.ಪೂ.೩ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಮೌರ್ಯ ಸಾಮ್ರಾಜ್ಯದ ಸಾಮ್ರಾಟನಾದ ಅಶೋಕನ ಕಾಲದಲ್ಲಿ ಪ್ರಬಲವಾಗಿತ್ತು. ಅಶೋಕನು ಬೌದ್ಧಭಿಕ್ಷುವಾದ ಮಹಾದೇವನನ್ನು ಮಹಿಷಮಂಡಲಕ್ಕೂ(ಈಗಿನ ಮೈಸೂರು) ಮತ್ತು ಬನವಾಸಿಗೂ ಕಳಿಸಿದನೆಂಬ ಉಲ್ಲೇಖವು ಕರ್ನಾಟಕಕ್ಕೆ ಬೌದ್ಧಧರ್ಮ ಪ್ರವೇಶದ ದಾಖಲೆ ಕ್ರಿ.ಶ.೬೪೦ರಲ್ಲಿ ದಕ್ಷಿಣ ಭಾರತದಲ್ಲಿ ಪ್ರವಾಸ ಮಾಡಿದ ಚೀನಿ ಯಾತ್ರಿಕನಾದ ಹೂಯನ್‌ತ್ಸಾಂಗ್‌ನು ಬೌದ್ಧಧರ್ಮದ ಮಹಾಯನ ಪಂಥವು ಕರ್ನಾಟಕದ ಭಾಗದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿ ಇತ್ತು ಎಂದು ತನ್ನ ಗ್ರಂಥದಲ್ಲಿ ಬರೆದಿದ್ದಾನೆ.[೯] ಹೀಗಿರುವ ಬೌದ್ಧಧರ್ಮವು ಹಾವೇರಿ ಜಿಲ್ಲೆಯಲ್ಲಿ ತನ್ನದೇ ಆದ ಅಸ್ತಿತ್ವವನ್ನು ಸ್ಥಾಪಿಸಿದ ಬಗ್ಗೆ ಕ್ರಿ.ಶ.೧೦೭೧ರ ಹಾನಗಲ್ಲು ತಾಲೂಕು ಕಲಕೇರಿ ಶಾಸನದಲ್ಲಿ[೧೦] ಭುವನೈಕ್ಯಮಲ್ಲ ವೀರನೊಳಂಬ ಉದಯಾದಿತ್ಯನ ರಾಣಿ ಮುಳಲದೇವಿಯು ಬೌದ್ಧರಿಗಾಗಿ ಬೌದ್ಧವಿಹಾರವನ್ನು ಕಟ್ಟಿಸುತ್ತಾಳೆ. ಇದರಿಂದ ಬೌದ್ಧಧರ್ಮದವರು ಸ್ವಲ್ಪ ಮಟ್ಟಿನ ಸಂಖ್ಯೆಯಲ್ಲಿ ಇದ್ದರು ಎಂದು ಗೊತ್ತಾಗುತ್ತದೆ. ಅದರೆ ಇಂದು ಬೌದ್ಧವಿಹಾರ ಸಂಪೂರ್ಣವಾಗಿ ನಶಿಸಿ ಹೋಗಿದೆ. ಅದರ ಕುರುಹುಗಳು ಕೂಡ ಪತ್ತೆಯಾಗಿಲ್ಲ. ಒಟ್ಟಾರೆ ಈ ಪ್ರಾಂತ್ಯದಲ್ಲಿ ಉತ್ಖನನ ಮಾಡಿದರೆ, ಆಧಾರಗಳು ಸಿಗುವ ಸಂದರ್ಭವಿದೆ. ಇದರಿಂದ ಬೌದ್ಧಧರ್ಮ ಪ್ರಭಾವದ ಮೇಲೆ ಬೆಳಕು ಚೆಲ್ಲಲು ಸಹಾಯಕವಾಗುವುದು. ಹೀಗಿರುವಾಗ ಈ ಪ್ರಾಂತ್ಯದಲ್ಲಿ ಬೌದ್ಧಧರ್ಮದ ಬಗ್ಗೆ ಶಾಸನಗಳಲ್ಲಿ ಹೆಚ್ಚಾಗಿ ಉಲ್ಲೇಖಗಳು ಇಲ್ಲದಿರುವುದು ಒಂದು ವಿಪರ್ಯಾಸ.

ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನಲ್ಲಿ ಬೌದ್ಧಧರ್ಮ ಅಷ್ಟೇನೂ ಪ್ರಮುಖ ಧರ್ಮವಾಗಿರಲಿಲ್ಲ. ಏಕೆಂದರೆ ಆ ಕಾಲದ ಶೈವ, ವೈಷ್ಣವ ಮತ್ತು ಜೈನಧರ್ಮಗಳು ಅತ್ಯಂತ ಪ್ರಭಾವಶಾಲಿಯಾದ ಧರ್ಮಗಳಾಗಿದ್ದವು. ಅಲ್ಲದೆ ಈ ಹೊತ್ತಿಗಾಗಲೇ ದಕ್ಷಿಣ ಭಾರತದಲ್ಲಿ ಬೌದ್ಧಧರ್ಮ ಬಹುತೇಕ ಕಣ್ಮರೆಯಾಗಿತ್ತು. ಪಶ್ಚಿಮ ಬಂಗಾಳದ ಭಾಗದಲ್ಲಿ ಪಾಲ ಮತ್ತು ಸೇನ ರಾಜಮನೆತನಗಳು ಮಾತ್ರ ಈ ಧಾರ್ಮಿಕ ಚಟುವಟಿಕೆಗಳನ್ನು ಮುಂದುವರಿಸಿಕೊಂಡು ಬಂದರು. ಕರ್ನಾಟಕದ

ಮಟ್ಟಿಗೆ ಪ್ರಾಯಶಃ ಕಲ್ಯಾಣ ಚಾಲುಕ್ಯರ ಕಾಲವೇ ಬೌದ್ಧಧರ್ಮ ಚಟುವಟಿಕೆಗಳಿಗೆ ಕೊನೆಯ ಕಾಲಘಟ್ಟವೆಂಬಂತೆ ತೋರುತ್ತದೆ.

ಜೈನಧರ್ಮ

ದಕ್ಷಿಣ ಭಾರತದ ಜೈನಧರ್ಮದ ಇತಿಹಾಸವೆಂದರೆ ಕರ್ನಾಟಕ ಜೈನಧರ್ಮ ಇತಿಹಾಸವೇ ಆಗಿದೆ. ಪ್ರಾಚೀನ ಕರ್ನಾಟಕದಲ್ಲಿ ಜೈನಧರ್ಮ ಒಂದು ಪ್ರಬಲಧರ್ಮವಾಗಿತ್ತು.[೧೧] ಕರ್ನಾಟಕವು ಪ್ರಾಚೀನ ಕಾಲದಿಂದ ಜೈನಧರ್ಮದ ವಾಸಸ್ಥಾನವಾಗಿದ್ದು, ಕರ್ನಾಟಕ ಪ್ರಸಿದ್ಧ ಅರಸು ಮನೆತನಗಳಾದ ಕದಂಬರು, ಗಂಗರು, ಬಾದಾಮಿ ಚಾಲುಕ್ಯರು ಹಾಗೂ ರಾಷ್ಟ್ರಕೂಟ ಆಡಳಿತ ಅವಧಿಯಲ್ಲಿ ಜೈನಧರ್ಮ ಮೇಲ್ಮೈ ಸಾಧಿಸಿತು. ನಂತರ ಬಂದ ಕಲ್ಯಾಣ ಚಾಲುಕ್ಯ ಹಾಗೂ ಹೊಯ್ಸಳರು ಜೈನಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದರು.

ಕ್ರಿ.ಪೂ.೩ನೇ ಶತಮಾನದಲ್ಲಿಯೇ ಜೈನಧರ್ಮವು ದಕ್ಷಿಣ ಭಾರತದಲ್ಲಿ ಪ್ರವೇಶ ಮಾಡಿತ್ತು. ನಂತರ ಕರ್ನಾಟಕದಲ್ಲಿ ಕ್ರಿ.ಶ.೫೪೦ರ ಅವಧಿಯ ಸುಮಾರಿಗೆ ಈ ಧರ್ಮ ಶ್ರೀಮಂತವಾಗಿ ಬೆಳೆಯಿತು. ವರ್ಧಮಾನ ಮಹಾವೀರ ಈ ಧರ್ಮದ ಸ್ಥಾಪಕನಾದನು. ಆದರೆ ಐತಿಹಾಸಿಕವಾಗಿ ಈತನೇ ಮೂಲಪುರುಷನಾಗಿದ್ದು, ಜೈನಧರ್ಮ ಗ್ರಂಥಗಳ ಹಾಗೂ ನಂಬಿಕೆಗಳ ಪ್ರಕಾರ ಮಹಾವೀರನು ೨೪ನೇ ತೀರ್ಥಂಕರನಾಗಿದ್ದು, ಅದಕ್ಕೂ ಮೊದಲು ಆಗಿ ಹೋದ ೨೩ ಜನ ತೀರ್ಥಂಕರರು ಜೈನ ಧರ್ಮವನ್ನು ಪ್ರತಿಪಾದಿಸಿದರೆಂದು ೨೨ನೇ ತೀರ್ಥಂಕರರನ್ನು ಭಾಗವತದಲ್ಲಿ ಶ್ರೀಕೃಷ್ಣನ ಸಮಕಾಲೀನರೆಂದು ಹೇಳಲಾಗಿದೆ. ರಾಜಪುತ್ರರಾಗಿ ಜನಿಸಿದ ಮಹಾವೀರನು ತನ್ನ ವೈಭವಗಳನ್ನೆಲ್ಲ ತ್ಯಜಿಸಿ ತೀರ್ಥಂಕರನಾದದ್ದು ಒಂದು ಅದ್ಭುತ ತ್ಯಾಗ ಎನ್ನಬಹುದು.[೧೨]

ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ಶಾಸನಗಳನ್ನು ಅವಲೋಕಿಸಿದಾಗ ಜೈನ ಧರ್ಮದ ಪ್ರಭುತ್ವ ಈ ಪ್ರಾಂತ್ಯದಲ್ಲಿ ಬೆಳವಣಿಗೆ ಹೊಂದಿತ್ತು ಎಂಬುದು ತಿಳಿಯುತ್ತದೆ. ಹಿರೇಕೆರೂರು ತಾಲ್ಲೂಕಿನ ಮೇದೂರು ಶಾಸನದಲ್ಲಿ[೧೩] ಸಳುಕಿ ವಂಶದ(ಚಾಲುಕ್ಯ ವಂಶದ) ರಾಜಾದಿತ್ಯರಸನಿಂದ ಮಲ್ಲವ್ವೆಯ ಬಸದಿಗೆ ದಾನ ನೀಡಿದ ಬಗ್ಗೆ ಉಲ್ಲೇಖಿಸುತ್ತದೆ.

ಶೈವ ಸಂಪ್ರದಾಯ

ಶಿವನನ್ನು ಪ್ರಮುಖ ದೈವವನ್ನಾಗಿ ಇಟ್ಟುಕೊಂಡು ಆರಾಧನೆ ಮಾಡುವ, ತನ್ಮೂಲಕ ಮುಕ್ತಿಯನ್ನು ಕಾಣುವ ಧರ್ಮವೇ ಶೈವಧರ್ಮವಾಗಿದೆ. ಭಾರತ ಖಂಡದಲ್ಲಿ ಶೈವಧರ್ಮವು ಅತ್ಯಂತ ಪ್ರಾಚೀನ ಧರ್ಮಗಳಲ್ಲಿ ಒಂದಾಗಿದ್ದು, ಶಿವೋಪಾಸನೆಯ ಇತಿಹಾಸವು ವೇದಗಳಿಗಿಂತಲೂ ಹಿಂದಕ್ಕೆ ಹೋಗುತ್ತದೆ. ಹರಪ್ಪ ಮೆಹೆಂಜೋದಾರೊಗಳ ಸೈಂಧವ ಸಂಸ್ಕೃತಿಯಲ್ಲಿ(ಸುಮಾರು ಕ್ರಿ.ಪೂ.೩೨೫೦–೨೭೫೦) ಕೊಂಬುಗಳಿರುವ ದೇವತೆಯ ಚಿತ್ರವಿರುವ ಮುದ್ರಿಕೆಗಳು, ಲಿಂಗಗಳು ದೊರಕಿವೆ. ಶಿವನು ಯೋಗಮುದ್ರೆಯಲ್ಲಿ ಕುಳಿತಿದ್ದು ಅವನ ಸುತ್ತಮುತ್ತ ಪೀಠದ ಕೆಳಗೆ ಆನೆ, ಹುಲಿ, ಖಡ್ಗಮೃಗ,

ಎಮ್ಮೆ, ಜಿಂಕೆಗಳು ಸುತ್ತುವರಿದಿವೆ. ಇದನ್ನು ಪರಿಶೀಲಿಸಿದಾಗ ಆ ವಿಗ್ರಹವು ಹಿಂದೂಧರ್ಮದ ಮಹಾಯೋಗಿಯೋ, ಪಶುಪತಿಯೋ ಆದ ಶಿವನ ಪ್ರಾಚೀನ ರೂಪದಲ್ಲಿ ಸೂಚಿಸುತ್ತಾರೆ ಎಂದು ಸರ್ ಜಾನ್‌ಮಾರ್ಷಲ್‌ರು ಅಭಿಪ್ರಾಯಪಡುತ್ತಾರೆ.[೧೪] ಕರ್ನಾಟಕದ ಪ್ರಾಚೀನ ಹಾಗೂ ಪ್ರಸಿದ್ಧ ಧರ್ಮಗಳಲ್ಲೊಂದಾದ ಶೈವಧರ್ಮವು ಅನೇಕ ಪಂಗಡಗಳನ್ನು ಹೊಂದಿದ್ದು, ಅದರ ಉಲ್ಲೇಖ ಈ ಕೆಳಗಿನಂತಿದೆ.

ಕಾಪಾಲಂ ಲಾಕುಲಂ ವಾಮಂ ಭೈರಮಂ ಪೂರ್ವ ಪಶ್ಚಿಮಂ।
ಪಂಚರಾತ್ರಂ ಪಾಶುಪತಂ ತಥಾನ್ಯಾಸಿ ಸಹಸ್ರಹ॥[೧೫]

ಕರ್ನಾಟಕದಲ್ಲಿ ಜೈನಧರ್ಮವು ಅತ್ಯಂತ ಪ್ರಬಲವಾಗಿದ್ದ ಅವಧಿಯಲ್ಲಿಯೇ ಶೈವಧರ್ಮದ ಭದ್ರ ಬುನಾದಿ ಸ್ಥಾಪಿತವಾಯಿತು. ಕರ್ನಾಟಕದ ಶೈವ ಇತಿಹಾಸದಲ್ಲಿ ಕಾಪಾಲರ ಸಂಖ್ಯೆ ಇಲ್ಲ ಎನ್ನುವಷ್ಟು ಕಡಿಮೆ. ಪಾಶುಪಾತ, ಕಾಳಾಮುಖರು, ಪ್ರಮುಖರು. ಹೀಗೆ ಹೆಚ್ಚು ಸಂಖ್ಯೆಯಲ್ಲಿರುವ ಪಾಶುಪತ ಕಾಳಾಮುಖರು ಇಲ್ಲಿನವರೋ ಅಥವಾ ಹೊರಗಿನವರೋ ಎಂಬುದು ಸ್ಪಷ್ಟವಾಗಿಲ್ಲ. ಇವರು ಕರ್ನಾಟಕಕ್ಕೆ ಯಾವಾಗ ಬಂದರು ಎನ್ನುವುದು ಸ್ಪಷ್ಟವಾಗಿ ತಿಳಿಯಬೇಕಾಗಿದೆ. ಒಟ್ಟಿನಲ್ಲಿ ಕಾಳಾಮುಖರು ಸಮಾಜದಲ್ಲಿ ಉನ್ನತ ಸ್ಥಾನ, ಪಡೆದು ಸಮಾಜ ಹಾಗೂ ಶೈವಧರ್ಮಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಕ್ರಿ.ಶ.೧೦೪೫ರ ಮೇದೂರು ಶಾಸನದಲ್ಲಿ[೧೬] ಎಡವಟ್ಟೆ–೭೦ರಲ್ಲಿ ಹೊಂದಿಕೊಂಡಿರುವ ಮೇಜವೂರ ಮಾಕಳೇಶ್ವರ ದೇವರಿಗೆ ಭೂಮಿ ಮತ್ತು ತೋಟವನ್ನು ಮಹಾಸಾಮಂತ ಬಿಜ್ಜರಸ ದಾನ ನೀಡಿದ್ದಾನೆ.

ಕ್ರಿ.ಶ.೧೦–೧೧ನೇ ಶತಮಾನದ ಮೇದೂರು ಶಾಸನದಲ್ಲಿ ಮಾಖಳಗಾವುಂಡನ ಮೇಜವೂರ ಮಾಕಳೇಶ್ವರ ದೇವಾಲಯ ಕಟ್ಟಿಸಿ ಅಗ್ನಿಭಟ್ಟಾರಕನ ಪಾದ ತೊಳೆದು ದೇವಾಲಯಕ್ಕೆ ದಾನ ನೀಡಿದ ವಿವರವಿದೆ.[೧೭]

ವೀರಶೈವ ಸಂಪ್ರದಾಯ

ಶೈವಧರ್ಮದ ವಿಕಸಿತ ರೂಪವೇ ವೀರಶೈವ ಧರ್ಮ. 'ವಿ' ಎಂಬ ಪದವು ವೀರವೆಂಬ ಪದದಿಂದ ಬಂದಿದ್ದು, 'ಮ' ಎಂದರೆ ಶಿವಜಿ ಧೈರ್ಯ ಬೋಧಕವಾದ ವಿದ್ಯೆಯಲ್ಲಿ 'ರ' ಎಂದರೆ ರಮಿಸುವವನು ಎಂದು ಅರ್ಥೈಸಲಾಗುತ್ತದೆ. ೧೨ನೇ ಶತಮಾನದಲ್ಲಿ ಶರಣರು ಪ್ರತಿಪಾದಿಸಿದ ಧರ್ಮವನ್ನು ವೀರಶೈವಧರ್ಮ ಎಂದು ಕರೆಯಲಾಗಿದೆ. ಈ ಧರ್ಮವನ್ನು ಬಿಜ್ಜಳನ ಮಂತ್ರಿ ಬಸವಣ್ಣನವರು ನಿರ್ದಿಷ್ಟ ಸ್ವರೂಪವನ್ನು ನೀಡಿ, ಪ್ರಚಾರಪಡಿಸಿದ ವೀರಶೈವ ಮತ ಅತ್ಯಂತ ಶೀಘ್ರವಾಗಿ ಕರ್ನಾಟಕದಾದ್ಯಂತ ಪ್ರಚಾರಗೊಂಡಿತು. ಇದು ಧಾರ್ಮಿಕ ಹಾಗೂ ವೈಚಾರಿಕ

ಕ್ರಾಂತಿಯಿಂದಾಗಿ ಸರ್ವಸಮನ್ವಯತೆಯ ತತ್ವವನ್ನು ತೋರಿಸಿಕೊಟ್ಟಿತು.[೧೮] ಇಂತಹ ಒಂದು ಧರ್ಮ ಹಾವೇರಿ ಜಿಲ್ಲೆಯಲ್ಲಿ ತನ್ನದೇ ಆದ ಪ್ರಭಾವವನ್ನು ಬೀರಿರುವುದನ್ನು ಅವಲೋಕಿಸಿದೆ.

ಕ್ರಿ.ಶ.೧೨೦೦ರ ಹಿರೇಕೆರೂರು ತಾಲೂಕಿನ ಶಾಸನದಲ್ಲಿ[೧೮] ಸುಪ್ರಸಿದ್ಧ ಶರಣ, ಏಕಾಂತ, ರಾಮಯ್ಯನ ಕಾರ್ಯಕ್ಷೇತ್ರ ಅಬ್ಬಲೂರು. ಕ್ರಾಂತಿಯ ನಂತರ ಬಿಜ್ಜಳ ಅಬ್ಬಲೂರಿಗೆ ಬಂದ ಬಗೆಗೆ ಶಾಸನಾಧಾರಗಳಿವೆ. ಬಿಜ್ಜಳ ದೊರೆಯೊಡನೆ ಬಸವಣ್ಣನವರೂ ಬಂದಿದ್ದರೆಂದು ಹೇಳಲಾಗುತ್ತದೆ. ಈ ಅಂಶಗಳಿಂದ ಹಾವೇರಿ ಜಿಲ್ಲೆಯಲ್ಲಿ ವೀರಶೈವಧರ್ಮ ಇರುವುದನ್ನು ಸೂಚಿಸುತ್ತದೆ. ಕ್ರಿ.ಶ.ತೇದಿರಹಿತ ಹಂಸಬಾವಿ ಶಾಸನದಲ್ಲಿ[೧೯] ಅಷ್ಟ ಮಠಗಳು ಇದ್ದುದಾಗಿ ತಿಳಿಸುತ್ತದೆ. ಅದರಲ್ಲಿ ತೊಗರಸೆ ಸಿರುಸಾಳದೇವ ಮಠ ಎಂಬ ಉಲ್ಲೇಖವಿದೆ.

ಹಿರೇಕೇರೂರು ತಾಲೂಕಿನಲ್ಲಿ ಕಂಡುಬರುವ ಗ್ರಾಮವಾದ ಮೇದೂರಿನಲ್ಲಿ ವೀರಶೈವಧರ್ಮಕ್ಕೆ ಸಂಬಂಧಿಸಿದಂತೆ ಯಾವ ಶಾಸನಗಳು ಕಂಡುಬಂದಿಲ್ಲ. ಆದರೆ ಹಾವೇರಿ ಜಿಲ್ಲೆಯ ಶಾಸನಗಳಲ್ಲಿ ತಿಳಿಯುವಂತೆ ಇಲ್ಲಿಯೂ ಕೂಡ ವೀರಶೈವಧರ್ಮ ಅಸ್ತಿತ್ವದಲ್ಲಿತ್ತು ಎಂದು ಕೆಲವೊಂದು ಶಾಸನಗಳಿಂದ ತಿಳಿಯಲಾಗಿದೆ.

ವೈಷ್ಣವ ಸಂಪ್ರದಾಯ

ಭಾರತೀಯ ಪ್ರಾಚೀನ ಧರ್ಮಗಳಲ್ಲಿ ವೈಷ್ಣವಧರ್ಮವು ಒಂದಾಗಿದೆ. ಈ ಧರ್ಮಕ್ಕೆ ವಿಷ್ಣುವೇ ಪ್ರಥಮ ಆರಾಧ್ಯ ದೈವನಾಗಿದ್ದು, ಅವನ ಅವತಾರದ ರೂಪಗಳನ್ನು ಆಯಾ ಕಾಲಘಟ್ಟಗಳಲ್ಲಿ ವಿವಿಧ ರಾಜಮನೆತನದವರು ಪೂಜಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ವೈಷ್ಣವಧರ್ಮದ ಭಾಗವಾಗಿ ಕಂಡುಬಂದ ಭಾಗವತಧರ್ಮವು ಕರ್ನಾಟಕದಲ್ಲಿ ಅದರಲ್ಲೂ ದಕ್ಷಿಣ ಭಾಗದಲ್ಲಿ ರಾಮಾನುಜರ ಆಗಮನದಿಂದ ಬೆಳವಣಿಗೆ ಹೊಂದುತ್ತಾ ಬಂದಿತ್ತು. ಜೈನ ಹಾಗೂ ಶೈವರ ಒತ್ತಡದಿಂದ ವೈಷ್ಣವರು ಹಿಂದಕ್ಕೆ ನೂಕಲ್ಪಟ್ಟರು. ವೈಷ್ಣವಧರ್ಮ ೧೨-೧೩ನೇ ಶತಮಾನದ ವೇಳೆಗೆ ತನ್ನ ಸ್ಥಾನವನ್ನು ಮರಳಿ ಪಡೆಯಿತು. ಹೀಗಾಗಿ ಶಿವನಿಗೆ ಒಂದು ಇತಿಹಾಸವಿದ್ದಂತೆ ಹಿಂದೂಧರ್ಮದಲ್ಲಿ ಅವನಷ್ಟೇ ಪ್ರಬಲವಾದ ವಿಷ್ಣುವಿಗೂ ಒಂದು ಇತಿಹಾಸವುಂಟು. ವಿಷ್ಣುವು ವೇದಗಳಲ್ಲಿ ಪ್ರಧಾನ ದೇವತೆಯಲ್ಲದಿದ್ದರೂ ಅಪ್ರಧಾನವೇನಲ್ಲ. ಅವನು ಮೂರು ಹೆಜ್ಜೆಗಳಿಂದ ಲೋಕಸಮಸ್ತವನ್ನು ಅಳಿಯುವುದನ್ನು ಉತ್ಸಾಹದಿಂದ ಋಗ್ವೇದದಲ್ಲಿ ಬಣ್ಣಿಸಲಾಗಿದೆ.[೨೦]

ಕನ್ನಡದ ಅತ್ಯಂತ ಪ್ರಾಚೀನವಾದ ಹಲ್ಮಿಡಿ ಶಾಸನ ವಿಷ್ಣುವಿನ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತದೆ. ಇದರ ಕಾಲಮಾನ ಕ್ರಿ.ಶ.೪೫೦. ಇದಕ್ಕಿಂತ ಪೂರ್ವದಿಂದಲೂ ವೈಷ್ಣವ ಧರ್ಮ ಕರ್ನಾಟಕದಲ್ಲಿ ಪ್ರಚಲಿತವಿದ್ದಿತು ಎಂದು ಹೇಳಲಾಗಿದೆ.[೨೧]

ಹಾವೇರಿ ಜಿಲ್ಲೆಯ ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ವೈಷ್ಣವಧರ್ಮ ಪ್ರಚಲಿತ ವಿದ್ದುದ್ದು ಸ್ಪಷ್ಟವಾಗುತ್ತದೆ.[೨೨] ಕ್ರಿ.ಶ.೭೫ರ ದಾಸರಕೊಪ್ಪಲು ಶಾಸನದಲ್ಲಿ[೨೩] ವೈಷ್ಣವ ಮನೆತನದ

ಉಲ್ಲೇಖವಿದ್ದು, ಗಿರಿಧರರಾಯನ ಮಕ್ಕಳಿಂದ ಭಗವಂತರಾಯ ಶ್ರೀನಿವಾಸರಾಯ, ವೆಂಕಟರಾಯರ ಶಾಸನದಲ್ಲಿ ಪ್ರಸ್ತಾಪವಿದೆ.

ಇದೇ ರೀತಿಯಲ್ಲಿ ಹಿರೇಕೆರೂರು ತಾಲ್ಲೂಕಿನಲ್ಲಿ ಕಂಡುಬರುವ ಶಾಸನ ವೈಷ್ಣವಧರ್ಮ, ಪ್ರಾಬಲ್ಯವನ್ನು ಕೂಡ ತಿಳಿಸುತ್ತದೆ. ಮೇದೂರು ಗ್ರಾಮದಿಂದ ಅನತಿದೂರದಲ್ಲಿ ಇರುವ ಕ್ರಿ.ಶ.೧೨೦೪ರ ಹಿರೇಕೆರೂರು ತಾಲೂಕಿನ ಸಾತೇನಹಳ್ಳಿಯ ಶಾಸನದಲ್ಲಿ[೨೪] ಕಾವಿಸೆಟ್ಟಿಯ ಹೆಂಡತಿ ಮಣ್ಣಲೆಸಚ್ಚಿಕವೆಯಿಂದ ನಾಗರಖಂಡ–೭೦, ಸಾತೇನಹಳ್ಳಿಯಲ್ಲಿ ಹರಿಹರೇಶ್ವರ ದೇವಾಲಯ ನಿರ್ಮಾಣ ಮತ್ತು ದಾನದ ಉಲ್ಲೇಖವಿದೆ. ಮತ್ತೆ ಕ್ರಿ.ಶ.೧೨೩೭ರ ಹಿರೇಕೆರೂರು ತಾಲೂಕಿನ ರೆಟ್ಟೆಹಳ್ಳಿ ಶಾಸನದಲ್ಲಿ[೨೫] ಕರಣದ ಕಲ್ಲರಸ ಮತ್ತು ಹಲವು ವ್ಯಾಪಾರಸ್ಥರು ಮಲ್ಲಿನಾಥ ದೇವಾಲಯಕ್ಕಾಗಿ ಮೂರು ಜಾವಿ ದೇವರಿಗೆ ಬಟ್ಟೆ ದಾನ ಉಲ್ಲೇಖವಿದೆ.

ಆದರೆ ಮೇದೂರು ಗ್ರಾಮದಲ್ಲಿ ಕಂಡುಬರುವಂತಹ ಶಾಸನದಲ್ಲಿ ವೈಷ್ಣವಧರ್ಮದ ದೇವಾಲಯ ಮತ್ತು ದಾನ ಕೊಟ್ಟ ಮಾಹಿತಿಯು ಲಭ್ಯವಾಗಿಲ್ಲ.

೪.೨. ಸಾಮಾಜಿಕತೆ

ಸಾಮಾಜಿಕ ವ್ಯವಸ್ಥೆಯಿಂದಿರುವ ಪ್ರತಿಯೊಂದು ಸಮಾಜವು ಒಂದು ಸಂಸ್ಕೃತಿಯನ್ನು ಹೊಂದಿರುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಮೌಲ್ಯಾಧಾರಿತ ಜೀವನಕ್ಕೆ ಒಳಪಟ್ಟಿರುತ್ತದೆ. ಏಕೆಂದರೆ, ಸಾಮಾಜಿಕ ಸಂಬಂಧಗಳು, ಆಚಾರ ವಿಚಾರಗಳು, ಸುಸಂಸ್ಕೃತ ಜೀವನದ ಆಗುಹೋಗುಗಳ ಜೊತೆಯಲ್ಲಿಯೇ ಸಾಮಾಜೀಕರಣ ರೂಪುಗೊಳ್ಳುತ್ತದೆ. ಇಂತಹ ವ್ಯವಸ್ಥೆಯಲ್ಲಿ ಮಾನವರೆಲ್ಲರೂ ಒಂದೆಡೆ ನೆಲೆಸಿ, ಸಮನ್ವತೆಯ ಬದುಕನ್ನು ನಡೆಸುವ ನಿಟ್ಟಿನಲ್ಲಿ ನಿರಂತರ ಪ್ರಯತ್ನವನ್ನು ಮಾಡುತ್ತಾರೆ. ಹೀಗಿರುವಾಗ 'ಪ್ರಾಚೀನ ಕರ್ನಾಟಕದಲ್ಲಿ ಸಾಮಾಜಿಕ ಪ್ರಜ್ಞೆಯಲ್ಲಿ ವ್ಯಕ್ತಿಯು ತನ್ನಷ್ಟಕ್ಕೆ ತಾನು ಬಾಳದೆ ಇತರರಿಗಾಗಿ ಬಾಳಬೇಕೆಂಬ ಅರಿವು ಅವನಿಗೆ ಸಂಪೂರ್ಣವಾಗಿ ಇದ್ದಿತು ಎಂಬುದನ್ನು ತೋರುವುದೇ ಆಗಿದೆ.[೨೬]

ಸಮಾಜವು ಸಾಮಾಜಿಕ ಪ್ರಕ್ರಿಯೆಯಲ್ಲಿ ತನ್ನನ್ನು ಒಳಪಡಿಸಿಕೊಂಡು ಮಾನವೀಯ ಮೌಲ್ಯಗಳನ್ನು ಅನುಷ್ಠಾನಗೊಳಿಸಿ, ಮಾನವ ಮಾನವನನ್ನು ಹತ್ತಿರ ತಂದು ಜನತೆಯನ್ನು ಜೊತೆಗೂಡಿಸುವ ಪ್ರಮುಖ ತಾಣವೆನಿಸಿದೆ. ಇದರ ಹಿನ್ನೆಲೆಯಲ್ಲಿ ಸಮಾಜದ ವ್ಯವಸ್ಥೆಯಲ್ಲಿ ಜಾತಿ ವ್ಯವಸ್ಥೆ, ವರ್ಗ–ವರ್ಣವ್ಯವಸ್ಥೆ, ಮಹಿಳೆಯರ ಸ್ಥಾನಮಾನ, ಕುಟುಂಬ, ವಿವಾಹ ಮತ್ತಿತರ ಅಂಶಗಳನ್ನು ಒಳಗೊಂಡಂತೆ ಕಾರ್ಯನಿರ್ವಹಿಸಲು ಅನುಮತಿ ಜೊತೆಗೆ ಸ್ಮಾರಕಗಳ ರೂಪದಲ್ಲಿ ಅಂದಿನ ಸಮಾಜದಲ್ಲಿ ಇದ್ದ ಸಾಮಾಜಿಕ ಕಾರ್ಯಪ್ರವೃತ್ತಿಯ ಜೊತೆಯಲ್ಲಿಯೇ ಅಧ್ಯಯನವನ್ನು ಕೈಗೊಂಡಾಗ ವೀರಗಲ್ಲು, ಮಾಸ್ತಿಗಲ್ಲುಗಳು, ನಿಸಿಧಿಗಲ್ಲುಗಳ ಉಲ್ಲೇಖಗಳು ಕಾಣಬರುತ್ತವೆ. ಒಟ್ಟಾರೆ ಎಲ್ಲಾ ವ್ಯವಸ್ಥೆಗಳು ಸಮಾಜೀಕರಣದಲ್ಲಿ ರೂಪುಗೊಳ್ಳುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಮೇದೂರು ಪರಿಸರದ ಪುರಾತತ್ವದ ಶಾಸನಗಳಲ್ಲಿ ಕಂಡುಬರುವ ಸಾಮಾಜಿಕ ವ್ಯವಸ್ಥೆಗಳ ಬಗ್ಗೆ ಚರ್ಚಿಸಲಾಗಿದೆ.

ಹಿರೇಕೆರೂರು ತಾಲೂಕಿನ ಮೇದೂರು ಕ್ರಿ.ಶ.೧೦೪೭[೨೭] ಮೇಜವೂರಿನ ಮಾಕಳೇಶ್ವರ ಎಂಬ ದೇವರಿಗೆ(ಮೇದೂರು) ಎಡವಟ್ಟ-೭೦ರಲ್ಲಿ ಮಹಾಸಾಮಂತ ಬಿಜ್ಜರಸನಾದ ಮಹಾಮಂಡಳೇಶ್ವರ ಚಾವುಂಡರಾಯನೆಂಬ ಅರಸ ಆಳ್ವಿಕೆಯನ್ನು ಮಾಡುತ್ತಿದ್ದನು. ಅದುವೇ ಬನವಾಸಿ ೧೨,೦೦೦ ಪ್ರಾಂತ್ಯಗಳ ನಿರ್ಮಾಣವು ಇದರ ದಾಖಲೆಯನ್ನು ತಿಳಿಸುತ್ತದೆ.

ಹಿರೇಕೆರೂರು ತಾಲೂಕಿನ ಮೇದೂರು ಕ್ರಿ.ಶ.೭೯೩-೮೧೪ ಶಾಸನ[೨೮] ಮೂರನೇ ಗೋವಿಂದನ ಆಳ್ವಿಕೆಯಲ್ಲಿ ಐದು ಜನ ಗಾವುಂಡರಿಗೆ ಭೂಮಿಯನ್ನು ದಾನ ನೀಡಿರಬಹುದೆಂದು ತಿಳಿಸಲಾಗಿದೆ.

೪.೩. ಆರ್ಥಿಕತೆ

ಯಾವುದೇ ಒಂದು ಪ್ರದೇಶದ ಅಭಿವೃದ್ಧಿ ಆ ದೇಶದ ಆರ್ಥಿಕ ಸಂಪತ್ತನ್ನು ಅವಲಂಬಿಸಿರುತ್ತದೆ. ಅದು ಅಲ್ಲಿಯ ನೈಸರ್ಗಿಕ ಸಂಪನ್ಮೂಲಗಳು ಜನಜೀವನ ಹಾಗೂ ಮಾನವರ ದುಡಿಮೆಯ ಪರಿಶ್ರಮದ ಫಲವಾಗಿರುತ್ತದೆ. ಆ ದೇಶದ ಬೆನ್ನೆಲುಬು ಆರ್ಥಿಕ ವ್ಯವಸ್ಥೆಯಾಗಿದ್ದು, ಇದು ಪ್ರಮುಖವಾಗಿ ಆರ್ಥಿಕ ಬೆಳವಣಿಗೆಯಲ್ಲಿ ಪ್ರಗತಿ ಹಂತವನ್ನು ತಿಳಿಯಲು ಹೆಚ್ಚಿನ ಮಹತ್ವವುಳ್ಳದ್ದಾಗಿದೆ. ಕೌಟಿಲ್ಯನು ಕ್ರಿ.ಪೂ.೨ನೇ ಶತಮಾನದಲ್ಲಿಯೇ ತನ್ನ ಕೃತಿ 'ಅರ್ಥಶಾಸ್ತ್ರದಲ್ಲಿ ರಾಜ್ಯದ ಆರ್ಥಿಕ ವ್ಯವಸ್ಥೆಯ ಪ್ರಾಮುಖ್ಯತೆಯನ್ನು ದೀರ್ಘವಾಗಿ ಪ್ರಸ್ತಾಪಿಸಿದ್ದಾನೆ. ಹೀಗಾಗಿ ಹಲವಾರು ವಿದ್ವಾಂಸರು ನಂತರದ ಕಾಲದಲ್ಲಿ ಆರ್ಥಿಕ ಪ್ರಾಮುಖ್ಯತೆಯನ್ನು ವಿವರಿಸಿದ್ದಾರೆ. ಹೀಗಾಗಿ ಒಂದು ದೇಶದ ಆರ್ಥಿಕ ಅಭಿವೃದ್ಧಿ ಅಲ್ಲಿ ದೊರೆಯುವ ಸಂಪನ್ಮೂಲಗಳನ್ನು ಆಧರಿಸಿರುತ್ತದೆ.

ಒಂದು ದೇಶದ ಆರ್ಥಿಕ ಬೆಳವಣಿಗೆಯ ವ್ಯವಸ್ಥೆಯು ಪ್ರಮುಖವಾಗಿ ಕೃಷಿಗೆ ಸಂಬಂಧಿಸಿದೆ. ನೀರಾವರಿಗೆ ಸಂಬಂಧಪಟ್ಟಂತೆ ಕೆರೆ, ಕಟ್ಟೆ ನಿರ್ಮಾಣ, ಬಾವಿಗಳ ಕೊರೆತ ಆ ಕಾಲದಲ್ಲಿ ಬೆಳೆಯುತ್ತಿದ್ದ ವಿಭಿನ್ನ ಬೆಳೆಗಳು ಒಂದು ಕಡೆಯಾದರೆ, ಮತ್ತೊಂದು ಕಡೆ ವಾಣಿಜ್ಯೀಕರಣಕ್ಕೆ ಸಂಬಂಧಪಟ್ಟಂತೆ ವ್ಯಾಪಾರ ಆ ಕಾಲದ ಪ್ರಮುಖ ಆರ್ಥಿಕ ಪ್ರಗತಿಯ ಒಂದು ಭಾಗವಾಗಿತ್ತು.

ಇವುಗಳ ದೃಷ್ಟಿಯಿಂದ ವ್ಯಾಪಾರದಲ್ಲಿ ಸ್ಥಳೀಯ ಆಂತರಿಕ ದೇಶ-ವಿದೇಶಗಳೊಂದಿಗೆ ವ್ಯಾಪಾರೀಕರಣದ ಹಿನ್ನೆಲೆಯಿಂದ ವ್ಯವಹಾರಗಳನ್ನು ಅಂದಿನ ಜನ ಹೊಂದಿದ್ದರು. ಪ್ರಮುಖವಾಗಿ ವ್ಯಾಪಾರೀಕರಣದ ದೃಷ್ಟಿಯಿಂದ ಅನೇಕ ಸಂಘ-ಸಂಸ್ಥೆಗಳು ಸ್ಥಾಪನೆಯಾಗಿ ಆಯ್ಯಾವೊಳೆ, ಐನೂರ್ವ್ವರು, ಗವರೆ, ಗಾತ್ರಿಕ, ತೆಲ್ಲಿಗ ಮೊದಲಾದ ಗುಂಪುಗಳು ಕಂಡುಬರುತ್ತಿದ್ದವು. ಗಾಣಿಗರು, ಬಿಲ್ಲು, ನೇಕಾರರು ಹೀಗೆ ಹಲವಾರು ಉದ್ಯೋಗಗಳು ಮತ್ತು ಕಾರ್ಖಾನೆ ಪ್ರಚಲಿತದಲ್ಲಿದ್ದಂತೆ ತೋರುತ್ತದೆ.[೨೯]

ಹಿರೇಕೆರೂರು ತಾಲೂಕಿನ ಮೇದೂರು ಶಾಸನ ಕ್ರಿ.ಶ.೧೧೧೩[೩೦] ಈ ಶಾಸನದಲ್ಲಿ ಹಣ ಭತ್ತ ಮತ್ತು ಆದಾಯ, ಹಂದರವಣ(ತೆರಿಗೆ)ಯನ್ನು ಮೇಜವೂರಿಗೆ ಮಾಕಳೇಶ್ವರ ಸ್ವಾಮಿಗೆ ನೀಡುತ್ತಿದ್ದರು ಎಂದು ಈ ಶಾಸನಗಳಲ್ಲಿ ತಿಳಿಸಲಾಗಿದೆ.

ಕೃಷಿ

ವ್ಯವಸಾಯವು ದೇಶದ ಪ್ರಗತಿಯ ಬೆನ್ನೆಲುಬು. ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಆರ್ಥಿಕ ವ್ಯವಸ್ಥೆಯನ್ನು ಶಾಸನಗಳಲ್ಲಿ ಅವಲೋಕಿಸಿದಾಗ ಆ ಕುರಿತಂತೆ ಬಹುತೇಕ ಮಾಹಿತಿಗಳು ದೊರೆಯುತ್ತವೆ. ಇತಿಹಾಸ ಪೂರ್ವಕಾಲದಿಂದಲೂ ಪಾರಂಪರಿಕವಾಗಿ ಬೆಳೆದು ಬಂದಿರುವ ಒಕ್ಕಲುತನ, ಈ ತಾಲ್ಲೂಕಿನ ಮುಖ್ಯ ಕಸುಬಾಗಿ ಪ್ರತಿನಿಧಿಸುತ್ತದೆ. ಅಲ್ಲದೆ, ಇಲ್ಲಿಯ ಜನರ ಜೀವನೋಪಾಯದ ಮಾರ್ಗವೂ ಆಗಿತ್ತು. ಆದ್ದರಿಂದಲೇ ವ್ಯವಸಾಯದ ಅಭಿವೃದ್ಧಿಯೆಂದರೆ ಒಂದು ನಾಡಿನ ಇಲ್ಲವೇ ಇಡೀ ರಾಷ್ಟ್ರದ ಅಭಿವೃದ್ಧಿಯ ಸಂಕೇತ ಎಂಬುದನ್ನು ಪ್ರಾಚೀನ ಸಾಮಾಜಿಕರು ಚೆನ್ನಾಗಿ ತಿಳಿದಿದ್ದರು.[೩೧]

ಕೃಷಿಯನ್ನು ಅವಲಂಬಿಸಲು ನಿಸರ್ಗದತ್ತವಾದ ಭೂಮಿ ಪ್ರಮುಖವಾದುದು. ತನ್ನ ಗರ್ಭದಿಂದ ಹೊರಟ ಧಾನ್ಯಗಳಿಂದ ಜನರನ್ನು ಸಾಕುವ ಭೂಮಿಯನ್ನು ತಾಯಿಯೆಂದು, ದಾನ್ಯಗಳನ್ನು ಬೆಳೆಯುವ ರೈತರನ್ನು ಭೂದೇವಿಯ ಮಕ್ಕಳೆಂದು ನಂಬಲಾಗಿತ್ತು. ಈ ದೃಷ್ಟಿಯಿಂದ ಪ್ರಾಚೀನರು ಸಾಗುವಳಿ ಭೂಮಿಯನ್ನು ನೀರು ಉಣ್ಣುವ ತತ್ವದ ಮೇಲೆ ಎರಡು ವಿಧವಾಗಿ ವಿಂಗಡಿಸಿದ್ದರು. ಅವುಗಳಲ್ಲಿ ಮಳೆ ನೀರನ್ನು ಆಶ್ರಯಿಸಿದ್ದನ್ನು ದೇವಮಾತೃಕೆಯೆಂದು ನದಿ, ಹಳ್ಳ, ಕೊಳ್ಳ, ಕೆರೆ, ಬಾವಿಗಳನ್ನು ಆಶ್ರಯಿಸಿದ್ದ ಭೂಮಿಗೆ ನದಿಮಾತೃಕೆಯೆಂದು ಕರೆಯುತ್ತಿದ್ದರು.[೩೨]

ಹಿರೇಕೆರೂರು ತಾಲ್ಲೂಕಿನಲ್ಲಿ ಕಂಡುಬರುವ ಶಾಸನಗಳನ್ನು ಅವಲೋಕಿಸಿದಾಗ ಕ್ರಿ.ಶ.೧೬೨೮ರ ಹಿರೇಕೆರೂರು ತಾಲೂಕಿನ ನೂಲಗೇರಿ ಶಾಸನದಲ್ಲಿ ಸೇನಭೋವ ಶ್ರೀರಂಗನ ಮನ ನಾರಿಯಣ್ಣನ ಹೊಲದ ಉಲ್ಲೇಖ ಕಂಡುಬರುತ್ತದೆ. ಆದರೆ ಮೇದೂರಿನಲ್ಲಿ ಕಂಡುಬರುವ ಶಾಸನ ಮೇಳಗಿರಿ ಆಚಾರ್ಯರ ಹೊಲದಲ್ಲಿ ದೊರೆತ ಶಾಸನ ಭೂದಾನ ನೀಡಿದ್ದರ ಬಗ್ಗೆ ತಿಳಿಸುತ್ತದೆ. ಇದರಲ್ಲಿ ಐದು ಜನ ಗಾವುಂಡರಿಗೆ ಭೂದಾನ ನೀಡಿದ ಉಲ್ಲೇಖವಿದೆ. ಹೀಗಾಗಿ ಭೂಮಿಯ ಸಾಗುವಳಿ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವ ವ್ಯವಸ್ಥೆ ಅಂದಿನ ಕಾಲದಲ್ಲಿ ರೂಢಿಯಲ್ಲಿತ್ತು.

ನೀರಾವರಿ

ಕೃಷಿಗೆ ಅತ್ಯಾವಶ್ಯಕವಾದ ನೀರನ್ನು ಕೃತಕ ರೀತಿಯಲ್ಲಿ ಸರಬರಾಜು ಮಾಡುವ ವಿಧಾನವೇ ನೀರಾವರಿ ವ್ಯವಸ್ಥೆ. ಪುರಾತನ ಕಾಲದಿಂದಲೂ ಜಲವಾಚಕಕ್ಕೆ ಸಂಬಂಧಿಸಿದಂತೆ ಶಾಸನಗಳಲ್ಲಿ ಅಂಬುಧಿ ಅಥವಾ ಏರಿ, ಕಾಲುವೆ, ಹೊಂಡ, ಕೊಳ್ಳ, ತಟಾಕ, ತೊರೆ, ಬಾವಿ, ಹಳ್ಳ ಮುಂತಾದ ಉಲ್ಲೇಖಗಳು ಕಂಡುಬಂದಿದ್ದು, ಇವುಗಳಿಂದ ನೀರನ್ನು ಸಂಗ್ರಹಿಸಿ ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದುದು ಕಂಡುಬಂದಿದೆ. ಕೃಷಿಗೆ ಅಗತ್ಯವಾದ ನೀರಿನ ಸಂಗ್ರಹಣೆ ಇತಿಹಾಸದ ಆರಂಭ ಕಾಲದಲ್ಲಿ ಕೆರೆ ಕಟ್ಟೆಗಳ ನಿರ್ಮಾಣವು ಒಂದು ಧರ್ಮಕಾರ್ಯವೆಂದು ಪರಿಗಣಿಸಲಾಗಿತ್ತು.

ಪ್ರಾಚೀನ ಕಾಲದಿಂದಲೂ ನಮ್ಮ ಪೂರ್ವಜರು ಆಳ್ವಿಕೆ ಮಾಡಿದ ಅರಸರು ಮೋಕ್ಷಮಾರ್ಗ ಲಭಿಸಲೆಂದು ತಟಾಕಗಳನ್ನು ನಿರ್ಮಿಸುತ್ತಿದ್ದರು. ಈ ಧರ್ಮಕಾರ್ಯಗಳಲ್ಲಿ ತಟಾಕದ ನಿರ್ಮಾಣ

ಗುಡಿ–ಗೋಪುರದ ನಿರ್ಮಾಣ ಎಲ್ಲವೂ ಅತ್ಯಂತ ಪ್ರಮುಖ ಕಾರ್ಯಗಳಾಗಿದ್ದವೆಂದು ಭಾವಿಸಿದ್ದರು. ಉದಾಹರಣೆಗೆ ಲಕ್ಷ್ಮೀಧರನ ಹಂಪೆಯ ಶಾಸನವು ತಿಳಿಸುವಂತೆ ಲಕ್ಷ್ಮೀಧರನ ತಾಯಿ ಆತನು ಚಿಕ್ಕ ಮಗುವಾಗಿದ್ದಾಗ ಆತನಿಗೆ ಹಾಲು ಉಣಿಸುವಾಗ, ತೊಟ್ಟಿಲು ತೂಗುವಾಗ "ಕೆರೆಯಂ ಕಟ್ಟಿಸು, ಬಾವಿಯಂ ಸವೆಸು(ತೋಡಿಸು) ದೇವಾಗಾಮಾಂ ಮಾಡಿಸು" ಎಂದು ರಾಗವಾಗಿ ಹಾಡುತ್ತಿದ್ದಳು ಎಂಬ ಅಂಶ ಕಂಡುಬರುತ್ತದೆ. ಇದರಿಂದ ನಮ್ಮ ಪೂರ್ವಜರು ಬಾವಿಗಳನ್ನು, ಕೆರೆಗಳನ್ನು, ಕೊಳಗಳನ್ನು ಇನ್ನೂ ಮುಂತಾದ ಜನಹಿತಕಾರ್ಯಗಳನ್ನು ಮಾಡಿ ಪುಣ್ಯಪ್ರಾಪ್ತಿ ಮಾಡಿಕೊಳ್ಳುತ್ತಿದ್ದರು. ಹೀಗೆ ಮಾಡುವುದು ಪುಣ್ಯಕಾರ್ಯ, ಅತ್ಯಂತ ಶ್ರೇಷ್ಠ ಎಂದು ಪರಿಗಣಿಸಿದ್ದರು.[೩೩]

ನೀರಾವರಿಗೆ ಸಂಬಂಧಪಟ್ಟಂತೆ ಈ ತಾಲೂಕಿನ ಅನೇಕ ಶಾಸನಗಳಲ್ಲಿ ಕೆರೆಯ ನಿರ್ಮಾಣದ ಉಲ್ಲೇಖವಾಗಿರುವಂತೆ ಸುಮಾರು ೭–೮ನೇ ಶತಮಾನದ ಗುಡಗುಡಿಯ ಶಾಸನದಲ್ಲಿ[೩೪] ಕೆರೆಯ ನಿರ್ಮಾಣದ ಉಲ್ಲೇಖವಿದೆ. ಕ್ರಿ.ಶ.೧೦೬೦ರ ಹಿರೇಕೆರೂರು ಶಾಸನದಲ್ಲಿ[೩೫] ದಂಡನಾಯಕ ಗುಂಡಮಾಯ್ಯನಿಂದ ಪಿರಿಯಕೆರೆಯೂರಿನ ದೊಡ್ಡ ಕೆರೆಗೆ ಪೆರ್ಜುಂಕ ಸುಂಕದಾನ ನೀಡಿದನ್ನು ಕ್ರಿ.ಶ.೧೧೮೨ರ ಹಿರೇಕೆರೂರು ತಾಲೂಕಿನ ಮೇದೂರು ಶಾಸನದಲ್ಲಿ[೩೬] ಮಹಾಮಂಡಳೇಶ್ವರ ಕುಮಾರ ವೀರವಿಕ್ರಮಾದಿತ್ಯದೇವನುಸಂಗ ದಂಡನಾಯಕನಿಂದ ಚಾವಿಸೆಟ್ಟಿಯ ಕೆರೆ ಮತ್ತು ಮೂಲ ಸ್ಥಾನ ಕುಲದೇವರಿಗೆ ಭೂದಾನ ನೀಡಿದ ಬಗ್ಗೆ ತಿಳಿಸುತ್ತದೆ.

ಹೀಗೆ ಹಿರೇಕೆರೂರು ತಾಲೂಕಿನಲ್ಲಿ ಕಂಡುಬರುವ ಶಾಸನಗಳಲ್ಲಿ ಉಲ್ಲೇಖಗೊಂಡಂತೆ ಮೇದೂರು ಶಾಸನದ ಕೆಲವೊಂದು ಶಾಸನವು ನೀರಾವರಿ ವ್ಯವಸ್ಥೆ, ಅಂದಿನ ಕಾಲದಲ್ಲಿನ ವ್ಯವಸಾಯಕ್ಕೆ ಅತ್ಯುಪಯುಕ್ತವಾಗಿ ಯೋಗ್ಯವಾಗಿತ್ತು. ಹಾಗೂ ಅಂದಿನ ಜನಜೀವನ ವ್ಯವಸ್ಥೆಯಲ್ಲಿ ಅತ್ಯಂತ ಮಹಾತ್ಕಾರ್ಯವಾಗಿತ್ತು ಎಂಬುದನ್ನು ಗಮನಿಸಬಹುದು.

ಬೆಳೆಗಳು

ವ್ಯವಸಾಯ ಆಧಾರಿತ ಭೂಮಿಯಲ್ಲಿ ಬೆಳೆಗಳನ್ನು ಬೆಳೆಯುವುದು ಪ್ರಮುಖವಾಗಿದ್ದು, ಈ ತಾಲೂಕಿನ ಶಾಸನಗಳು ಅವಲೋಕನದಿಂದ ಹೊಲ, ಗದ್ದೆ, ತೋಟದ ಬೆಳೆಗಳು ಹಾಗೂ ಮತ್ತಿತರ ಗಿಡ ಮರಗಳು, ಹೂವುಗಳ ಪ್ರಸ್ತಾಪ ಕಂಡುಬರುತ್ತದೆ.

ಮೇದೂರು ಶಾಸನದಲ್ಲಿ ಕ್ರಿ.ಶ.೧೧೧೩[೩೬]ರಲ್ಲಿ ಉಲ್ಲೇಖವಾಗಿರುವ ಭತ್ತ ಬೆಳೆ ಮತ್ತು ತೋಟದ ಬೆಳೆಗಳ ಬಗ್ಗೆ ಉಲ್ಲೇಖವಾಗಿದೆ. ಹೀಗೆ ಶಾಸನಗಳಲ್ಲಿ ಬೇಸಾಯದ ಬೆಳೆಗಳು, ತೋಟಗಾರಿಕೆ ಬೆಳೆಗಳು, ಮರ, ಗಿಡಗಳು, ಹೂ, ಬಳ್ಳಿಗಳು ಹಾಗೂ ಇನ್ನಿತರ ಅಂಶಗಳ ಬಗ್ಗೆ ಉಲ್ಲೇಖವಿರುವುದನ್ನು ಕಾಣುತ್ತೇವೆ.

ತೆರಿಗೆಗಳು

ರಾಜ್ಯದ ಮೂಲ ಆದಾಯಗಳಲ್ಲಿ ತೆರಿಗೆಗಳು ಅತ್ಯಮೂಲ್ಯ ಭಾಗವಾಗಿವೆ. ರಾಜ್ಯದ ಅಭಿವೃದ್ಧಿ ಹಾಗೂ ಸುಭದ್ರತೆ ಅದರ ಹಣಕಾಸಿನ ವ್ಯವಸ್ಥೆಯನ್ನು ಆಧರಿಸುತ್ತದೆ. ಅಂದರೆ ಕೃಷಿಯಿಂದ

ಉತ್ಪಾದಿಸುವ ವಸ್ತುಗಳು ವ್ಯಾಪಾರದ ವಸ್ತುಗಳು. ಕೆಲವೊಮ್ಮೆ ದೇವರಿಗೆ ದಾನ ರೂಪದಲ್ಲಿ ತೆರಿಗೆಗಳನ್ನು ಸದಾ ನೀಡಬೇಕಾಗುತ್ತಿತ್ತು. ಆದ್ದರಿಂದಲೇ ರಾಜ್ಯದ ಸಪ್ತಾಂಗಗಳಲ್ಲಿ ಕೋಶವನ್ನು ಸೇರಿಸಿದ್ದಾರೆ. ಇಂತಹ ಕೋಶವನ್ನು ತುಂಬುವ ಅನೇಕ ಮಾರ್ಗಗಳನ್ನು ಕೌಟಿಲ್ಯ ಏಳು ವಿಶಾಲ ಗುಂಪುಗಳಲ್ಲಿ ಕ್ರೋಢೀಕರಿಸಿದ್ದಾನೆ. ಅವುಗಳಲ್ಲಿ ಆಸ್ತಿ ತೆರಿಗೆ, ಸಿದ್ಧಾಯ, ಆರುವಣ, ವ್ಯಾಪಾರ ವೃತ್ತಿ, ಕೈಗಾರಿಕೆ, ಪೆರ್ಜುಂಕ, ದಂಡ, ಸುಂಕ ಈ ರೀತಿಯ ತೆರಿಗೆಗಳನ್ನು ಕಾಣುತ್ತೇವೆ.[೩೭]

ವ್ಯವಸಾಯ ಹಾಗೂ ಭೂ ಮೂಲದ ಪದಾರ್ಥಗಳೇ ಕಸುಬು ಕೈಗಾರಿಕೆಗಳಿಗೆ ಮೂಲವಸ್ತುಗಳು. ಆದುದರಿಂದ ಅವು ಒಂದನ್ನುಳಿದು ಮತ್ತೊಂದು ಇಲ್ಲವೆಂಬಂತೆ ಒಂದಕ್ಕೊಂದು ಬೆಸೆದುಕೊಂಡಿರುವ ವಸ್ತುಗಳ ಮೇಲಿನ ತೆರಿಗೆ ಪ್ರಾಚೀನ ಕಾಲದಿಂದಲೂ ಕಂಡುಬಂದಿದೆ.[೩೮] ಪ್ರಾಚೀನ ಕಾಲದಲ್ಲಿ ಸುಂಕವನ್ನು ವಿಧಿಸಲಾಗುತ್ತಿತ್ತು. ಪ್ರಭುವರ್ಗದವರ ಪ್ರಮುಖ ಆದಾಯ ಇದಾಗಿತ್ತು. ಹೀಗಾಗಿ ಜನರ ಮೇಲೆ ಸುಂಕದ ಭಾರವು ಸಾಕಷ್ಟಿತ್ತು. ಸುಂಕದ ಭಾರಕ್ಕೆ ಹೆದರಿ, ಅದನ್ನು ತಪ್ಪಿಸಲು ಕೆಲವರು ಪ್ರಯತ್ನಿಸುತ್ತಿದ್ದರು. ದೇವರ ದಾಸಿಮಯ್ಯನ ಒಂದು ವಚನದಲ್ಲಿ

ಹರಿದ(ಹಜಿದ) ಗೋಣಿಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲಾ ನಡೆದನಾ ಸುಂಕಕಂಜಿ
ಕಳವೆಯೆಲ್ಲಾ ಹೋಗಿ ಬರಿಗೋಣಿ(ಬಜೆಗೋಣಿ) ಉಳಿದಿತ್ತು
ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥ॥

ಎಂದು ಹೇಳಿದ್ದಾನೆ. ಈ ವಚನದಲ್ಲಿ ಕಳವೆ(ಭತ್ತ)ಯ ಸುಂಕಕ್ಕೆ ಹೆದರಿ ಸುಂಕವನ್ನು ತಪ್ಪಿಸಬೇಕೆಂದು ರಾತ್ರಿ ಹೊತ್ತಿನಲ್ಲಿ ಕಳವೆಯನ್ನು ಸಾಗಿಸುತ್ತಾನೆ. ಹರಿದ ಗೋಣಿಯ ರಂಧ್ರ ಕಾಣದೇ ಇದ್ದುದರಿಂದ ಕಳವೆಯೆಲ್ಲಾ ಚೆಲ್ಲಿ ಹೋಗಿತ್ತು. ಇಲ್ಲಿ ಸುಂಕದ ಭಾರ ಹಾಗೂ ಅದನ್ನು ತಪ್ಪಿಸಿ ವ್ಯವಹರಿಸುತ್ತಿದ್ದುದನ್ನು ದಾಸಿಮಯ್ಯನು ತಿಳಿಸಿದ್ದಾನೆ. ಇದರಿಂದ ಪ್ರಾಚೀನ ಕಾಲದಲ್ಲಿ ಸುಂಕದ ಭಾರ ಹೆಚ್ಚಾಗಿತ್ತೆಂಬುದು ಸ್ಪಷ್ಟವಾಗುತ್ತದೆ.[೩೯]

ಈ ದೃಷ್ಟಿಯಿಂದ ಹಿರೇಕೆರೂರು ತಾಲೂಕಿನ ಶಾಸನವನ್ನು ಅವಲೋಕಿಸಿದಾಗ ಕ್ರಿ.ಶ.೧೧೧೩[೪೦] ಶಾಸನದಲ್ಲಿ ಹಣ ಭತ್ತ ಮತ್ತು ಹಂದರವಣ(ತೆರಿಗೆ)ವನ್ನು ಮೇಜವೂರಿನ ಮಾಕಳೇಶ್ವರ ಸ್ವಾಮಿಗೆ ನೀಡುತ್ತಿದ್ದರು ಎಂದು ಉಲ್ಲೇಖವಾಗಿದೆ.

ಹೀಗಾಗಿ ತೆರಿಗೆಗಳು ಅಂದಿನ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ಆರ್ಥಿಕ ಸಹಾಯವನ್ನು ನೀಡುತ್ತಿದ್ದವು. ಬಹುಶಃ ಇದರಿಂದಲೇ ಆ ಕಾಲದ ತೆರಿಗೆಪದ್ಧತಿ ಬಹುಮುಖ್ಯ ಭಾಗವಾಗಿತ್ತು ಎಂದು ಹೇಳಿದರೆ ತಪ್ಪಾಗಲಾರದು.

ಮೇದೂರು ಪರಿಸರದಲ್ಲಿ ಕಂಡುಬರುವ ಶಾಸನಗಳು

ಶಾಸನ ಸಂಖ್ಯೆ : ಒಂದು

ಊರು : ಮೇದೂರು

ದೊರೆತ ಸ್ಥಳ : ಮೇಳಗಿರಿ ಅರ್ಚಾಯ ಹೊಲದಲ್ಲಿ

ಕಾಲ : ಕ್ರಿ.ಶ.೭೯೩-೮೧೪

ಅರಸ : ಮೂರನೇ ಗೋವಿಂದ

ವಿವರಣೆ: 'ಜಗತುಂಗ ಶ್ರೀ ವಲ್ಲಹ' ಇವರ ಆಳ್ವಿಕೆಯ ದಾಖಲೆಯು ನಿಖರತೆಯನ್ನು ಹೊಂದಿರುವುದಿಲ್ಲ. ಇವರು 'ಅಕಾಲವರ್ಷ' ಅವರ ಮೊಮ್ಮಗ. ಇವರು 'ಪ್ರಬುದ್ಧವರ್ಷ' ಮತ್ತು 'ಪ್ರತಾಪವಲೋಕಗಳೆಂಬ' ಬಿರುದುಗಳನ್ನು ಪಡೆದಿದ್ದರು(ಧರಿಸಿದ್ದರು). ಆದರೆ ಘಟನೆಗಳನ್ನು ಆಧರಿಸಿ ನೋಡಿದರೆ ಅವುಗಳನ್ನು ಹೇಳುವುದೆನೆಂದರೆ ಇವರು 'ಅಕಾಲವರ್ಷ'(ಕೃಷ್ಣ-೧)ನ ರವರ ಮೊಮ್ಮಗನೆಂದು ಅಲ್ಲದೆ, ಇಂತಹ ಬಿರುದುಗಳನ್ನು ತಮ್ಮಷ್ಟಕ್ಕೆ ಹೊಂದಲು ಕಾರಣವೆಂದರೆ ಇವುಗಳ ಸಹಾಯದಿಂದಾಗಿ ಕ್ರಿ.ಶ.೭೯೩-೮೧೪ರ ಮಧ್ಯೆ ಆಳ್ವಿಕೆ ಮಾಡಿದ ೩ನೇ ಗೋವಿಂದನ ಬಗ್ಗೆ ತಿಳಿದುಕೊಳ್ಳಲೆಂದು ಈ ಶಾಸನದಲ್ಲಿ ಉಲ್ಲೇಖವಾಗಿದೆ.

ಈ ಶಿಲಾಶಾಸನವು(ಉಪಾರಿ) ನೇಗಿಲುಸಾಲು ರಾಜನೀತಿ ನಿಪುಣನಾದ ರಾಜಾದಿತ್ಯ ಅರಸ ಚಾಲುಕ್ಯರ ಅರಸಮನೆತನವು ಬನವಾಸಿ ೧೨,೦೦೦ ಕಾಲದಲ್ಲಿ ಆಳ್ವಿಕೆಯನ್ನು ಕೂಂಡಹರನ ಆಡಳಿತ ಅವಧಿಯಲಿ ಎಡವಟ್ಟ, ಹೀಗೆ ರಾಜಾದಿತ್ಯನಿಗೆ 'ಪರಮೇಶ್ವರ ಮೆಯೋಗಿ' ಎಂಬ ಶ್ರೇಷ್ಠ ಗೌರವದ ಬಿರುದನ್ನು ಪಡೆದು ರಾಜಾದಿತ್ಯನು ದೇಮಲವ್ವ ಬಸದಿ ಎಂಬ ಜೈನ ದೇವಾಲಯಕ್ಕೆ ೧೨ ಮೀಟರ್ ಭೂಮಿಯನ್ನು ದಾನವಾಗಿ ನೀಡಿರುವ ವಿಷಯವನ್ನು ಈ ಶಾಸನದಲ್ಲಿ ಉಲ್ಲೇಖಿಸ ಲಾಗಿದೆ. ಪ್ರಾಯಶಃ ಅದು ಪ್ರಸ್ತಾಪಿಸುವಂತೆ ಐದು ಜನ ಗಾವುಂಡರಿಗೆ ಭೂಮಿಯ ದಾನ ನೀಡಿರಬಹುದೆಂದು ಊಹಿಸಲಾಗಿದ್ದು, ನಿಖರವಾಗಿ ದಾನ ಪಡೆದುಕೊಳ್ಳುವವರಲ್ಲಿ ಯಾವ ವ್ಯಕ್ತಿಯ ಹೆಸರನ್ನು ಕೂಡ ಇಲ್ಲಿ ಪ್ರಸ್ತಾಪಿಸಿಲ್ಲ. ಆದರೂ ಇಲ್ಲಿ ಸನ್ಯಾಸಿಯಾದಂತಹ ಮೋನಿಗುರುವ ಎಂಬ ಅನುಯಾಯಿ ಎಂಬುವವನು ದಾನವನ್ನು ಪಡೆದುಕೊಂಡಿರಬಹುದು ಎಂದು ತಿಳಿಸಲಾಗಿದೆ. ಈ ಶಿಲಾಶಾಸನವು ಕಿರುಗುಡ್ಡ ಕಾಲದ ಮದೂರ ಎಂಬ ವಿಷಯವು ಮಾದೂಜ ಎಂಬುವರಿಂದ ಕೆತ್ತಲ್ಪಟ್ಟಿದೆ ಎಂದು ದಾಖಲಾಗಿದೆ. ಗಂಡು ವರಹ(ಹಂದಿಯ) ಚಿತ್ರವನ್ನು ಮೇಲ್ಭಾವಣಿಯ ಮೇಲೆ ಕೆತ್ತಲಾಗಿದೆ.

ಶಾಸನ ಸಂಖ್ಯೆ : ಎರಡು

ಊರು : ಮೇದೂರು

ದೊರೆತ ಸ್ಥಳ : ಮೆಳಗಿರಿ ಅರ್ಚಾಯ ಹೊಲದಲ್ಲಿ

ಕಾಲ : ೮ ಮತ್ತು ೯ನೇ ಶತಮಾನ

ಅರಸ : ಮೂರನೇ ಗೋವಿಂದ

ವಿವರಣೆ : ಇದೊಂದು ಮುರಿಯಲಾರದ ದಾಖಲೆ(ಹಾಳು ಮಾಡಿದೆ). ಕೇವಲ ಎರಡು ತುಂಡುಗಳು ಮಾತ್ರ ಸಿಕ್ಕಿವೆ. ಇದು ಮೋನಿಗುರುವ ರಾಜರ ಪ್ರಶಸ್ತಿಯೊಂದಿಗೆ ಪ್ರಾರಂಭವಾಗುತ್ತದೆ. ಇದರ ಪ್ರತ್ಯಕ್ಷತೆ ಎರಡನೆಯದಾಗಿದ್ದು, ಇದು ಹೆಸರಿಗೋಸ್ಕರ ಆಗಿರುವಂತಹದಾಗಿದೆ. ಇದನ್ನು ಒಂದನೇ ಶಾಸನದ ನಂಬರ್‌ನಲ್ಲಿ ನೋಡಬಹುದಾಗಿದೆ. ಗಂಡು ವರಹ(ಹಂದಿಯ) ಕೆತ್ತನೆಯನ್ನು ಮೇಲ್ಭಾವಣಿಯ ಮೇಲೆ ಕೆತ್ತಿರುವ ದೃಶ್ಯ ಸಿಕ್ಕಿರುವಂಥದ್ದು. ಈ ದಾಖಲೆಗಳು ಕ್ರಿ.ಪೂ.೮ ಮತ್ತು ೯ನೇ ಶತಮಾನದ ಕುರುಹುಗಳಾಗಿವೆ.

ಶಾಸನ ಸಂಖ್ಯೆ : ಮೂರು

ಊರು : ಮೇದೂರು

ದೊರೆತ ಸ್ಥಳ : ಈಶ್ವರ ದೇವಸ್ಥಾನದ ಪ್ರಾಕಾರ ಗೋಡೆಯ ಮೇಲೆ

ಕಾಲ : ೧೦೪೭

ಅರಸ : ಒಂದನೇ ಸೋಮೇಶ್ವರ

ವಿವರಣೆ: ೧ನೇ ಸೋಮೇಶ್ವರ ಕ್ರಿ.ಶ.೧೦೪೭ ಶಕ ದಾಖಲಾಗಿದ್ದು, ೯೬೭ ಪಾರ್ಥಿವ ಮಘ-೫ ಬಾನುವಾರದಂದು ಈ ದಿನಾಂಕದ ವಿವರಕ್ಕೆ ಸಂಬಂಧಿಸಿದಂತೆ ಕ್ರಿ.ಶ.೧೦೪೬ ಜನವರಿ ೧೫ ಎಂಬುದು ಬುಧವಾರವಾಗಿತ್ತು. ಅಲ್ಲದೆ ಇದನ್ನು ವಾರದ ದಿನವನ್ನಾಗಿಸಿಕೊಂಡಿದ್ದರು. ಆದರೂ ಕೊಟ್ಟಂತಹ ದಿನಾಂಕವು ಕ್ರಮವಲ್ಲದ್ದಾಗಿತ್ತು. ಹೇಗಾದರೂ ಮುಂದಿನ ವರ್ಷ ಅದೆಂದರೆ ಶಕ ೯೬೮ ವ್ಯಯ ಇತರ ವಿವರಗಳು, ಹೋಲಿಕೆ ಮತ್ತು ದಿನಾಂಕ ಇವುಗಳನ್ನು ಮುಂದಿನ ವರ್ಷಕ್ಕೆ ಸರಿಹೊಂದುವಂತೆ ಕ್ರಿ.ಶ.೧೦೪೭ಕ್ಕೆ ಸರಿಗಟ್ಟಿದನು. ಅದುವೇ ಕ್ರಿ.ಶ.೧೦೪೭ ಜನವರಿ ೪. ಈ ದಿನಾಂಕವೇ ಬಹುಶಃ ಉದ್ದೇಶಿತ ದಿನಾಂಕವಾಗಿರಬಹುದು.

ಅಂಗಸಮುದ್ರವೆಂಬ ಸ್ಥಳದಡಿಯಲ್ಲಿ ಇರುವಂತಹ ಒಂದು ಮೀಟರ್(ಭೂಮಿ) ಪ್ರದೇಶವನ್ನು ದಾನ ನೀಡಿರುವುದನ್ನು ದಾಖಲಿಸಿದೆ. ಅಲ್ಲದೇ ಕಚ್ಚವ್ವಾವಿ ಕೂಟ ಮತ್ತು ೧೨(ಮೀಟರ್) ಗಣ್ಯವಾಗಿರುವ ಭೂಮಿಯನ್ನು ಒಂದು ಪೂರ್ವದ ಬೆರ್ಡಲೂರನ್ನು ಮೇಜೂರು ಮಾಕಳೇಶ್ವರ ಎಂಬ ದೇವರಿಗೆ(ಮೇದೂರು) ಎಡವಟ್ಟ-೭೦ರಲ್ಲಿ ಮಹಾಸಾಮಂತ ಬಿಜ್ಜರಸನಾದ ಮಹಾಮಂಡಲೇಶ್ವರ ಚಾವುಂಡರಾಯನೆಂಬ ಅರಸ ಆಳ್ವಿಕೆಯನ್ನು ಮಾಡುತ್ತಿದ್ದನು. ಅದುವೇ ಬನವಾಸಿ ೧೨,೦೦೦ ಪ್ರಾಂತ್ಯಗಳ ನಿರ್ಮಾಣ, ಇದರ ದಾಖಲೆಯನ್ನು ತಿಳಿಸುತ್ತದೆ.

ಶಾಸನ ಸಂಖ್ಯೆ	:	ನಾಲ್ಕು
ಊರು	:	ಮೇದೂರು
ದೊರೆತ ಸ್ಥಳ	:	ಈಶ್ವರ ದೇವಾಲಯದ ಕಾಂಪೌಂಡ್ ಮೇಲೆ
ಕಾಲ	:	ಕ್ರಿ.ಶ.೧೧ನೇ ಶತಮಾನದ ಮಧ್ಯಭಾಗ
ಅರಸ	:	ಸೋಮೇಶ್ವರ

ವಿವರಣೆ: ಇದರ ಕುರಿತು ಎರಡು ತುಣುಕುಗಳು ದಾಖಲಾಗಿರುವುದು ಪತ್ತೆಯಾಗಿದೆ. ಇವು ತ್ರೈಲೋಕ್ಯಮಲ್ಲ ಎಂಬುದನ್ನು, ಮೊದಲನೇ ಸೋಮೇಶ್ವರನನ್ನು ಗುರುತಿಸಬಲ್ಲವಾಗಿದೆ. ಎಂದು ಪ್ರಾಚೀನ ಲಿಪಿಶಾಸ್ತ್ರವು ದಾಖಲಿಸಿದೆ. ಇವು ೧೧ನೇ ಶತಮಾನದ ಮಧ್ಯಭಾಗದವಾಗಿವೆ.

ಆದಾಗ್ಯೂ ಬೇರೆ ಪುರಾವೆಗಳು ಸಹ ಇವುಗಳ ಸ್ಪಷ್ಟತೆಯನ್ನು ಕುರಿತಾಗಿವೆ. ಈಗಾಗಲೇ ಪೀಠಿಕೆಯಲ್ಲಿ ವಿವರಿಸಿದಂತೆ ಸವಿಸ್ತಾರವಾದ ನಿಖರವಾದ ದಿನಾಂಕವು ಭಾದ್ರಪದ, ಅಮಾವಾಸ್ಯೆ 'ಭಾನುವಾರ' ಎಂದಿದ್ದು, ಇವುಗಳ ತುಲನೆ ಮಾಡಲು ಸಾಕಷ್ಟು ಪುರಾವೆಗಳಿರುವುದಿಲ್ಲ. ದಾಖಲೆಗಳು ಹೇಳುವುದೇನೆಂದರೆ ಮಹಾಮಂಡಲೇಶ್ವರ ಚಾವುಂಡರಾಯ ಅರಸ ಬನವಾಸಿಯನ್ನು ೧೨,೦೦೦ ವಿಭಾಗಗಳಾಗಿ ಆಳ್ವಿಕೆ ಮಾಡುತ್ತಿದ್ದನು. ಆ ವೇಳೆಗೆ ಅವನ ಸಾಮಂತ ಮಹಾಸಾಮಂತ(ಭಾವ) ಬಿಜ್ಜರಸನು ಹಲವು ಜಿಲ್ಲೆಗಳಿಂದ ಎಡವಟ್ಟ ೭೦ ರತ್ನಪಲ್ಲಿ ೭೦, ೮ ಮುಗುಂಡ ೧೨ನ್ನು ಆಳುತ್ತಿದ್ದನು. ನಂತರದ ಆಧಾರದ ಮೇಲೆ ಹೇಳುವುದಾದರೆ ಮಹಾಸಾಮಂತ ಅಯ್ಯನ ಜೋಗ ಇವರು ಸಹ ಹಲವು ಜಿಲ್ಲೆಗಳನ್ನು ಆಳುತ್ತಿದ್ದರು. ಅವುಗಳೆಂದರೆ ಮಾಸೂರು-೧೨, ಅರಕೆರೆ-೧೨, ನರಿಯ-೪೦, ಮಾಲೆ-೭೦, ಕುಂದೂರು-೧೨, ಕೊಲ್ಲಗನೂರು ೧೨ ಮತ್ತು ಐವತ್ತರುಂಬಡಗಳು ದಾಖಲಾಗಿವೆ. ಇವುಗಳ ಮುಖ್ಯಸ್ಥನು ಬೆಳಗುತ್ತಿಯ ಸಿಂಹ ಕುಟುಂಬಕ್ಕೆ ಸೇರಿದವನಾಗಿದ್ದನು.

ಇವು ದಾಖಲಿಸಿರುವಂತೆ ಕೊಡುಗೆಗಳಾಗಿ ಸರ್ವೇಸಾಮಾನ್ಯವಾಗಿ ಭೂಮಿಯನ್ನು ಮೇಜೂವೂರಿನ ಮಾಕಳೇಶ್ವರ ದೇವರಿಗೆ ಹಾಗೂ ಅಗ್ನಿಭಟ್ಟಕರಿಗೆ ದಾನವಾಗಿ ನೀಡಿದ್ದರು. ಈ ಎಲ್ಲಾ ಜವಾಬ್ದಾರಿಗಳನ್ನು ಹೆಸರಾಂತ ಸಿಂದ ಕುಟುಂಬದ ಮುಖ್ಯಸ್ಥನಿಗೆ ನೀಡಿರುವುದು ಮತ್ತೊಂದು ದಾಖಲೆಯಲ್ಲಿ ಚಿತ್ರಣಗೊಂಡಿದೆ. ಇವೆಲ್ಲವೂ ಒಂದೇ ಸ್ಥಳದಿಂದಲೇ ಎಂದು, ಅಲ್ಲದೆ ಇನ್ನಿತರ ಪುರಾವೆಗಳು ಹಾಗೂ ವಿವರಗಳನ್ನು, ಮಾಕಳೇಶ್ವರ ದೇವಸ್ಥಾನದ ಮೇಲೆ ಕಂಡುಬರುವ ಶಾಸನದಲ್ಲಿ ಮಾಹಿತಿ ದೊರಕಿದೆ.

ಶಾಸನ ಸಂಖ್ಯೆ	:	ಐದು
ಊರು	:	ಮೇದೂರು
ದೊರೆತ ಸ್ಥಳ	:	ಈಶ್ವರ ದೇವಾಲಯ ಗೋಡೆಯ ಕಂಬಗಳ ಫಲಕದಲ್ಲಿ

ಕಾಲ : ಕ್ರಿ.ಶ.೧೧೧೩

ಅರಸ : ಆರನೇ ವಿಕ್ರಮಾದಿತ್ಯ

ವಿವರಣೆ: ಇಂದಿನ ದಿನ ಚಾಲುಕ್ಯ ವಿಕ್ರಮ(ಶಕ) ವರ್ಷ ೩೮ ನಂದನ ಪುಷ್ಯಭಾ ೧೦ ಗುರುವಾರ ಉತ್ತಾರಾಯಣ ಸಂಕ್ರಾಂತಿ. ಈ ದಿನಗಳ ತಾರೀಖುಗಳು ಕ್ರಮಬದ್ಧವಾಗಿಲ್ಲ. ಕೊಟ್ಟಿರುವ ತಿಥಿಗಳು ಕ್ರಿ.ಶ.೧೧೧೩ ಜನವರಿ ೧೪ ಮಂಗಳವಾರ ಬರಹುದೆಂದು ಜೊತೆಗೆ ಸಂಕ್ರಾಂತಿಯು ಮಂಗಳವಾರದ ಕ್ರಿ.ಶ>೧೧೧೨ರ ಡಿಸೆಂಬರ್ ೨೪ರಂದು ಸಂಬಂಧಿಸಿದ್ದು ಎಂದು ಹೇಳಿವೆ.

ಕೊಡುಗೆಗಳ ರೂಪದಲ್ಲಿ ಹಣ, ಭತ್ತ ಮತ್ತು ಆದಾಯಗಳಿಂದ ಹಂದರಣ(ತೆರಿಗೆ)ವನ್ನು ಮೇಜೂವೂರಿನ ಮಾಕಳೇಶ್ವರ ಸ್ವಾಮಿಗೆ ನೀಡುತ್ತಿದ್ದರು. ಇದನ್ನು ಆಗಿನ ಕಾಲದ ಮುಖ್ಯ ನಗರವೆಂದು ಬಣ್ಣಿಸಲಾಗಿದೆ. ಇದು ಎಡವಟ್ಟ ೭೦ ವಿಭಾಗದಲ್ಲಿದೆ.

'ಲಕುಲೇಶ್ವರ ಪಂಡಿತ ಇದಲ್ಲದೆ ಪಂಡಿತರು ದವಸಯ ಮತ್ತು ಮವತೆದರೆ ತೆರಿಗೆಯನ್ನು ಆಚರಸ ಪ್ರಾಂತ್ಯಾಧಿಕಾರಿ ವಡ್ಡರವುಲ ದವಸಯವನ್ನು ಮದುವಪ್ಪಯ್ಯ ಎಂಬುವರು ದಾನವನ್ನು ನೀಡಿದರು ದಂಡನಾಯಕ ಸಯಿಪಯ್ಯ ಎಲೆಯ ಅದಾಯದ ತೆರಿಗೆಯನ್ನಾಗಿ ನೀಡಿದ್ದಾರೆ. ಪಸಯಿತ ವಡ್ಡರವುಲ' ತೆರಿಗೆ ನೀಡಿದವರ ಹೆಸರು ತ್ರುಟಿತಗೊಂಡಿದೆ ಹಾಗೂ ವ್ಯಾಪರದ ಉಪ್ಪಿನ ಬಟ್ಟೆಯ ಅದಾಯದಲ್ಲಿ ತೆರಿಗೆಯನ್ನಾಗಿ ದೇವಾಲಯಕ್ಕೆ ದೀಪದ ಎಣ್ಣೆಗಾಗಿ ದಾನವನ್ನು ನೀಡಿದ್ದಾರೆ.

ಈ ದಾಖಲೆಯು ಗೋವಿಂದರಸನ ಮಹಾಪ್ರಾದನ ದಂಡನಾಯಕನು ರಾಜ್ಯಾಧಿಕಾರಿಯಾಗಿ ಬನವಾಸಿ ೧೨೦೦೦ ಮತ್ತು ಸಾಂತಳಿಗೆ ೧೦೦೦ ಪ್ರಾಂತ್ಯಗಳ ಸಿಂಧ ಕುಟುಂಬದವರಿಗೆ ಇಲ್ಲಿನ ಅಳ್ವಿಕೆಯು ಎಡವಟ್ಟ ೭೦ ಮತ್ತು ಆರಕೆರೆ ೧೨ ಎಂಬ ಗ್ರಾಮಗಳನ್ನು ದಾನವಾಗಿ ನೀಡಿದರು.

ಅಡಿಟಿಪ್ಪಣಿಗಳು

೧. ಎ.ಕೆ.(ಪರಿಷ್ಕೃತ) ಶಾಸನ(ಸಂ), ೧೧೩, ಪು.೧೪೨.

೨. ಚಿದಾನಂದಮೂರ್ತಿ ಎಂ., ೨೦೦೮, **ಕನ್ನಡ ಸಾಂಸ್ಕೃತಿಕ ಅಧ್ಯಯನ**, ಪು.೭೩.

೩. ಎ.ಕೆ.(ಪರಿಷ್ಕೃತ), **ಪೂರ್ವೋಕ್ತ**, ಶಾಸನ(ಸಂ), ೬೭, ಪು.೯೫-೯೮.

೪. ಅದೇ, ಶಾಸನ ಸಂಪುಟ ೯೩, ಪು.೧೨೧-೧೨೨.

೫. ತಿಪ್ಪೆರುದ್ರಸ್ವಾಮಿ ಎಚ್., ೨೦೧೦, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಪು.೧೯೩.

೬. ಚಿದಾನಂದಮೂರ್ತಿ ಎಂ., ೨೦೦೮, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪು.೭೭-೭೮.

೭. ಕನ್ನಡ ವಿಷಯ ವಿಶ್ವಕೋಶ, ೨೦೦೯, **ಇತಿಹಾಸ ಮತ್ತು ಪುರಾತತ್ವ**, ಪು.೬೮೪.

೮. ಎಚ್ಚೆಸ್ಕೆಸಂ), ಅವಲೋಕನ, **ಕರ್ನಾಟಕ ಪರಂಪರೆಯ ಸಮೀಕ್ಷೆ**, ಪು.೧೫೪.

೯. ಎನ್.ಐ.ಐ.ಸಂ.ಘಿಘಿ ಪು.೪೯, ೧೦೭೧-೭೨.

೧೦. ಚಿದಾನಂದಮೂರ್ತಿ ಎಂ., ೨೦೦೮, **ಪೂರ್ವೋಕ್ತ**, ಪು.೭೭-೭೮.

೧೧. ಎಚ್ಚೆಸ್ಕೆ(ಸಂ), **ಪೂರ್ವೋಕ್ತ**, ಪು.೧೫೪.

೧೨. ಕೆ.ಇ.ಸಂ.ಗಿಚಿ.೧.ಕೆ.ಆರ್.ಐ.ಐ.ಆರ್.೧೫೫೩-೫೭, ಪು.೭೦-೭೧.

೧೩. ಚಿದಾನಂದಮೂರ್ತಿ ಎಂ., ೨೦೦೮, **ಪೂರ್ವೋಕ್ತ**, ಪು.೧೭೭.

೧೪. **ಕನ್ನಡ ಸಾಹಿತ್ಯ ಚರಿತ್ರೆ**(ಸಂ), ಪು.೫೧೬-೫೧೭.

೧೫. ಕ.ಇ.ಸಂ.ಖಗಿ.ಪು.೪೧.

೧೬. ಕೆ.ಆರ್.ಐ.ಖ.ಸಂ.ಗಿಚಿ, ಪು.೨೫

೧೭. ಶಿವರುದ್ರಪ್ಪ ಎಲ್.ಎ., **ಶರಣಧರ್ಮದಲ್ಲಿ ವೀರಶೈವ ತತ್ವದ ಮೌಲ್ಯಗಳು**, ಪು.೪೫.

೧೮. ಎನ್.ಬಸವಾರಾಧ್ಯ, ೧೯೭೩, **ಅಟ್ಟಲೂರು ಚರಿತೆ**(ಶಾಂತ ನಿರಂಜನ), ಪು.೪೪.

೧೯. ಧಾ.ಜಿ.ಶಾ.ಸೂ.ಶಾಸನ, ಸಂ.೩೫೩, ಪು.೭೯.

೨೦. ಚಿದಾನಂದಮೂರ್ತಿ ಎಂ., ೨೦೦೮, **ಪೂರ್ವೋಕ್ತ**, ಪು.೧೭೯.

೨೧. ಎಂ.ಎಂ.ಆರ್., ೧೯೩೦, ಪು.೭೩.

೨೨. ಭೋಜರಾಜ್ ಪಾಟೀಲ, ೧೯೯೫, ನಾಗರಬಂಡ ೭೦, ಒಂದು ಅಧ್ಯಾಯದ ಮಲೆನಾಡು, ಪು.೨೪೨.

೨೩. ದಾ.ಜಿ.ಶಾ.ಸೂ. ಶಾಸನ ಸಂ.೧೩೯, ಪು.೭೫.

೨೪. ಐ.ಐ.ಸಂ.ಘಿ, ಪು.೨೪೯-೫೫.

೨೫. ಕ.ಇ.ಸಂ.VI. ಪು.೪೨, ಕೆ.ಕೆ. ಪು.೪೬೦-೬೫.

೨೬. ಚಿದಾನಂದಮೂರ್ತಿ ಎಂ., ೨೦೦೮, **ಪೂರ್ವೋಕ್ತ**, ಪು.೪೫೪.

೨೭. ಕೆ.ಆರ್.ಐ.ಸಂ.VI, ಪು.೧೯.

೨೮. ಕೆ.ಆರ್.ಐ.ಸಂ.VI, ಪು.೧.

೨೯. ಯಲ್ಲಣ ಕೆ., ೨೦೧೩, **ಹಾವೇರಿ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪು.೯೧.

೩೦. ಕೆ.ಆರ್.ಐ.ಸಂ.VI, ಪು.೪೩.

೩೧. ಕೊಪ್ಪ ಎಸ್.ಕೆ., ೧೯೯೦, **ತರ್ದವಾಡಿ ನಾಡು: ಒಂದು ಅಧ್ಯಯನ**, ಪು.೨೦೩.

೩೨. ಚಿದಾನಂದಮೂರ್ತಿ ಎಂ., ೨೦೦೮, **ಪೂರ್ವೋಕ್ತ**, ಪು.೪೦೪.

೩೩. ಎಸ್.ಐ.ಐ.ಸಂ.೪, ಪು.೨೬೯ ಮತ್ತು ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ವಿ.೧೦, ಪು.೧೭೧–೨೦೧೧.

೩೪. ಧಾ.ಜಿ.ಶಾ.ಸೂ. ಶಾಸನ ಸಂ.೮೫, ಪು.೬೧.

೩೫. ಕ.ಇ.ಸಂ.VI.೨೬, ಕೆ.ಆರ್.ಐ.ಐ.ಆರ್. ೧೯೪೭, ಪು.೨೭.

೩೬. ಕೆ.ಆರ್.ಐ.ನಂ.VII VI ಪು.೧.

೩೭. ಕೃಷ್ಣಭಟ್ಟ ಕೆ.(ಅನು), ೧೯೫೫, **ಕೌಟಿಲ್ಯನ ಅರ್ಥಶಾಸ್ತ್ರ**, ಪು.೫೩.

೩೮. ಕೊಪ್ಪ ಎಸ್.ಕೆ., ೧೯೯೦, **ಪೂರ್ವೋಕ್ತ**, ಪು.೨೦೯.

೩೯. ನಾಗಯ್ಯ ಜೆ.ಎಂ., ೧೯೯೫, **ಕಲಕೇರಿ ಶ್ರೀ ಬಸವೇಶ್ವರ ಜೀರ್ಣೋದ್ಧಾರ ಟ್ರಸ್ಟ್**, ಪು.೪–೬–೬೬.

೪೦. ಕೆ.ಆರ್.ಐ.No.೧೩ Vol IV.No.೩೯ ಪು.೪೩–೪೪.

ಅಧ್ಯಾಯ ಐದು

ಸಮಾರೋಪ

ಅಧ್ಯಾಯ ಐದು

ಸಮಾರೋಪ

ಕರ್ನಾಟಕ ರಾಜ್ಯದ ೩೦ ಜಿಲ್ಲೆಗಳಲ್ಲಿ ಒಂದಾದ ಹಾವೇರಿ ಜಿಲ್ಲೆಯು ಅವಿಭಜಿತ ಧಾರವಾಡ ಜಿಲ್ಲಾ ಕೇಂದ್ರದಿಂದ ೨೪-೦೮-೧೯೯೭ರಂದು ಪ್ರತ್ಯೇಕವಾದ ಜಿಲ್ಲೆಯಾಗಿದೆ. ಉತ್ತರ ಕರ್ನಾಟಕದ ಹೆಬ್ಬಾಗಿಲು ಎಂಬ ಕೀರ್ತಿಗೆ ಹೆಸರುವಾಸಿಯಾಗಿರುವ ಹಾವೇರಿ ಜಿಲ್ಲೆಯು ಐತಿಹಾಸಿಕವಾಗಿ ಹೆಚ್ಚಿನ ಮಹತ್ವವನ್ನು ಹೊಂದಿದೆ. ಹಾವೇರಿ ಜಿಲ್ಲೆಯಲ್ಲಿ ಕಂಡುಬರುವ ೭ ತಾಲ್ಲೂಕುಗಳಲ್ಲಿ ಹಿರೇಕೆರೂರು ಕೂಡ ಒಂದಾಗಿದೆ. ಈ ತಾಲ್ಲೂಕು ಸರ್ವಜ್ಞನ ನಾಡು ಎಂದು ಹೆಸರು ಪಡೆದಿದ್ದು, ಇತಿಹಾಸದಲ್ಲಿ ತನ್ನದೇ ಆದ ಪ್ರತ್ಯೇಕವಾದ ಸ್ಥಾನ ಹೊಂದಿದೆ. ಹಿರೇಕೆರೂರು ತಾಲ್ಲೂಕನ್ನು ಪಿರಿಯಕೆರೂರು ಎಂದು ಪ್ರಾಚೀನ ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ಕಾಲಾಂತರದಲ್ಲಿ ಹಿರೇಕೆರೂರು ಎಂದು ಹೆಸರು ಬಂದಿರುವ ವಾಡಿಕೆಯಾಗಿದೆ. ಹಿರೇಕೆರೂರು ತಾಲ್ಲೂಕಿನ ಶಾಸನಗಳ ಮೂಲಕ ಹೆಚ್ಚಿನ ಮಹತ್ವವನ್ನು ಹೊಂದಿದೆ.

ಹಿರೇಕೆರೂರು ತಾಲ್ಲೂಕಿನಲ್ಲಿ ಕಂಡುಬರುವ ೧೨೯ ಗ್ರಾಮಗಳಲ್ಲಿ ಮೇದೂರು ಗ್ರಾಮವು ಒಂದಾಗಿದೆ. ಈ ಮೇದೂರು ಪರಿಸರವು ಪ್ರಾಗೈತಿಹಾಸಿಕ ನೆಲೆಯಾಗಿ ಕಂಡುಬಂದು ತನ್ನದೇ ಆದ ಇತಿಹಾಸವನ್ನು ಹೊಂದಿದ್ದು ಮಹತ್ವವಾದ ಸ್ಥಾನವನ್ನು ಪಡೆದುಕೊಂಡಿದೆ. ಅದೇ ರೀತಿಯಲ್ಲಿ ಮೇದೂರು ಪರಿಸರದಲ್ಲಿ ಕಂಡುಬರುವ ಶಾಸನಗಳಲ್ಲಿ ಈ ಊರು 'ಮೇಜೂವೂರು' ಎಂದು ಉಲ್ಲೇಖವಾಗಿರುವುದು ಕಂಡುಬರುತ್ತದೆ. ಈ ಮೇದೂರು ಪರಿಸರದಲ್ಲಿ ದೊರೆಯುವ ಕೆಲವು ಶಾಸನಗಳು ಮತ್ತು ಪ್ರಾಚ್ಯಾವಶೇಷಗಳನ್ನು ಆಧಾರವಾಗಿಟ್ಟುಕೊಂಡು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿ ಹೋದ ಮತ್ತು ಅವರು ಬಿಟ್ಟು ಹೋದಂತಹ ಪ್ರಾಚೀನ ಸ್ಮಾರಕಗಳು, ಶಾಸನಗಳು, ಶಿಲ್ಪಾವಶೇಷಗಳು, ಆ ಪ್ರದೇಶದ ಇತಿಹಾಸವನ್ನು ಹಾಗೂ ರಾಜಕೀಯ, ಆಡಳಿತ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಅಂಶಗಳನ್ನು ಹೊರಚೆಲ್ಲುವ ನಿಟ್ಟಿನಲ್ಲಿ ಈ ಕಿರುಪ್ರಬಂಧವನ್ನು ರಚಿಸಿದ್ದೇನೆ.

ಪ್ರಸ್ತುತ ಸಂಪ್ರಬಂಧದಲ್ಲಿ ಮೇದೂರು ಪರಿಸರದಲ್ಲಿ ಕಂಡುಬರುವ ಪುರಾತತ್ವ ಅವಶೇಷಗಳ ಬಗ್ಗೆ ಅಧ್ಯಯನ, ಭೌಗೋಳಿಕ ಶ್ರೀಮಂತವಾಗಿರುವ ಪ್ರಸ್ತುತ ಪ್ರದೇಶದಲ್ಲಿ ಬೆಟ್ಟಗಳು, ಅರಣ್ಯಸಂಪತ್ತು,

ಕೆರೆಗಳು, ಹಳ್ಳಗಳು, ನೀರಿನಾಸರೆಗಳು, ಜನವಸತಿಗೆ ಅವಶ್ಯಕ ಮಾಡಿಕೊಟ್ಟಿತ್ತೆಂದು ಅಧ್ಯಯನದಲ್ಲಿ ಗಮನಿಸಿದ್ದೇವೆ. ಪ್ರಾಗೈತಿಹಾಸ ಕಾಲದಲ್ಲಿ ಮೇದೂರು ಪರಿಸರ ಹಳೆ ಶಿಲಾಯುಗದ ನೆಲೆಯಾಗಿತ್ತು, ಇತಿಹಾಸ ಕಾಲದಲ್ಲಿ ರಾಷ್ಟ್ರಕೂಟವಂಶ, ಕಳಚೂರಿವಂಶ, ಕಲ್ಯಾಣ ಕಳಚೂರಿಗಳು, ಕಲ್ಯಾಣ ಚಾಲುಕ್ಯರು, ವಿಜಯನಗರ ಸಾಮ್ರಾಜ್ಯ ಮತ್ತು ಪಾಳೆಯಗಾರರು ಇನ್ನೂ ಮುಂತಾದವರು ಈ ಪ್ರದೇಶವನ್ನು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಆಳ್ವಿಕೆ ನಡೆಸಿದ್ದರು. ಇವರಿಗೆ ಸಂಬಂಧಪಟ್ಟ ದೇವಾಲಯಗಳು, ಶಾಸನಗಳು ಇತ್ಯಾದಿ ಅವಶೇಷಗಳು ಇದಕ್ಕೆ ಸಾಕ್ಷಿಯಾಗಿ ನಿಂತಿವೆ. ಇಲ್ಲಿರುವ ಪುರಾತತ್ವ, ಅವಶೇಷಗಳ ಇತಿಹಾಸ ತಿಳಿಯಲು ಸರಿಯಾದ ಆಧಾರಗಳನ್ನು ಹಾಗೂ ಸ್ಥಳೀಯರು ನೀಡಿದ ಮಾಹಿತಿ, ಪ್ರಕಟಗೊಂಡಿರುವ ಲೇಖನಗಳು ಸಂಶೋಧನಾ ಪ್ರಬಂಧಗಳನ್ನು ಆಧರಿಸಿ ಅಧ್ಯಯನ ಮಾಡಲಾಗಿದೆ.

ಪ್ರಸ್ತುತ ಈ ಪ್ರದೇಶ ಪ್ರಾಗೈತಿಹಾಸಕಾಲದ ನೆಲೆಯಾಗಿತ್ತು ಎಂಬುದು ಈ ಹಿಂದಿನ ಸಂಶೋಧನೆಗಳಿಂದ ತಿಳಿದುಬರುತ್ತದೆ. ಇದರ ಆಧಾರದ ಮೇಲೆ ಕ್ಷೇತ್ರಕಾರ್ಯ ಕೈಗೊಂಡಾಗ ಹಳೆಶಿಲಾಯುಗದ, ನವಶಿಲಾಯುಗದ, ಬೃಹತ್ ಶಿಲಾಯುಗಕ್ಕೆ ಸಂಬಂಧಪಟ್ಟ ಅವಶೇಷಗಳು ಮೇದೂರು ಪರಿಸರದಲ್ಲಿ ದೊರೆತಿವೆ. ಈ ಹೊಸ ನೆಲೆಗಳ ಸಂಶೋಧನೆಯಿಂದ ಮೇದೂರು ಪರಿಸರ ಸುತ್ತಮುತ್ತಲಿನ ಪ್ರಾಗೈತಿಹಾಸ ಕಾಲದಲ್ಲಿ ಮಾನವರು ನಿರಂತರ ಚಟುವಟಿಕೆಗಳಿಗೆ ಒಳಪಟ್ಟಿದ್ದರೆಂದು ಸ್ಪಷ್ಟವಾಗುತ್ತದೆ.

ಇಲ್ಲಿ ಪ್ರತಿಯೊಂದು ಗ್ರಾಮದ ಸ್ಥಳನಾಮ ಮತ್ತು ಐತಿಹ್ಯಗಳು ಐತಿಹಾಸಿಕವಾಗಿ ಮಹತ್ವವನ್ನು ಪಡೆದಿದ್ದು, ಇತಿಹಾಸ ರಚನೆಯಲ್ಲಿ ಸಹಾಯಕವಾಗಿವೆ. ಕಲೆ ಮತ್ತು ವಾಸ್ತುಶಿಲ್ಪವನ್ನು ಹೊಂದಿರುವ ಶೈವ, ವೈಷ್ಣವ ಮತ್ತು ಶಾಕ್ತ ದೇವಾಲಯಗಳು ಇಲ್ಲಿ ಕಂಡುಬರುತ್ತವೆ. ಏಕಕೂಟ, ದ್ವಿಕೂಟ, ತ್ರಿಕೂಟ ಮಾದರಿಯ ದೇವಾಲಯಗಳು ಈ ಪ್ರದೇಶದಲ್ಲಿ ಸೇರಿವೆ. ಮೇದೂರಿನ ಮಾಕಳೇಶ್ವರ(ಈಶ್ವರ) ದೇವಾಲಯ ತ್ರಿಕೂಟ ಮಾದರಿಯಾಗಿದ್ದು ಉತ್ತಮ ವಾಸ್ತುಶೈಲಿ ಹೊಂದಿದೆ.

ಮೇದೂರು ಪರಿಸರದಲ್ಲಿ ಶೈವ, ವೈಷ್ಣವ, ಶಾಕ್ತ ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಮೂರ್ತಿಶಿಲ್ಪಗಳು ಕಂಡುಬಂದಿವೆ. ಶೈವ ಸಂಪ್ರದಾಯಕ್ಕೆ ಸಂಬಂಧಿಸಿದ ಶಿವನ ಸಂಕೇತವಾಗಿ ಪೂಜಿಸಲ್ಪಡುವ ವಿವಿಧ ಬಗೆಯ ಬ್ರಹ್ಮಸೂತ್ರಗಳನ್ನೊಳಗೊಂಡ ಶಿವಲಿಂಗಗಳು ಮತ್ತು ನಂದಿ, ಗಣೇಶ, ವೀರಭದ್ರ ಶಿಲ್ಪಗಳಿವೆ. ವೈಷ್ಣವಧರ್ಮದ ವಿಷ್ಣುವಿನ ಶಿಲ್ಪ, ಹನುಮಂತ, ಸೂರ್ಯ ಶಿಲ್ಪಗಳು ದೊರಕಿವೆ. ಶಾಕ್ತ ಸಂಪ್ರದಾಯದ ಶಿಲ್ಪಗಳಲ್ಲಿ ಕಾಳಿ, ಚೌಡೇಶ್ವರಿ, ಸಪ್ತಮಾತೃಕೆ ಶಿಲ್ಪಗಳು ಕಂಡುಬಂದಿವೆ. ಇವುಗಳಿಂದ ಈ ಪ್ರದೇಶದ ಜನರು ತಮ್ಮದೇ ಆದ ದೈವತ್ವವನ್ನು ಸ್ವೀಕರಿಸಿ ಪೂಜಿಸುತ್ತಿದ್ದರೆಂಬುದು ಸ್ಪಷ್ಟ.

ಪ್ರಸ್ತುತ ಪ್ರದೇಶದಲ್ಲಿ ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪಗಳನ್ನು ಕಾಣಬಹುದು. ಇವುಗಳ ಕಲಾಪೋಷಣೆಗೆ ಒಳಗಾಗಿ ರಾಜ ಮಹಾರಾಜರ ಕಾಲದಲ್ಲಿ ರಚಿತಗೊಂಡಿರುವ, ಈ ಪ್ರದೇಶದಲ್ಲಿ

ಎಂಟು ದೇವಾಲಯಗಳು ಕಂಡುಬಂದಿವೆ. ಅದರಲ್ಲಿ ಪ್ರಮುಖವಾಗಿ ಮೇದೂರು ಸಣ್ಣ ಬಸವೇಶ್ವರ ದೇವಾಲಯ, ಈಶ್ವರ ದೇವಾಲಯ, ಬಸವಣ್ಣ ದೇವಾಲಯ, ಸರಸ್ವತಿ ದೇವಾಲಯ, ಹನುಮಂತ ದೇವಾಲಯ, ತಡಕನಹಳ್ಳಿ ಕಲ್ಲಪ್ಪ ದೇವಾಲಯ, ತೋಟಗಂಟಿ, ಹೆಗ್ಗಪ್ಪ ದೇವಾಲಯ ಮೊದಲಾದ ದೇವಾಲಯಗಳಿವೆ. ಇಲ್ಲಿನ ಕೆಲವು ದೇವಾಲಯಗಳು ಇಂದು ಹೊಸರೂಪವನ್ನು ಪಡೆದುಕೊಂಡಿವೆ. ಅಂದರೆ ಸ್ಥಳೀಯ ಜನರಿಂದ ಸಂಘಸಂಸ್ಥೆಗಳಿಂದ ಸುಣ್ಣಬಣ್ಣಗಳನ್ನು ಬಳಿಯಲ್ಪಟ್ಟು, ಮೂಲದಲ್ಲಿ ಇದ್ದಂತಹ ಸೌಂದರ್ಯವು ಕಾಣದಂತಾಗಿದೆ. ಅಷ್ಟೇ ಅಲ್ಲದೆ ಜೀರ್ಣೋದ್ಧಾರವೂ ಸಹ ನಡೆದಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು, ಗರ್ಭಗೃಹ, ಅಂತರಾಳ, ನವರಂಗ ಮತ್ತು ತೆರೆದ ಕಂಬಗಳ ಸಾಲುಗಳುಳ್ಳ, ಪ್ರಾಂಗಣವನ್ನು ಹೊಂದಿದೆ. ದೇವಾಲಯವನ್ನು ಕಠಿಣ ಶಿಲೆಯನ್ನು ಬಳಸಿ ನಿರ್ಮಾಣ ಮಾಡಲಾಗಿದೆ.

ಮೇದೂರು ಪರಿಸರಕ್ಕೆ ಸಂಬಂಧಿಸಿದಂತೆ ಹಲವಾರು ಶಾಸನಗಳು ಕಂಡುಬರುತ್ತವೆ. ಈ ಶಾಸನಗಳು ಹಲವು ಸಂಶೋಧನಾ ಲೇಖನಗಳಲ್ಲಿ ಪ್ರಕಟಗೊಂಡಿದೆ. ಅದರಲ್ಲಿ ಮುಖ್ಯವಾದ ಕೆಲವು ಶಾಸನಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಂಡು ವಿವರಿಸಲಾಗಿದೆ. ಇಲ್ಲಿರುವ ಶಾಸನಗಳು ಬಹುಪಾಲು ದಾನಶಾಸನಗಳಾಗಿವೆ. ದಾನಶಾಸನದ ನಂತರ ಸ್ಥಾನದಲ್ಲಿರುವ ವೀರಗಲ್ಲುಗಳ ಮಹಾಸತಿಗಲ್ಲು ಮತ್ತು ನಿಷೇಧಿಗಲ್ಲುಗಳು, ಮೇದೂರು ಪರಿಸರದಲ್ಲಿ ಅಷ್ಟಾಗಿ ಕಂಡುಬಂದಿಲ್ಲ.

ಹೀಗೆ ಈ ಪ್ರದೇಶದಲ್ಲಿ ಪುರಾತತ್ವ ಅವಶೇಷಗಳು ಲಭ್ಯವಾಗಿದ್ದು, ಇದರ ಅಧ್ಯಯನದಿಂದ ಹೊಸ ಪ್ರಾಗೈತಿಹಾಸದ ನೆಲೆಗಳು ಮತ್ತು ಪುರಾತತ್ವ ಅವಶೇಷಗಳನ್ನು ದಾಖಲಿಸಲಾಗಿವೆ. ಈ ಅಧ್ಯಯನ ವ್ಯಾಪ್ತಿಯಲ್ಲಿ ಮೇದೂರು ಪರಿಸರದಲ್ಲಿ ದೊರೆತಿರುವ ಸಂಪೂರ್ಣವಾದ ಅವಶೇಷಗಳಲ್ಲಿ ಮುಖ್ಯವಾದುವನ್ನು ಮಾತ್ರ ಚರ್ಚಿಸಲಾಗಿದೆ.

ಈ ನಿಟ್ಟಿನಲ್ಲಿ ಈ ಅಧ್ಯಯನ ಕುರಿತು ಹೇಳುವುದಾದರೆ, ಇಲ್ಲಿನ ಶಾಸನ, ದೇವಾಲಯ ಶಿಲ್ಪಗಳು ಹಾಗೂ ಇನ್ನಿತರ ಸ್ಮಾರಕಾವಶೇಷಗಳು, ಪ್ರಾದೇಶಿಕವಾಗಿ ಕನ್ನಡನಾಡಿನ ಸಾಂಸ್ಕೃತಿಕ ಇತಿಹಾಸದ ವಿವಿಧ ಮುಖಗಳ ಅಧ್ಯಯನಕ್ಕೆ ಅಪಾರವಾದ ಕೊಡುಗೆಗಳನ್ನು ಸಲ್ಲಿಸಿರುವುದು ದೃಢವಾಗುತ್ತದೆ. ಇಷ್ಟೆಲ್ಲ ಮಹತ್ವದ ವಿಷಯಗಳನ್ನು ಹೊರಗೆಡಹುವ ಈ ಅವಶೇಷಗಳು ವಿನಾಶದ ಅಂಚಿನಲ್ಲಿವೆ. ಮಾನವನ ಸ್ವಾರ್ಥ, ಮೂಢನಂಬಿಕೆ ಮತ್ತು ನೈಸರ್ಗಿಕ ವಿಕೋಪಗಳಿಗೆ ತುತ್ತಾಗಿ ಕಾಲಗರ್ಭದಲ್ಲಿ ಲೀನವಾಗುತ್ತಿವೆ. ಈ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆಗಳು, ಸಂಘ ಸಂಸ್ಥೆಗಳು ಮತ್ತು ಜನರು ಇವುಗಳ ಸಂರಕ್ಷಣೆಗೆ ಮುಂದಾಗಬೇಕಿದೆ.ಈ ನಿಟ್ಟಿನಲ್ಲಿ ಈ ಪ್ರದೇಶದ ಸಮಗ್ರವಾದ ಅವಶೇಷಗಳನ್ನು ಒಂದೆಡೆ ಕಲೆ ಹಾಕಿ ವಿಶ್ಲೇಷಿಸಿರುವುದು ಪ್ರಥಮ ಪ್ರಯತ್ನವಾಗಿದೆ.

ಅನುಬಂಧಗಳು

೧. ಆಧಾರ ಗ್ರಂಥಗಳು

೨. ನಕ್ಷೆಗಳು

೩. ಛಾಯಾಚಿತ್ರಗಳು

ಪರಾಮರ್ಶನ ಗ್ರಂಥಗಳು

೧. ಅಪರ್ಣ ಕೂ.ಸ., ೧೯೯೯, **ದೇವಾಲಯ ವಾಸ್ತುಶಿಲ್ಪ ಪರಿಚಯ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಅನಂತರಂಗಚಾರ್ ಎಸ್., ೧೯೭೯, **ಕರ್ನಾಟಕ ವಾಸ್ತುಶಿಲ್ಪ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩. ಅಣ್ಣಾರಾಜ ಪಾಟೀಲ, ೧೯೮೩, **ಹಿರೇಕೆರೂರು ತಾಲೂಕು ದರ್ಶನ,** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೪. ಅಮರೇಶ, ೨೦೧೩, **ಬಳಗಾನೂರು ಹೋಬಳಿ ಪರಿಸರ ಸಾಂಸ್ಕೃತಿಕ ಅಧ್ಯಯನ,** ಅಪ್ರಕಟಿತ ಎಂ.ಫಿಲ್.ಕಿರುಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ಕಪನಿಪತಿ ಭಟ್ಟ ಎಚ್.ಸಿ., ೧೯೬೮, **ಶಿಲ್ಪ ಮತ್ತು ನಾಗರಿಕತೆ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೬. ಕರಿಬಸವಯ್ಯ ಆರ್., ೧೯೯೮, **ಹಿರೇಕೆರೂರು ಪ್ರದೇಶದ ಮೂರ್ತಿಶಿಲ್ಪ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೭. ಕೃಷ್ಣಕುಮಾರ ಸಿ.ಪಿ.(ಅನು), ೧೯೭೦, **ಭಾರತೀಯ ಶಾಸನಶಾಸ್ತ್ರ ಪರಿಚಯ,** ಸುರಚಿ ಪ್ರಕಾಶನ, ಮೈಸೂರು.

೮. ಕೊಪ್ಪ ಎಸ್.ಕೆ., ೧೯೯೦, **ತರ್ದವಾಡಿ ನಾಡು: ಒಂದು ಅಧ್ಯಯನ,** ಪ್ರತಿಭಾ ಪ್ರಕಾಶನ, ಇಂಡಿ.

೯. ಗಿರಿಜ ಟಿ., ೨೦೦೧, **ದಾವಣಗೆರೆ ಇದು ನಮ್ಮ ಜಿಲ್ಲೆ,** ನಿಹಾರಿಕ ಪ್ರಕಾಶನ, ದಾವಣಗೆರೆ.

೧೦. ಗೋಪಾಲ್ ಬಿ.ಆರ್.(ಅನು), ೧೯೭೩, **ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ ಸೀರಿಸ್,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೧. ಜ್ಞಾನಾನಂದ ಜಿ., ೨೦೦೨, **ಶಿಲ್ಪದರ್ಶಿ,** ಸಂ.೧–೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨. ಚಿದಾನಂದಮೂರ್ತಿ ಎಂ., ೨೦೦೨, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಸಪ್ನ ಬುಕ್‌ಹೌಸ್, ಬೆಂಗಳೂರು.

೧೩. ತಿಪ್ಪೇಸ್ವಾಮಿ ಪಿ.ಆರ್.(ಪ್ರಸಂ.), ೧೯೯೪, **ಶಿಲ್ಪಕಲಾ ಪ್ರಪಂಚ,** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೧೪. ದೇವರಕೊಂಡಾರೆಡ್ಡಿ, ೨೦೦೨, **ಲಿಪಿಯ ಹುಟ್ಟು ಮತ್ತು ಬೆಳವಣಿಗೆ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೫. ನರಸಿಂಹಮೂರ್ತಿ ಎ.ವಿ., ೧೯೮೫, **ಕರ್ನಾಟಕ ಶಾಸನ ಸಂಪತ್ತು,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೬. ನಂದಿಶ್ವರ ಎನ್., ೨೦೦೫, **ಶಿರಾ ತಾಲೂಕು ದರ್ಶನ,** ಪೂರ್ಣಚಂದ್ರ ತೇಜಸ್ವಿನಿ ಪ್ರಕಾಶನ, ತುಮಕೂರು.

೧೭. ನಂಜಯ್ಯ ಹೊಂಗನೂರು ಎಂ., ೨೦೦೯, **ಸ್ಥಳನಾಮಗಳು,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೮. ನಾಗಯ್ಯ ಜೆ.ಎಂ., ೧೯೯೫, **ಕಲಕೇರಿ,** ಶ್ರೀ ಬಸವೇಶ್ವರ ಜೀರ್ಣೋದ್ಧಾರ ಟ್ರಸ್ಟ್, ಕಲಕೇರಿ ಹಾನಗಲ್ಲು ತಾಲೂಕು, ಧಾರವಾಡ ಜಿಲ್ಲೆ.

೧೯. ನಾಗಯ್ಯ ಜೆ.ಎಂ., ೧೯೯೨, **ಆರನೆಯ ವಿಕ್ರಮಾದಿತ್ಯನ ಶಾಸನಗಳು: ಒಂದು ಅಧ್ಯಯನ,** ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ.

೨೦. ಪರಮಶಿವಮೂರ್ತಿ ಡಿ.ವಿ., ೧೯೯೯, **ಕನ್ನಡ ಶಾಸನ ಶಿಲ್ಪ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೧. ಭೋಜರಾಜ ಪಾಟೀಲ, ೧೯೮೭, **ಹಿರೇಕೆರೂರು ತಾಲೂಕು ದರ್ಶನ,** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೨೨. ಮಜುಂದಾರ್ ಆರ್.ಸಿ.,(ಸಂ), ೧೯೯೯, **ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಸಂಪುಟ ೭,** ಭಾರತೀಯ ವಿದ್ಯಾಭವನ, ಬೆಂಗಳೂರು.

೨೩. ಮಂಜುನಾಥ ಸಿ.ಯು., ೧೯೯೦, **ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨೪. ಮಹದೇವ ಸಿ., ವಾಸುದೇವನ್ ಸಿ.ಎಸ್., ರಮೇಶನಾಯಕ, ೧೯೯೮, **ಕರ್ನಾಟಕ ದೇವಾಲಯ ಕೋಶ: ಹಾವೇರಿ ಜಿಲ್ಲೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೫. ಯಲ್ಲಣ್ಣ ಕೆ., ೨೦೧೩, **ಹಾವೇರಿ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೬. ರಾಮಚಂದ್ರರಾವ್ ಎಸ್.ಕೆ., ೧೯೮೦, **ಭಾರತೀಯ ದೇವಾಲಯಗಳು**, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು.

೨೭. ರಮೇಶ ನಾಯಕ, ೧೯೯೬, **ಹಾವೇರಿ: ಒಂದು ಸಾಂಸ್ಕೃತಿಕ ಅಧ್ಯಯನ**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೮. ಲಕ್ಷ್ಮಣ್ ತೆಲಗಾವಿ(ಸಂ), ೧೯೮೭, **ಹರಿತಿಸಿರಿ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.

೨೯. ವಸು ಎಂ.ವಿ.(ಸಂ), ೨೦೦೧, **ದಕ್ಷಿಣ ಕರ್ನಾಟಕ ಅರಸು ಮನೆತನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೦. ವೇದಾವತಿ ಎಂ., ೨೦೧೩, **ಕಣಕಟ್ಟೆ ಹೋಬಳಿ ಪರಿಸರದ ಸಾಂಸ್ಕೃತಿಕ ಅಧ್ಯಯನ**, ಅಪ್ರಕಟಿತ ಎಂ.ಫಿಲ್.ಕಿರುಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೧. ಸುಂದರ ಅ., ೧೯೭೧, **ಇತಿಹಾಸಪೂರ್ವ ಕರ್ನಾಟಕ ಅಥವಾ ಕರ್ನಾಟಕ ಪ್ರಾಗಿತಿಹಾಸ**, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು.

೩೨. ಸೂರ್ಯನಾಥ ಯು.ಕಾಮತ್, ೧೯೮೪, **ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ ೧**, ಬೆಂಗಳೂರು.

೩೩. ಸೂರ್ಯನಾಥ ಯು.ಕಾಮತ್, ೨೦೧೩, **ಕರ್ನಾಟಕ ಸಂಕ್ಷಿಪ್ತ ಇತಿಹಾಸ**, ಎಂ.ಸಿ.ಸಿ. ಪಬ್ಲಿಕೇಷನ್ಸ್, ಬೆಂಗಳೂರು.


೩೪. ರಾಮಚಂದ್ರರಾವ್ ಸಾ.ಕೃ., ೨೦೧೦, **ಭಾರತದ ದೇವಾಲಯ ನೆಲೆ–ಹಿನ್ನೆಲೆ**, ರಾಮಚಂದ್ರರಾವ್ ಮೆಮೂರಿಯಲ್ ಸಂಸ್ಥೆ, ಬೆಂಗಳೂರು.

೩೫. ಶಾಂತ ನಿರಂಜನ್, ಬಸವರಾಧ್ಯ ಎನ್.(ಸಂ), ೧೯೭೩, **ಅಬ್ಬಲೂರು ಚರಿತೆ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩೬. ಶ್ರೀಧರ್ ಬಿ.ಎಚ್., ೧೯೯೮, **ಭಾರತೀಯ ಮೂರ್ತಿಶಿಲ್ಪ**, ಶಿರಸಿಯ ರಂಗಸಂಗ ಮತ್ತು ಕಲಾರಂಗ, ಶಿರಸಿ.


೩೭. ಶ್ರೀನಿವಾಸ ಪಾಡಿಗಾರ, ೧೯೯೭, **ಪುರಾತತ್ವ ಶಾಸ್ತ್ರ ಪರಿಚಯ**, ರಾಮಾಶ್ರಯ ಪ್ರಕಾಶನ, ಧಾರವಾಡ.

ಮೇದೂರು ಬಸವೇಶ್ವರ ದೇವಾಲಯ ತಲನಕ್ಷೆ






ಮೇದೂರು ಆಂಜನೇಯ ದೇವಾಲಯ ತಲನಕ್ಷೆ




ತಡಕನಹಳ್ಳಿ ಕಲ್ಲಪ್ಪ ದೇವಾಲಯದ ತಲನಕ್ಷೆ





ಮೇದೂರು ಉಡಚಲವ್ವ ದೇವಾಲಯ




ಕರ್ನಾಟಕ ನಕ್ಷೆ



ಬೀದರ್
ಗುಲಬರ್ಗಾ
ಬಿಜಾಪುರ
ಯಾದಗಿರಿ
ಬಾಗಲಕೋಟೆ
ಬೆಳಗಾವಿ
ರಾಯಚೂರು
ಕೊಪ್ಪಳ
ಧಾರವಾಡ
ಗದಗ
ಬಳ್ಳಾರಿ
ಉತ್ತರ ಕನ್ನಡ
ಹಾವೇರಿ
ದಾವಣಗೆರೆ
ಚಿತ್ರದುರ್ಗ
ಶಿವಮೊಗ್ಗ
ಉಡುಪಿ
ಚಿಕ್ಕಮಗಳೂರು
ತುಮಕೂರು
ಚಿಕ್ಕಬಳ್ಳಾಪುರ
ಬೆಂಗಳೂರು
ಕೋಲಾರ
ದಕ್ಷಿಣ ಕನ್ನಡ
ಹಾಸನ
ರಾಮನಗರ
ಮಂಡ್ಯ
ಕೊಡಗು
ಮೈಸೂರು
ಚಾಮರಾಜನಗರ
ತ ಮಿ ಳು ನಾ ಡು
ಉ
ಪ
ಪೂ
ದ

ಹಾವೇರಿ ಜಿಲ್ಲೆಯ ನಕ್ಷೆ


ಧಾರವಾಡ ಜಿಲ್ಲೆ
ಶಿಗ್ಗಾಂವಿ
ಸವಣೂರು
ಗದಗ ಜಿಲ್ಲೆ
ಉತ್ತರ ಕನ್ನಡ ಜಿಲ್ಲೆ
ಹಾನಗಲ್ಲ
ಹಾವೇರಿ
ಬಳ್ಳಾರಿ ಜಿಲ್ಲೆ
ಬ್ಯಾಡಗಿ
ರಾಣಿಬೆನ್ನೂರು
ಹಿರೇಕೆರೂರು
ಶಿವಮೊಗ್ಗ ಜಿಲ್ಲೆ
ದಾವಣಗೆರೆ ಜಿಲ್ಲೆ


ಹಿರೇಕೆರೂರು ತಾಲೂಕು ನಕಾಶೆ



ಈಶ್ವರ ದೇವಾಲಯದ ಭಿತ್ತಿ ಭಾಗ



ಈಶ್ವರ ದೇವಾಲಯದ ಪ್ರವೇಶದ್ವಾರ




ಈಶ್ವರ ದೇವಾಲಯ ಕಂಬ




ಭುವನೇಶ್ವರಿ



ಮಹಿಷಮರ್ದಿನಿ



ನೀಲವ್ವ



ಸಪ್ತಮಾತೃಕೆಯರು



ಮಹಾಸತಿ ಕಲ್ಲು




ಹನುಮಾನ್ ದೇವಾಲಯ




ಹನುಮಾನ್ ದೇವಾಲಯ ಒಳಭಾಗ



ಕಂಬ



ನಾಗಬಂಧ



ಶಿವಲಿಂಗ



ನಂದಿ



ಸೂರ್ಯ



ಗಣೇಶ



ವಿಷ್ಣು



ಹನುಮಾನ್



ಶೈವ ದ್ವಾರಪಾಲಕ



ಉಗ್ರನರಸಿಂಹ



ತಡಕನಹಳ್ಳಿಯ ಬೃಹತ್ ಶಿಲಾಯುಗದ ಗೋರಿಯ ನೆಲೆಗಳು



ದೀಪಸ್ತಂಭ



ನಾಗಶಿಲ್ಪ

ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ